ಕರ್ನಾಟಕ ವಿಧಾನಸಭೆ

ಗುರುವಾರ 10ನೇ ಜುಲೈ 2003 ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11-04 ಗಂಟೆಗೆ ಸಮಾವೇಶಗೊಂಡಿತು
ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ) ರವರು
ಪೀಠವನ್ನು ಅಲಂಕರಿಸಿದ್ದರು

1. ನಿಲುವಳಿ ಸೂಚನೆ – ಮಂಡನೆಗೆ ಅನುಮತಿ ಕೋರಿಕೆ

ವಿಷಯ: ರಾಜ್ಯದಲ್ಲಿ ಉಂಟಾಗಿರುವ ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ಬರದ ಸಲುವಾಗಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ರಾಜ್ಯದಲ್ಲಿ ಇದ್ದಂಥ: ಇರುವಂಥ ಇವತ್ತಿನ ಪರಿಸ್ಥಿತಿಯನ್ನು ನಾವು ನೋಡಿದಾಗ ಬಹಳ ಗಂಭೀರವಾದ ಪರಿಸ್ಥಿತಿ ಇರುವುದನ್ನು ನಾವು ಕಾಣುತ್ತಿದ್ದೇವೆ. ಅದರಲ್ಲಿಯೂ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿದೆ. ರೈತರು, ಕೃಷಿ ಕಾರ್ಮಿಕರು ಬೇರೆ ಬೇರೆ ರಾಜ್ಯಗಳ ದೊಡ್ಡ ದೊಡ್ಡ ನಗರ, ಪಟ್ಟಣಗಳಿಗೆ ಗುಳೆ ಹೋಗುತ್ತಿದ್ದಾರೆ. ಜಾನುವಾರುಗಳಿಗೆ ಮೇವು ಸಿಗುತ್ತಿಲ್ಲ. ಮೇವಿನ ಕೊರತೆ ಆಗುತ್ತಿದೆ, ಮತ್ತು ವಿದ್ಯುತ್ ಅಭಾವ ಇದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ತಾವು ಡಿಸ್‌ಕಶನ್‌ಗೆ ಅಲೋ ಮಾಡಿದ್ದೀರಾ? ಅಲೋ ಮಾಡಿದ್ದರೆ, ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಅಡ್ಜರ್ನ್‌ಮೆಂಟ್ ಮೋಷನ್ ನೋಟಿಸ್ ಅನ್ನು ಅಡ್ಮಿಟ್ ಮಾಡಿ ಕೊಳ್ಳುವುದಕ್ಕೋಸ್ಕರ ಅವರ ಅನಿಸಿಕೆಯನ್ನು ಹೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಮೊದಲು ಹೇಳಲಿಲ್ಲ. ಅದಕ್ಕೆ ನನಗೆ ಗೊತ್ತಾಗಲಿಲ್ಲ. ಅದಕ್ಕೆ ನಾನು ಕೇಳಿದೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮೊದಲೇ ಹೇಳಿದ್ದೇನೆ. ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದು ಅದು ಯಾವ ವಿಷಯದ ಸಲುವಾಗಿ ಎನ್ನುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೇಳಿದ್ದು ವಿಷಯದ್ದಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಾನೂನು ಮಂತ್ರಿಗಳಿಗೆ ಸ್ವಲ್ಪ ತಾಳ್ಮೆಯಿಂದ ಇರುವುದಕ್ಕಾಗುವುದಿಲ್ಲವೇ? ಕಾನೂನು ಮಂತ್ರಿಗಳು ತಾಳ್ಮೆಯಿಂದ ಇರಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ : ಕಾನೂನು ಮಂತ್ರಿ ತಾಳ್ಮೆಯಿಂದ ಇರುತ್ತಾರೆ. ಸಂಸದೀಯ ವ್ಯವಹಾರಗಳ ಮಂತ್ರಿ ತಾಳ್ಮೆಯಿಂದ ಇರುವುದಕ್ಕಾಗುವುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಯಾವ ನಿಯಮದ ಅಡಿಯಲ್ಲಿ ಮಾತನಾಡುತ್ತಿದ್ದಾರೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಕೇಳಿದೆ. ಅವರು ಅದಕ್ಕೆ ಅಲೋ ಮಾಡಿದ್ದರೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ವಿರೋಧ ಪಕ್ಷದ ನಾಯಕರು ಇನ್ನೂ ವಿಷಯವನ್ನೇ ಮಂಡನೆ ಮಾಡಿಲ್ಲ. ಅವರು ವಿಷಯವನ್ನು ಹೇಳುವುದಕ್ಕಾಗಿಯೇ ನಿಂತಿರುವುದು. ತಾವೇಕೆ ತಾಳ್ಮೆ ಕಳೆದು ಕೊಳ್ಳುತ್ತಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ನಿಲುವಳಿ ಸೂಚನೆ ಎಂದು ಅವರು ಹೇಳಲಿಲ್ಲ. ನನಗೆ ಗೊತ್ತಾಗಲಿಲ್ಲ. ಅದಕ್ಕೆ ಕೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಈಗ ಹೇಳುತ್ತಾರೆ. ನೀವು ಏಕೆ ತಾಳ್ಮೆಯನ್ನು ಕಳೆದುಕೊಳ್ಳುತ್ತೀರಿ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ತಾವು ಡಿಸ್‌ಕಶನ್‌ಗೆ ಅಲೊ ಮಾಡಿದ್ದೀರಾ?

ಅಧ್ಯಕ್ಷರು : ಅಲ್ಲ, ಅವರು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಏನು ವಿಷಯ ಮಂಡನೆ ಮಾಡುತ್ತೇನೆ, ಆ ಮೇಲೆ ತಾವು ಅಲೊ ಮಾಡುವುದು ಬಿಡುವುದು...

ಅಧ್ಯಕ್ಷರು : ಒಂದ್ನಿಮಿಷ, ನಾನು ಏನು ಹೇಳುತ್ತೇನೆಂದರೆ, ನೀವು ಒಬ್ಬರು....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾವು ಏನು ನೋಟೀಸ್ ಕೊಟ್ಟಿದ್ದೇವೆ ಅದರ ಬಗ್ಗೆ ಐದು ನಿಮಿಷ ಪ್ರಿಲಿಮಿನರಿ ಸಬ್‌ಮಿಷನ್ ಆದರೂ ಮಾಡುತ್ತೇನೆ.

ಅಧ್ಯಕ್ಷರು : ಆಯಿತು. ಹಾಗಾದರೆ ಐದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಜಗದೀಶ್ ಶೆಟ್ಟರ್ : ಇಡೀ ರಾಜ್ಯದಲ್ಲಿ ಬರಗಾಲ ಮೂರನೇ ವರ್ಷವೂ ಕೂಡ ಕಂಟಿನ್ಯೂ ಆಗುತ್ತಿದೆ. ರೈತರು ಗುಳೆ ಹೋಗುತ್ತಿದ್ದಾರೆ. ಇವತ್ತು ಎಲ್ಲೆಲ್ಲಿ ಬರಗಾಲ ಕಾಮಗಾರಿ ಸರಿಯಾದ ರೀತಿಯಲ್ಲಿ ಆಗಿ ಆ ಕಾಮಗಾರಿಗಳ ಬೆನಿಫಿಟ್ ನಮ್ಮ ರೈತ ಬಾಂಧವರಿಗೆ ಕೃಷಿ ಕಾರ್ಮಿಕರಿಗೆ ಮುಟ್ಟಬೇಕಾಗಿತ್ತು. ಆದರೆ ಆ ಬೆನಿಫಿಟ್ ಅವರಿಗೆ ಮುಟ್ಟಲಿಲ್ಲ. ಬರಗಾಲ ಕಾಮಗಾರಿಯ ಹೆಸರಿನಲ್ಲಿ ಲೂಟಿ ನಡೆಯುತ್ತಿದೆ. ಬರಗಾಲದಿಂದ ರೈತರು ತತ್ತರಿಸುತ್ತಿದ್ದಾರೆ. ಉಪವಾಸದಿಂದ ಸಾಯುತ್ತಿದ್ದಾರೆ. ನಮ್ಮ ಪುಡಾರಿಗಳಿಗೆ ಅಲ್ಲಿದ್ದಂಥ ಅಧಿಕಾರಿಗಳಿಗೆ ಬರಗಾಲ ಎನ್ನುವುದೊಂದು ಹಬ್ಬವಾಗಿದೆ. ಬರಗಾಲದ ಹೆಸರಿನಲ್ಲಿ ಅಧಿಕಾರಿಗಳು, ಪುಡಾರಿಗಳು ಹಬ್ಬದೂಟ ಮಾಡುತ್ತಿದ್ದಾರೆ. ಕೋಟ್ಯಾಂತರ ರೂಪಾಯಿ ಸಹ ಲೂಟಿ ಆಗುತ್ತಿದೆ. ಅದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬರುತ್ತಿಲ್ಲ. ಸಾಕಷ್ಟು ಕಡೆ ನಾವು ಪ್ರವಾಸ ಮಾಡಿದ್ದೇವೆ. ಒಂದು ಕಡೆ ಬಿಸಿಯೂಟದ ಅವಾಂತರವಾಗಿದೆ. ಬಿಸಿಯೂಟವನ್ನು ನಮ್ಮ ವಿದ್ಯಾರ್ಥಿಗಳಿಗೆ ಸರಿಯಾಗಿ ಸರ್ಕಾರದಿಂದ ಕೊಡಲಿಕ್ಕೆ ಆಗಲಿಲ್ಲ. ಇನ್ನೊಂದು ಕಡೆ ಸಿ.ಇ.ಟಿ. ಗೊಂದಲ ಇದೆ. ಮತ್ತೊಂದು ಕಡೆ ಗ್ರಾಮೀಣ ಕೃಪಾಂಕದಿಂದ ಆಯ್ಕೆಯಾಗಿ ಕೆಲಸ ಮಾಡುತ್ತಿದ್ದಂಥ ಅಭ್ಯರ್ಥಿಗಳು ಈಗ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದರ ಜೊತೆಜೊತೆಗೆ ಬರಗಾಲ, ಕುಡಿಯುವ ನೀರಿನ ತೊಂದರೆ, ವಿದ್ಯುತ್ತಿನ ಅಭಾವ, ದಿನನಿತ್ಯ ರೈತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಹಿರೇಬಗನಾಳ ಗ್ರಾಮದಲ್ಲಿ ದಿನನಿತ್ಯ ಲಾಠಿಪ್ರಹಾರ ನಡೆಯುತ್ತಿದೆ. ಇದು ಈಗ ನಮ್ಮ ರಾಜ್ಯದಲ್ಲಿ ಇರುವಂಥ ವಸ್ತುಸ್ಥಿತಿ. ಆದ್ದರಿಂದ ಬರಗಾಲದ ವಿಚಾರವಾಗಿ ಈ ಸದನದಲ್ಲಿ ಚರ್ಚೆಯಾಗಬೇಕೆಂದು ಇವತ್ತು ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಬರಗಾಲ ಕಾಮಗಾರಿಗಳಲ್ಲಿ ಏನೇನು ಅವ್ಯವಹಾರಗಳಾಗಿವೆ ಎನ್ನುವುದರ ಬಗ್ಗೆ ಸಾಕಷ್ಟು ವಿವರಗಳು ನಮ್ಮ ಕೈಯಲ್ಲಿ ಇವೆ. ನಾನೇ ಸ್ವತಃ ಪ್ರವಾಸ ಮಾಡಿದ್ದೇನೆ. ಎಲ್ಲೆಲ್ಲಿ ಕುಡಿಯುವ ನೀರಿನ ಆಭಾವ ಇದೆ

ಎನ್ನುವ ಮಾಹಿತಿಯನ್ನು ತೆಗೆದುಕೊಂಡು ಬಂದಿದ್ದೇನೆ. ಬರದ ಹೆಸರಿನಲ್ಲಿ ಎಲ್ಲೆಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿ ಆಗಿದೆ ಎನ್ನುವುದನ್ನು ಇವತ್ತು ಸದನದ ಮುಂದೆ ಹೇಳಬೇಕಾಗುತ್ತದೆ. ಅದಕ್ಕೆ ಸರ್ಕಾರ ಸ್ಪಷ್ಟೀಕರಣವನ್ನು ಕೊಡಬೇಕಾಗುತ್ತದೆ. ಇದಕ್ಕೆ ಸರ್ಕಾರ ಜವಾಬ್ದಾರಿಯಾಗುತ್ತದೆ. ರೈತರಿಗೆ ಬೆಳೆ ವಿಮೆ ಹಣ ಬಿಡುಗಡೆ ಆಗಲಿಲ್ಲ. ಬಡ್ಡಿ ಮನ್ನಾ ಇನ್ನು ಸರಿಯಾಗಿ ರೈತರಿಗೆ ಸಿಗಲಿಲ್ಲ. ರೈತರಿಂದ ಸಾಲ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ರೈತರುಗಳ ಟ್ರಾಕ್ಟರುಗಳನ್ನು ಸೀಜ್ ಮಾಡುತ್ತಿದ್ದಾರೆ. ಅದೇ ರೀತಿಯಾಗಿ ಬೇರೆ ಬೇರೆ ಆಸ್ತಿಗಳ ಜಪ್ತಿ ಆಗುತ್ತಿದೆ. ರಾಜ್ಯದಲ್ಲಿ ಈ ರೀತಿಯ ಪರಿಸ್ಥಿತಿ ಇರುವಾಗ ಸರ್ಕಾರ ಕೈಕಟ್ಟಿ ಕುಳಿತುಕೊಂಡಿರುವಂಥದ್ದನ್ನು ನಾವು ಇಲ್ಲಿ ನೋಡುತ್ತಿದ್ದೇವೆ. ರೈತರ ಬಗ್ಗೆ ಸರ್ಕಾರಕ್ಕೆ ಎಳ್ಳಷ್ಟೂ ಕೂಡ ಕಾಳಜಿ ಇಲ್ಲದಿರುವುದನ್ನು ನೋಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಡನ್ ಆಗಿ ನರಗುಂದಕ್ಕೆ ಬಂದುಹೋದರು. ಯಾರಿಗೂ ಹೇಳಿರಲಿಲ್ಲ. ಇವತ್ತು ಅಧಿವೇಶನ ಇದೆಯೆಂದು ಹೇಳಿಕೊಂಡು ಮಾನ್ಯ ಖರ್ಗೆಯವರು, ಶ್ರೀ ಶ್ರೀಕಂಠಯ್ಯನವರು, ಶ್ರೀ ಡಿ.ಕೆ. ಶಿವಕುಮಾರ್, ಶ್ರೀ ಎಂ.ವೈ. ಘೋರ್ಪಡೆಯವರು ಹೆಲಿಕಾಪ್ಟರ್ ಮುಖಾಂತರ ಪ್ರವಾಸ ಮಾಡುತ್ತಾರೆ. ಅತಿವೃಷ್ಟಿ ಇದ್ದಾಗ ಹೆಲಿಕಾಪ್ಟರ್‌ನಲ್ಲಿ ಪ್ರವಾಸ ಮಾಡುವುದನ್ನು ನೋಡಿದ್ದೇವೆ. ಆದರೆ ಇವರು ಬರಗಾಲದ ಸಮಯದಲ್ಲಿ ಹೆಲಿಕಾಪ್ಟರ್ ಮುಖಾಂತರ ಪ್ರವಾಸ ಮಾಡಿದರು. ಈ ರೀತಿ ಏಕೆ ಎಂಬುದು ಗೊತ್ತಾಗುತ್ತಿಲ್ಲ. ಅಲ್ಲಿಗೆ ಬರುವುದಕ್ಕೆ ಟ್ರೈನ್ ಇದೆ, ಬಸ್ಸುಗಳು ಇವೆ, ಕಾರುಗಳು ಇವೆ, ನೀವೆಲ್ಲಾ ಕಾರುಗಳ ಮುಖಾಂತರ ಹೋಗಿದ್ದರೆ ಎಲ್ಲೆಲ್ಲಿ ಬರ ಇದೆ ಎನ್ನುವುದು ನಿಮಗೆ ಗೊತ್ತಾಗುತ್ತಿತ್ತು. ಅತಿವೃಷ್ಟಿ ಇದ್ದಾಗ ಹೆಲಿಕಾಪ್ಟರ್ ಮುಖಾಂತರ ನೋಡಬಹುದು. ಅದು ಬಿಟ್ಟು ಬರಗಾಲ ಇರುವಾಗ ಹೆಲಿಕಾಪ್ಟರ್ ಮುಖಾಂತರ ಬರಗಾಲ ನೋಡುತ್ತೀರಿ ಎನ್ನುವುದಾದರೆ, ಇದರಲ್ಲಿ ಸರ್ಕಾರದ ಉದ್ದೇಶ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ವಿಧಾನಸಭೆ ಅಧಿವೇಶನ ಪ್ರಾರಂಭವಾಗುತ್ತದೆಂದು ಹೇಳಿ ನಾಲ್ಕು ದಿವಸದಿಂದ ಪ್ರವಾಸವನ್ನು ಚಾಲೂ ಮಾಡಿದರು. ಇದು ಇವತ್ತಿನ ಪರಿಸ್ಥಿತಿಯಾಗಿದೆ. ಅದಕ್ಕಾಗಿ ನಾವು ಡೀಟೈಲ್ ಆಗಿ ವಿಷಯವನ್ನು ಮಂಡನೆ ಮಾಡಬೇಕಾಗಿದೆ; ಅದಕ್ಕಾಗಿ ಈ ನಿಲುವಳಿ ಸೂಚನೆಯನ್ನು ಮಂಡನೆ ಮಾಡಲಿಕ್ಕೆ ನಮಗೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ದಯವಿಟ್ಟು ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನೀವು ಯಾರೂ ಡಿಸ್ಟರ್ಬ್ ಮಾಡಬೇಡಿ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಪಕ್ಷದ ವತಿಯಿಂದಲೂ ಸಹ ಈ ಬರಗಾಲ ಕಾಮಗಾರಿಯಲ್ಲಿ ಆಗಿರುವ ಅವ್ಯವಹಾರಗಳು, ಭ್ರಷ್ಟಾಚಾರ ಮತ್ತು ದುರುಪಯೋಗ ಮತ್ತೆ ಯಾವ ರೀತಿ ಈ ಒಂದು ಕಾರ್ಯಕ್ರಮವನ್ನು ಸರ್ಕಾರದ ಅಧಿಕಾರಿಗಳು ನಡೆಸಿದ್ದಾರೆ ಅದರ ಬಗ್ಗೆ ಚರ್ಚೆಯಾಗಬೇಕೆಂದು, ಇದು ಮಹತ್ತರವಾದ ವಿಚಾರವಿದೆ. ಅದಕ್ಕಾಗಿ ಇದನ್ನು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಸಹ ತಮಗೆ ಕೇಳಿಕೊಂಡಿದ್ದೇವೆ. ಈಗೇನಾಗಿದೆ ಎಂದರೆ, ರಾಜ್ಯದಲ್ಲಿ 3 ವರ್ಷಗಳಿಂದ ಬರಗಾಲ ಸತತವಾಗಿ ನಡೆಯುತ್ತಿದೆ. ನಿಮ್ಮ ಬರಗಾಲ ಕಾಮಗಾರಿ ಸರಿಯಾಗಿ ಆಗುತ್ತಿಲ್ಲವೆಂದು ಮೂರು ವರ್ಷಗಳಿಂದ ನಾವು ಈ ಸಭೆಯಲ್ಲಿ ಹೇಳುತ್ತಿದ್ದೇವೆ. ಪ್ರತಿವರ್ಷವೂ ದಿನೇದಿನೇ ತೀಕ್ಷ್ಣಗತಿಯಿಂದ ಇದು ಆಗುತ್ತಿದೆ. ಈ ವರ್ಷವೂ ಸಹ ನಮ್ಮ ರಾಜ್ಯದಲ್ಲಿ, ನಾವು ಇಷ್ಟು ಬೆಳೆ ಬೆಳೆಯಬೇಕೆಂದು, ಇಷ್ಟು ಆಹಾರ

ಧಾನ್ಯಗಳನ್ನು ಬೆಳೆಯಬೇಕೆಂದು ನೀವೇನು ಗುರಿ ಇಟ್ಟುಕೊಂಡಿದ್ದಿರಿ, 2–3 ವರ್ಷಗಳಿಂದ ಆ ಗುರಿಯನ್ನು ತಲುಪಲಾಗಲಿಲ್ಲ. ಈ ವರ್ಷ ನಾವು ರಾಜ್ಯದಲ್ಲಿ 104 ಲಕ್ಷ ಟನ್ ಆಹಾರಧಾನ್ಯ ಬೆಳೆಯಬೇಕೆಂಬ ಗುರಿ ಇಟ್ಟುಕೊಂಡಿದ್ದೆವು. ಅದನ್ನು 65 ಲಕ್ಷ ಟನ್‌ಗೆ ಇಳಿಸಲಾಗಿದೆ. ಹೋದ ವರ್ಷ 102 ಲಕ್ಷ ಟನ್ ಬೆಳೆಯಬೇಕೆಂಬುದಿತ್ತು. ಅದು 88 ಲಕ್ಷ ಟನ್ ಮಾತ್ರ ಆಯಿತು.

ಅಧ್ಯಕ್ಷರು : ಅದನ್ನು ಡೀಟೇಲಾಗಿ ಮಾತನಾಡುತ್ತೀರಲ್ಲಾ ಆಗ ಹೇಳಿ.

ಶ್ರೀ ಬಿ. ಸೋಮಶೇಖರ್ : ಜೊತೆಗೆ, ಕೇಂದ್ರ ಸರ್ಕಾರ ಇದುವರೆಗೆ 6 ಲಕ್ಷ 65 ಸಾವಿರ ಮೆಟ್ರಿಕ್ ಟನ್ ಆಹಾರಧಾನ್ಯವನ್ನು ಬಿಡುಗಡೆ ಮಾಡಿದೆ ಮತ್ತು ಅದಕ್ಕೆ ಬೇಕಾದ ಹಣವನ್ನು ಸಹ ಬಿಡುಗಡೆ ಮಾಡಿದೆ. ನಮ್ಮ ಗೃಹ ಮಂತ್ರಿಗಳು ಸುಮಾರು 11 ಲಕ್ಷ ಕಾಮಗಾರಿಗಳನ್ನು ರಾಜ್ಯದಲ್ಲಿ ನಾವು ಕೈಗೆತ್ತಿಕೊಂಡಿದ್ದೇವೆಂದು ಒಂದು ಕಡೆ ಹೇಳಿದ್ದಾರೆ. ಮ್ಯಾನ್ ಡೇಸ್, 10 ಕೋಟಿ ಮ್ಯಾನ್ ಪವರ್ ಸೃಷ್ಟಿ ಮಾಡಿದ್ದೇವೆಂದು ಹೇಳಿದ್ದಾರೆ. ಸುಮಾರು 11 ಲಕ್ಷ 3 ಸಾವಿರ 200 ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಆದರೆ, ನಾವು ಎಲ್ಲಿ ಹೋದರೂ ಯಾವ ಕೆರೆ ಹೂಳು ಎತ್ತಿರುವುದನ್ನೂ ಕೆಲವು ಕಡೆ ಕಾಣುತ್ತಿಲ್ಲ. ಆದರೆ, ನಮ್ಮ ಪಶು ಸಂಗೋಪನೆ ಮಂತ್ರಿಗಳು, ಸುಮಾರು 1,500 ಎಕರೆ ಪ್ರದೇಶದಲ್ಲಿ ನಾವು ಮೇವು ಬೆಳೆಸುತ್ತೇವೆ, ಸುಮಾರು 400 ಕೇಂದ್ರಗಳನ್ನು ಪ್ರಾರಂಭಿಸುತ್ತೇವೆ. ಗೋ ಶಾಲೆಗಳನ್ನು ತೆರೆದು ಎಲ್ಲಾ ಹಸು, ದನಕರುಗಳನ್ನು ರಕ್ಷಣೆ ಮಾಡುತ್ತೇವೆಂದು ಹೇಳಿದರು. ಯಾವ ಯಾವ ತಾಲ್ಲೂಕುಗಳಲ್ಲಿ ಗೋ ಶಾಲೆಗಳನ್ನು ತೆಗೆದಿದ್ದಾರೆಂಬುದು ಗೊತ್ತಿಲ್ಲ. ಹೀಗಾಗಿ, ಕುಡಿಯುವ ನೀರಿಗೆ ಸುಮಾರು 44 ತಾಲ್ಲೂಕುಗಳಲ್ಲಿ ಒಂದು ಹನಿ ಮಳೆಯೂ ಬಿದ್ದಿಲ್ಲ. ಈಗಾಗಲೇ 113 ತಾಲ್ಲೂಕುಗಳಲ್ಲಿ ಸಂಪೂರ್ಣವಾಗಿ ಬರ ಇದೆ. ಇಂಥ ಪರಿಸ್ಥಿತಿಯಲ್ಲಿ ಈ ಸರ್ಕಾರ ಕೇಂದ್ರದಿಂದ ಬಂದಂಥ ಹಣವನ್ನು, ಕೇಂದ್ರದಿಂದ ಬಂದಂಥ ಆಹಾರ ಧಾನ್ಯಗಳನ್ನು ಸರಿಯಾಗಿ ಖರ್ಚು ಮಾಡಿದೆಯೇ? ನಾವು ಅನೇಕ ಕಡೆ ದೂರುಗಳನ್ನು ನೋಡಿದ್ದೇವೆ. ಲೋಕಾಯುಕ್ತರು ಒಂದು ಕಡೆ ಹೋಗಿದ್ದು, ಅಲ್ಲಿ ಅವ್ಯವಹಾರವಾಗಿದೆ ಎಂದು ಸರ್ಕಾರಕ್ಕೆ ವರದಿ ಕಳುಹಿಸಿದ್ದಾರೆ. ನಮ್ಮ ಕೇಂದ್ರದ ಮಂತ್ರಿಗಳು, ನಮ್ಮ ರಾಜ್ಯ ಸರಿಯಾಗಿ ಹಣ ಖರ್ಚು ಮಾಡುತ್ತಿಲ್ಲ. ದುರುಪಯೋಗವಾಗಿದೆ ಎಂದು ಹೇಳಿದ್ದಾರೆ. ಹೀಗೆ ಹೇಳುವುದಾದರೆ, ಲಕ್ಷಾಂತರ, ಕೋಟ್ಯಾಂತರ, ನೂರಾರು ಕೋಟಿ ರೂಪಾಯಿಗಳ ದುರುಪಯೋಗವಾಗಿದೆ. ಈ ವಿಚಾರವನ್ನು ಸಾಧಾರಣ ನಿಯಮಾವಳಿ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಹೊದರೆ ನಾವು ನಮ್ಮ ಕರ್ತವ್ಯಕ್ಕೆ ಲೋಪ ತಂದಂತಾಗಿರುತ್ತದೆ. ಆದುದರಿಂದ, ಇಂಥ ಒಂದು ವಿಚಾರವನ್ನು ಚರ್ಚೆಮಾಡಲು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ, ಸಂಪೂರ್ಣವಾಗಿ ಅವರವರ ಕ್ಷೇತ್ರದಲ್ಲಿ ಏನೇನಾಗಿದೆ ಎಂಬ ಮಾಹಿತಿಯನ್ನು ನಮ್ಮೆಲ್ಲ ಸದಸ್ಯರು ಇಟ್ಟುಕೊಂಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಬೇಕಾಗುತ್ತದೆ. ಈ ಚರ್ಚೆಯನ್ನು ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತಿ ನಿಯಮಾವಳಿ ರೂಪದಲ್ಲಿ ನಾವು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ನಾವೂ ಸಹ ತಮ್ಮನ್ನು ಒತ್ತಾಯ ಪೂರ್ವಕವಾಗಿ ಕೇಳುತ್ತಿದ್ದೇವೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ನಮ್ಮ ವಿಧಾನ ಸಭೆ ನಡವಳಿಕೆಗಳ ಪುಸ್ತಕದಲ್ಲಿ ನಿಯಮ 60 ಅನ್ನು ಸೇರಿಸಿದ ಸನ್ನಿವೇಶದಲ್ಲಿ, ರಾಜ್ಯದಲ್ಲಿರುವ ವಿಶೇಷವಾದ ಗಂಭೀರವಾದ ಪರಿಸ್ಥಿತಿಯನ್ನು ಚರ್ಚೆ ಮಾಡಲಿಕ್ಕೆಂದು ಹೇಳಿ ನಿಯಮ 50 ಅನ್ನು ಮಾಡಿರುವುದು. ಇವತ್ತು

ವಿರೋಧ ಪಕ್ಷದ ನಾಯಕರು ಮತ್ತು ನಾವೆಲ್ಲರೂ ಸಹ ಈ ನಿಯಮ 60ರ ಅಡಿಯಲ್ಲಿ, ರಾಜ್ಯದಲ್ಲಿ ಗಂಭೀರವಾದ ಪರಿಸ್ಥಿತಿ ಉದ್ಭವವಾಗಿದೆ. ನಾವು ರಾಜ್ಯ ಸರ್ಕಾರದ ಮಾತನ್ನು ನಂಬಬೇಕೋ, ಕೇಂದ್ರ ಸರ್ಕಾರದ ಮಾತನ್ನು ನಂಬಬೇಕೋ ಎನ್ನುವ ಸಂಶಯದಲ್ಲಿ ನಾವು ಶಾಸಕರಾಗಿ ಇವತ್ತು ಸಿಕ್ಕಿಹಾಕಿಕೊಂಡಿದ್ದೇವೆ. ಕೇಂದ್ರ ಸರ್ಕಾರ ಒಂದು ಧ್ವನಿಯಲ್ಲಿ ಮಾತನಾಡುತ್ತಿದೆ. ರಾಜ್ಯ ಸರ್ಕಾರ ಮತ್ತೊಂದು ಧ್ವನಿಯಲ್ಲಿ ಮಾತನಾಡುತ್ತಿದೆ. ಏಕೆಂದರೆ, ಬೇರೆ ಬೇರೆ ಅಂಕಿ–ಅಂಶಗಳನ್ನು ಕೊಡುತ್ತಿದ್ದಾರೆ. ರಾಜ್ಯ ಸರ್ಕಾರದವರು ನಮಗೆ ಮೂರೂವರೆ ಲಕ್ಷ ಟನ್ ಆಹಾರ ಧಾನ್ಯ ಬಂದಿರುವುದೆಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬಿಟ್ಟಿದ್ದೇವೆನ್ನುತ್ತಾರೆ. ರಾಜ್ಯ ಸರ್ಕಾರದವರು ನಮಗೆ ಬಂದಿರುವುದು ಕೆಲವೇ ಕೆಲವು ಕೋಟಿ ರೂಪಾಯಿಗಳು ಎಂದು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಬಹಳ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆನ್ನುವ ಮಾತನ್ನು ಹೇಳುತ್ತಾರೆ. ನಾವು ಯಾರನ್ನು ನಂಬಬೇಕು? ಇದರ ಬಗ್ಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಎಷ್ಟು ಆಹಾರ ಧಾನ್ಯಗಳನ್ನು ಕೊಟ್ಟಿದ್ದಾರೆ? ಬರಗಾಲದ ಕೆಲಸಗಳಿಗೆಂದು ಎಷ್ಟು ಕೊಟ್ಟಿದ್ದಾರೆ? ಎಸ್‌ಜಿಆರ್‌ವೈನಲ್ಲಿ ಎಷ್ಟು ಕೊಟ್ಟಿದ್ದಾರೆ? ಜಿಲ್ಲಾ ಪಂಚಾಯತ್ ಆಕ್ಷನ್ ಪ್ಲಾನ್‌ಗೆ ಎಷ್ಟು ಕೊಟ್ಟಿದ್ದಾರೆ? ತಾಲ್ಲೂಕು ಪಂಚಾಯತ್ ಆಕ್ಷನ್ ಪ್ಲಾನ್‌ಗೆ ಎಷ್ಟು ಆಹಾರ ಧಾನ್ಯಗಳನ್ನು ಖರ್ಚು ಮಾಡಿದ್ದಾರೆ? ಸೆಂಟ್ರಲ್ ರಿಲೀಫ್ ಫಂಡ್‌ನಿಂದ ಬಂದಿರುವ ಹಣದಲ್ಲಿ ಕುಡಿಯುವ ನೀರಿಗೆ ಎಷ್ಟು ಹಣ ಬಿಡುಗಡೆ ಮಾಡಿದ್ದಾರೆ? ಇದರ ಅಂಕಿ–ಅಂಶಗಳನ್ನು ಸರ್ಕಾರ ಕೊಡಬೇಕು. ಇವತ್ತು ಏಕೆ ನಾವು ಈ ನಿಯಮ 60ರ ಅಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆನ್ನುತ್ತಿದ್ದೇವೆಂದರೆ, ತಮ್ಮ ಮನಸ್ಸನ್ನು ಒಲಿಸಲು ಏಕೆ ಪ್ರಯತ್ನಿಸುತ್ತಿದ್ದೇವೆಂದರೆ, ವಿರೋಧ ಪಕ್ಷದವರು ನಾವು, ಇವತ್ತು ವಿಶೇಷವಾದ ಗಂಭೀರವಾದ ಪರಿಸ್ಥಿತಿ ಇದೆ. ಇದು ಸಾಮಾನ್ಯವಾದ ಪರಿಸ್ಥಿತಿ ಅಲ್ಲ. ಸರ್ಕಾರ, ನಾಗಪ್ಪನವರ ಕೊಲೆಯಾದ ಸನ್ನಿವೇಶದಲ್ಲಿ ಎದ್ದುನಿಂತು, ಆಯಿತು. ನಾವು ಚರ್ಚೆಗೆ ಸಿದ್ಧರಿದ್ದೇವೆಯೆನ್ನುವ ಮಾತು ಹೇಳಿದರು. ಅದೇ ರೀತಿ, ಸರ್ಕಾರದವರು, ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ಬಂದು ಹೇಳಬಹುದಾಗಿತ್ತು. ಇವತ್ತು ರಾಜ್ಯದಲ್ಲಿ ಗಂಭೀರವಾದ ಪರಿಸ್ಥಿತಿ ಇದೆ. ಅನೇಕ ಮಂತ್ರಿಗಳ ಹೇಳಿಕೆ ಕೊಡುತ್ತಾರೆ. ದೊಡ್ಡ ದೊಡ್ಡ ಮಂತ್ರಿಗಳು ಕೇಂದ್ರ ಸರ್ಕಾರದವರು ಅನ್ಯಾಯ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಹಾಗೆ ಮಾಡಿದ್ದಾರೆ, ಹೀಗೆ ಮಾಡಿದ್ದಾರೆ, ರಾಜ್ಯ ಸರ್ಕಾರಕ್ಕೆ ಮಲತಾಯಿ ಧೋರಣೆ ಮಾಡಿದ್ದಾರೆಂದು ಹೇಳುತ್ತಾರೆ. we are provoking a confrontation against the Government of India ಎಲ್ಲ ಬೆಂಗಳೂರಿನಲ್ಲಿ, ಪತ್ರಿಕೆಗಳಲ್ಲಿ. ಡೆಲ್ಲಿಗೆ ಹೋದಾಗ ಅವರನ್ನು ಹೊಗಳಿಕೊಂಡು ಬರುತ್ತಾರೆ. ಈ ದ್ವಂದ್ವ ಮಾತುಗಳನ್ನು ರಾಜ್ಯ ಸರ್ಕಾರದವರು ಒಂದು ಕಡೆ ಆಡುತ್ತಿದ್ದರೆ, ಮತ್ತೊಂದು ಕಡೆ ತಮ್ಮ ಕ್ಷೇತ್ರದಲ್ಲಿ ಅನುಭವಕ್ಕೆ ಬಂದಿರಲಿಕ್ಕೆ ಸಾಕು. ಬರಗಾಲದ ಸಂದರ್ಭದಲ್ಲಿ ಆಗಿರುವ ಆಹಾರ ಧಾನ್ಯಗಳ, ಹಣದ ದುರುಪಯೋಗ ಏನಿದೆ ಇದರ ಬಗ್ಗೆ ಚರ್ಚೆಯನ್ನು ನಾವು ಮಾಡಬೇಕಾಗುತ್ತದೆ. ಇವತ್ತಿಗೂ ಅದು ನಿಂತಿಲ್ಲ. ದನಕರುಗಳು ಲಕ್ಷಾಂತರ ಸಂಖ್ಯೆಯಲ್ಲಿ ಕಸಾಯಿಖಾನೆಗಳಿಗೆ ಹೋಗುತ್ತಿವೆ. ಇವರು ಗೋ ಶಾಲೆಗಳನ್ನು ಪ್ರಾರಂಭ ಮಾಡಿಲ್ಲ. ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ. ಹಿಂದೆಲ್ಲಾ ಊರಿನಿಂದ ಜಮೀನಿಲ್ಲದ ಜನರು, ಕೂಲಿ ಮಾಡುವ ಜನರು ವಲಸೆ ಹೋಗುತ್ತಿದ್ದರು. ಆದರೆ, ಇವತ್ತು ಪರಿಸ್ಥಿತಿ ಏನಿದೆ ಎಂದರೆ, ಉತ್ತರ ಕರ್ನಾಟಕದಲ್ಲಿ ವಿಶೇಷವಾಗಿ ಊರಿನವರು ಬೇರೆ ಕಡೆಗೆ ಗುಳೆ ಹೋಗುವ ಸನ್ನಿವೇಶ ಇವತ್ತು ಬಂದಿದೆ. ಮತ್ತೆ ತಾವು ಗಮನಿಸಿದ್ದೀರಿ, 20–30 ವರ್ಷಗಳಿಂದ

ಏನು ಪ್ರೀತಿಯಿಂದ ತೋಟಗಾರಿಕೆ ಬೆಳೆಗಳನ್ನು ನಮ್ಮ ರೈತರು ಬೆಳೆಸಿದ್ದರು, ತೆಂಗಿನ ಮರಗಳು ಸುಳಿ ಸಮೇತ ಒಣಗಿಹೋಗಿರುವುದನ್ನು ನಾವು ನೋಡುತ್ತಿದ್ದೇವೆ. ಈ ಸರ್ಕಾರಕ್ಕೆ ಕಣ್ಣಿಲ್ಲವೇ ಎಂಬುದು ನಮಗರ್ಥವಾಗುತ್ತಿಲ್ಲ. ಮಾನ್ಯ ರೇವಣ್ಣನವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾತ್ಕಾಲಿಕ ಉಸ್ತುವಾರಿ ಮಂತ್ರಿಗಳಾಗಿದ್ದರು. ವೀಕ್ಷಣೆಗೋಸ್ಕರ ನನ್ನ ಕ್ಷೇತ್ರಕ್ಕೆ ಅವರು ಬಂದಿದ್ದರು. ಆ ವಿಚಾರದಲ್ಲಿ ನನಗೆ ಅಭಿಮಾನವಿದೆ. ತೆಂಗಿನ ಮರಗಳು ಒಣಗಿ ಹೋಗಿರುವುದನ್ನು ತಾವು ಗಮನಿಸಿರಬೇಕು. 30-40 ವರ್ಷಗಳಿಂದ ಒಣಗಿದ ತೆಂಗಿನ ಮರಗಳು. ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಅಡಿಕೆ ಬೆಳೆಗಳು, ತೆಂಗಿನ ಮರಗಳು ಒಣಗಿ ಹೋಗಿ, 30-40 ವರ್ಷ ರೈತರು ಕಾಯುವ ಪರಿಸ್ಥಿತಿಗೆ ಬಂದಿದೆ. ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ. ಇದೆಲ್ಲವನ್ನೂ ನಾವು ಚರ್ಚೆ ಮಾಡಬೇಕಾದರೆ ಇದಕ್ಕೊಂದು ಗಂಭೀರವಾದ ಸ್ವರೂಪ ಇದೆ. ಇದಕ್ಕೆ ವಿರೋಧ ಪಕ್ಷದವರಷ್ಟೇ ಮಾಡಬೇಕೆಂದೇನಿಲ್ಲ. ಆಡಳಿತ ಪಕ್ಷದವರೂ ಸಹ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಬಹಳ ಮುಖ್ಯವಾಗಿ, this Government for meeting their political ends ಅವರ ರಾಜಕೀಯ ಉದ್ದೇಶಕ್ಕೋಸ್ಕರ, unnecessarily, they are for a confrontation with the union Government. ಕೇಂದ್ರ ಸರ್ಕಾರದ ಜೊತೆಯಲ್ಲಿ ಇದೇ ಒಂದು ಇಷ್ಯೂ ಮಾಡಿಕೊಂಡು ರಾಜಕೀಯವಾಗಿ ಲಾಭ ಪಡೆಯಲು ಕನ್‌ಫ್ರಂಟೇಷನ್‌ಗೋಸ್ಕರ ಹೋಗುತ್ತಿದ್ದಾರೆ. ಇದರ ಅವಶ್ಯಕತೆಯಾದರೂ ಏನಿತ್ತು? ಇವತ್ತು ನಾನು ಇದನ್ನು ಕೇಳಲು ಬಯಸುತ್ತೇನೆ. ನೀವು ಡೆಲ್ಲಿಗೆ ಹೋದಾಗ ಅವರನ್ನು ಹೊಗಳುತ್ತೀರಿ, ನೀವು ಮಾಡಿರುವುದೆಲ್ಲಾ ಸರಿ ಎಂದು ಹೇಳುತ್ತೀರಿ. ಇಲ್ಲಿಗೆ ಬಂದು ಪ್ರೊವೋಕೇಟೀವ್ ಸ್ಟೇಟ್‌ಮೆಂಟ್ ಕೊಡುತ್ತೀರಿ. ಎಷ್ಟು ಕಡೆ ಬರಗಾಲದ ಪರಿಸ್ಥಿತಿಯನ್ನು ನೋಡುವುದಕ್ಕೆ ಹೋಗಿದ್ದಾರೆಂದು ನಿಮ್ಮ ಪಕ್ಷದ ಅಧ್ಯಕ್ಷರು ಪ್ರಧಾನಿಯವರನ್ನು ಅಟ್ಯಾಕ್ ಮಾಡುತ್ತಾರೆ. ನಿಮ್ಮ ಮುಖ್ಯ ಮಂತ್ರಿಗಳು ಎಷ್ಟು ಕಡೆ ಹೋಗಿದ್ದರು? ಅದರ ಬಗ್ಗೆ ನಾವು ತಿಳಿದುಕೊಳ್ಳಲು ಬಯಸುತ್ತೇವೆ. ಇದೆಲ್ಲವೂ ಸಹ ದೀರ್ಘವಾಗಿ ಚರ್ಚೆಯಾಗಬೇಕಾಗುತ್ತದೆ. ಆ ದೃಷ್ಟಿಯಿಂದ ತಾವು ದಯವಿಟ್ಟು ನಾವು 29 ಜನ ಸದಸ್ಯರು ಸಹಿ ಮಾಡಿರುವುದಷ್ಟೇ ಅಲ್ಲ, ಒಟ್ಟಿನಲ್ಲಿ ಚರ್ಚೆಯಾಗಬೇಕು. ಮತ್ತೆ ಇದಕ್ಕೆ ಪರಿಹಾರ ಸಿಗಬೇಕು. ಇಡೀ ರಾಜ್ಯದ ಜನರು ಇವತ್ತು ಈ ಸರ್ಕಾರದ ಕಡೆ ನೋಡುತ್ತಿದ್ದಾರೆ. ನಮ್ಮ ಮೇಲೆ ಒಂದು ದೋಷ ಮಾಡುತ್ತಾರೆ. ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ಓದುತ್ತೀರಿ. ವಿರೋಧ ಪಕ್ಷದವರು ಸತ್ತು ಕುಳಿತಿದ್ದಾರೆ. ಏನೂ ಮಾಡುವುದೇ ಇಲ್ಲ. ಇವರೆಲ್ಲಾ ಆಡಳಿತ ಪಕ್ಷದವರ ಜೊತೆಯಲ್ಲಿ ಶಾಮೀಲಾಗಿದ್ದಾರೆನ್ನುವ ಮಾತುಗಳನ್ನೂ ಸಹ ಪತ್ರಿಕೆಗಳಲ್ಲಿ ನಾವು ಓದಿದ್ದೇವೆ. ಅದರಿಂದಾಗಿ, ಇದರ ತೀವ್ರತೆಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ನಾವು ಇದು ಗಂಭೀರವಾಗಿ ಚರ್ಚೆಯಾಗಬೇಕೆನ್ನುವ ದೃಷ್ಟಿಯಿಂದ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ತಾವು ದಯವಿಟ್ಟು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮನವೊಲಿಸಿ, ತಮ್ಮ ಮನಸ್ಸು ಕರಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಮನಸ್ಸು ಕರಗಿದೆ ಎಂಬ ವಿಶ್ವಾಸ ನನಗಿದೆ. ಇದೆಲ್ಲಾ ಕೇಳಿದ ಮೇಲೆ ಭಯಾನಕವಾದ ದೃಶ್ಯವೆಂದರೆ, ಆ ಉತ್ತರ ಕರ್ನಾಟಕದ ಜನರು ಗೋವಾ, ಮುಂಬೈ, ಪೂನಾಗೆ, ಬೇರೆ ಬೇರೆ ಕಡೆಗೆ ವಲಸೆ ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಅಡಿಕೆ ಮರಗಳು, ತೆಂಗಿನ ಮರಗಳು, ತೋಟಗಾರಿಕೆ ಬೆಳೆಗಳು ಎಲ್ಲವೂ ಸಂಪೂರ್ಣವಾಗಿ ಒಣಗಿ ಹೋಗಿರತಕ್ಕಂಥದ್ದು, ಸಂಪೂರ್ಣವಾಗಿ ನಾಶವಾಗಿ ಹೋಗಿದೆ

ಅದರ ಬಗ್ಗೆ ಪರಿಹಾರ ಕೇಳುವವರೇ ಇಲ್ಲ. ನಿಮ್ಮ ಸರ್ಕಾರದಲ್ಲಿ ಹೇಗಿದೆ ಎಂದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು ಈಗ ಸರ್ಕಾರಿ ನೌಕರರು ಸಹಿತ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಸ್ಥಿತಿಗೆ ನೀವು ತೆಗೆದುಕೊಂಡು ಹೋಗಿದ್ದೀರಿ. ಆದ್ದರಿಂದ ದಯಮಾಡಿ ತಾವು ವಿಷಯದ ಗಾಂಭೀರತೆಯನ್ನು ಅರಿತು ಈ ವಿಚಾರವನ್ನು ನಿಲುವಳಿ ಸೂಚನೆಯ ಮೂಲಕ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ಪ್ರಸ್ತಾವಿಕವಾಗಿ ಎರಡು ಮಾತುಗಳನ್ನು ಆಡಲು ಅವಕಾಶ ಕೊಟ್ಟಿದ್ದೀರಿ, ಪುನಃ ದೀರ್ಘವಾಗಿ ತಾವು ಯಾವಾಗ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡುತ್ತೀರೋ ಆಗ ಉಳಿದಂಥ ವಿಚಾರಗಳನ್ನು ಮಂಡಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ವಿಷಯ ಚರ್ಚೆ ಮಾಡುವುದಕ್ಕೆ ಸರ್ಕಾರದ ಅಭ್ಯಂತರವೇನೂ ಇಲ್ಲ. ಆದ್ದರಿಂದ, ಯಾವ ರೂಪದಲ್ಲಿ ಚರ್ಚೆ ಮಾಡಬೇಕೆಂಬುದು ತಮಗೆ ಬಿಟ್ಟಂಥ ವಿಚಾರ. ಮುಖ್ಯವಾಗಿ ಈಗ ಪ್ರಶ್ನೋತ್ತರ ಕಾಲ, ತಾವು ಪ್ರಶ್ನೋತ್ತರವನ್ನು ಡಿಸ್‌ಪೆನ್ಸ್ ಮಾಡಬೇಕೆಂದು ಅವರೇನು ಕೇಳುತ್ತಿದ್ದಾರೆ ಅದನ್ನು ಡಿಸ್‌ಪೆನ್ಸ್ ಮಾಡಿ ನೇರವಾಗಿ ಚರ್ಚೆಗೆ ತೆಗೆದುಕೊಳ್ಳುತ್ತಿರೋ ಅಥವಾ ಪ್ರಶ್ನೋತ್ತರ ಮುಗಿದ ಮೇಲೆ ಚರ್ಚೆಯನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳುತ್ತಿರೋ ಅದು ನಮಗೆ ಇನ್ನೂ ಗೊತ್ತಾಗಲಿಲ್ಲ. ಆದರೆ ಎಲ್ಲಾ ಮಾನ್ಯ ಹಿರಿಯ ಅನುಭವಿ ಸದಸ್ಯರಿಗೆ ಒಂದು ಮಾತು ಹೇಳುವುದೇನೆಂದರೆ, ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ಸರ್ಕಾರದಿಂದ ಯಾವುದೇ ಬಾದಕವಿಲ್ಲ. ಚರ್ಚೆ ಮಾಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಆದ್ದರಿಂದ ಚರ್ಚೆ ಮಾಡುವುದಕ್ಕೆ ಹೇಗೆ ಎಂದು ಸಮಯ ಕಳೆಯುವುದರ ಬದಲು ಚರ್ಚೆಗೆ ತಾವು ತೆಗೆದುಕೊಳ್ಳಬಹುದು ನನ್ನದೇನೂ ಅಭ್ಯಂತರವಿಲ್ಲ. ಆದರೆ..

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ನಾನು ಒಪ್ಪಿದ್ದೇನೆಂದು ನೇರವಾಗಿ ತಾವು ಹೇಳಿಬಿಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಆ ತೀರ್ಮಾನವನ್ನು ನಾನು ಹೇಳುವುದಲ್ಲ, ಅವರು ಕೊಡಬೇಕಾಗುತ್ತದೆ.

ಅಧ್ಯಕ್ಷರು : ಅದು ನನಗೆ ಸಂಬಂಧಪಟ್ಟಿದ್ದು, ನಿಲುವಳಿ ಸೂಚನೆಯೋ ಅಥವಾ ಬೇರೆ ನಿಯಮಾವಳಿಯೋ ಅದನ್ನು ನಾನು ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಅದಕ್ಕೇ ನಾನು ಹೇಳಿದ್ದು ನೇರವಾಗಿ ಒಪ್ಪಿಕೊಂಡರೆ ಕಾಲಹರಣ ಮಾಡದೇ ನಾವು ಮುಂದುವರಿಯಬಹುದು.

ಶ್ರೀ ಜಗದೀಶ್ ಶೆಟ್ಟರ್ : ತಾವು ನಿಲುವಳಿ ಸೂಚನೆಯ ಮೇರೆಗೆ ಚರ್ಚೆಗೆ ಅವಕಾಶ ಕೊಡಿ, ಪ್ರಶ್ನೋತ್ತರವನ್ನು ಬದಿಗಿಟ್ಟು ಇದಕ್ಕೆ ಅವಕಾಶ ಕೊಡಿ. ದಯಮಾಡಿ ಮೊದಲನೇ ಆದ್ಯತೆಯ ಮೇಲೆ ಇದನ್ನು ತೆಗೆದುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆಯನ್ನು ಆರಂಭ ಮಾಡಬೇಕೆಂದು ನಿಮ್ಮ ನಾಯಕರು ಆಗಲೇ ಹೇಳಿದ್ದಾರಲ್ಲವೆ?

ಶ್ರೀ ಸಿ. ಭೈರೇಗೌಡ : ನನಗೆ ಒಂದು ನಿಮಿಷ ಅವಕಾಶ ಕೊಡಿ. ಸರ್ಕಾರದ ಪರವಾಗಿ ಈ ಚರ್ಚೆಗೆ ಅವರದ್ದು ವಿರೋಧ ಇಲ್ಲ, ಪ್ರಶ್ನೆ ಏನೆಂದರೆ, ಇದನ್ನು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದು.....

ಅಧ್ಯಕ್ಷರು : ಅದನ್ನು ನಾನು ಹೇಳುತ್ತೇನೆ. ಬಿಡಿ. ಮಾನ್ಯ ಚನ್ನಿಗಪ್ಪರವರು ಅವರ ಐದು ಜನ ಸಹಿ ಮಾಡಿದ್ದಾರೆ ಅವರಿಗೂ ಒಂದು ನಿಮಿಷ ಕೊಟ್ಟು ಬಿಡೋಣ.

ಶ್ರೀ ಸಿ. ಭೈರೇಗೌಡ : ಇಷ್ಟರೊಳಗೆ ನಾನು ಮುಗಿಸಿಬಿಡುತ್ತಿದ್ದೆ. ಮೂರನೇ ಬಾರಿ ಈ ರೀತಿಯಾದಂಥ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ....

ಅಧ್ಯಕ್ಷರು : ಆಯಿತು ಸ್ವಾಮಿ ನಿಮ್ಮ ನಾಯಕರು ಅದನ್ನು ಹೇಳಿದಾರಲ್ಲವೆ?

ಶ್ರೀ ಡಿ.ಬಿ. ಚಂದ್ರೇಗೌಡ : ಅಡ್ಮಿಸಿಬಿಲಿಟಿ ಮೇಲೆ ಎಲ್ಲರೂ ಎದ್ದು ನಿಂತರೆ ಹೇಗೆ?

ಅಧ್ಯಕ್ಷರು : ಸರ್ಕಾರದವರು ಒಪ್ಪಿದ್ದಾರೆ ನಾನು ಅನೌನ್ಸ್ ಮಾಡುತ್ತೇನೆ. Don't worry.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕೇಳುವುದಿಷ್ಟೇ ಸ್ವಾಮಿ, ಸರ್ಕಾರಕ್ಕೆ ಯಾವ ಅಭ್ಯಂತರವೂ ಇಲ್ಲ. ಚರ್ಚೆ ಮಾಡುವುದಕ್ಕೆ ಅವರೆಷ್ಟು ಕಾತುರರಾಗಿದ್ದಾರೋ ಎಲ್ಲದಕ್ಕೂ ಉತ್ತರ ಕೊಡುವುದಕ್ಕೂ ನಾವು ಅಷ್ಟೇ ಕಾತುರರಾಗಿದ್ದೇವೆ. ಯಾರು ಕೇಂದ್ರ ಸರ್ಕಾರದ ಜೊತೆ confront ಮಾಡಿದ್ದಾರೋ, ರಾಜ್ಯ ಸರ್ಕಾರದ ಜೊತೆ ಅವರು confront ಮಾಡಿದ್ದಾರೋ, ಎಲ್ಲಿಲ್ಲಿ ಏನು ವ್ಯತ್ಯಾಸ ಆಗಿವೆ. ಎಲ್ಲಾ ಬರಪರಿಹಾರ ಕಾಮಗಾರಿಗಳಲ್ಲೂ ಇಲ್ಲಿರತಕ್ಕಂಥ ಗೌರವಾನ್ವಿತ ಸದಸ್ಯರ ಅಧ್ಯಕ್ಷತೆಯಲ್ಲಿ ಮಾಡಿದ್ದೇವೆ. ಆದ್ದರಿಂದ ಎಲ್ಲವೂ ಬಯಲಿಗೆ ಬರುತ್ತದೆ. ಬರಲಿ ನಮ್ಮದೇನೂ ಅಭ್ಯಂತರವಿಲ್ಲ. ಅದಕ್ಕಾಗಿ ನಾನು ಕೇಳುವುದು ಏನೆಂದರೆ, ಅದಕ್ಕಾಗಿ ಇಲ್ಲಿ ಸಮಯವನ್ನು ಕಾಲಾಹರಣ ಮಾಡುವುದು ಬೇಡ, ತಾವು ಯಾವ ರೂಪದಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ ಆ ರೂಪದಲ್ಲಿ ನಾವು ಸಿದ್ಧರಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ : ನೀವು ನಿಲುವಳಿಸೂಚನೆಗೆ ಒಪ್ಪಿಕೊಂಡರೆ, ಅಧ್ಯಕ್ಷರು ಅದಕ್ಕೆ ಹೌದು ಎಂದು ಬಿಡುತ್ತಾರೆ. ಯಾವ ರೂಪದಲ್ಲಿ ಎಂದು ಏಕೆ ಹೇಳುತ್ತಿರಿ?

ಅಧ್ಯಕ್ಷರು : ಅದು ಅವರು ಒಪ್ಪಿಕೊಳ್ಳುವುದಲ್ಲ ನಾನು ಡಿಸೈಡ್ ಮಾಡಬೇಕಲ್ಲವೆ?

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಈಗಿನ ಪರಿಸ್ಥಿತಿಯಲ್ಲಿ ನಮ್ಮ ನಾಯಕರು ಹೇಳಿದ ಹಾಗೆ ಹಳ್ಳಿ ಕಡೆ ಬರಗಾಲವೆಂದು ತಾವು ಏನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೊಟ್ಟಂಥ ಯಾವುದೇ ಏಯ್ಡ್ಸ್ ಏನು ಕೊಡುತ್ತೀರಿ, ಅದು ಆನೆಗೆ ಮಜ್ಜಿಗೆ ಕೊಟ್ಟಹಾಗೆ. ಇವತ್ತು ಒಂದು ತಾಲ್ಲೂಕಿಗೆ 30 ಲಕ್ಷ, 20 ಲಕ್ಷ ರೂ. ಕೊಡುವುದರಿಂದ ಏನೂ ಬರಗಾಲದ ಕೆಲಸ ಆಗಿಲ್ಲ. ಕುಡಿಯುವ ನೀರಿನ ತೊಂದರೆಯಿಂದಾಗಿ ಇವತ್ತು ಎಲ್ಲಾ ಊರಿನ ಜನ ಬಂದು ಕುಡಿಯುವ ನೀರು ಇಲ್ಲವೆಂದು ಗಲಾಟೆ ಮಾಡಿ ಊರ ಮುಂದೆ ನಿಲ್ಲುವಂಥ ಪರಿಸ್ಥಿತಿ ಬಂದಿದೆ. ಅದೇರೀತಿ ಮೇವಿನ ಬಗ್ಗೆ ಹೇಳುವುದಾದರೆ, ಪ್ರತಿ ತಾಲ್ಲೂಕಿನಲ್ಲಿ 15 ರಿಂದ 20 ಸಾವಿರ ದನಕರುಗಳು ಕಸಾಯಿಖಾನೆಗಳಿಗೆ ಹೊರಟು ಹೋದವು. ಇವತ್ತಿಗೂ ಅದರ ಬಗ್ಗೆ ಯಾವ ಚಕಾರವೂ ಇಲ್ಲ. ಮೇವಿನ ಬಗ್ಗೆ ಮೇವು ಬ್ಯಾಂಕ್ ತೆರೆಯಬೇಕೆನ್ನುವ ಕಾಳಜಿ ಸರ್ಕಾರಕ್ಕಿಲ್ಲ. ನಮ್ಮ ನಾಯಕರು ಹೇಳಿದ ಹಾಗೆ, ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ, ಅಡಿಕೆ ಮರ ತೆಂಗಿನ ಮರ ಹಾಗೂ ಗೃಹ ಉಪಯೋಗಿ ವಸ್ತುಗಳೇನು ಇವತ್ತು ಬೆಳೆದಿದ್ದೇವೋ ಅವೆಲ್ಲವೂ ತಲೆಕೆಳಕಾಗಿವೆ. ಆದುದರಿಂದ, ಈ ಸರ್ಕಾರ ಈ ರಾಜ್ಯದ ಜನತೆಗೆ ಸರಿಯಾದ ರೀತಿಯ ಉತ್ತರ ಕೊಡಬೇಕು. ರೂಲ್ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಹೆಚ್ಚಿನ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರು, ಸೋಮಶೇಖರ್‌ರವರು, ಸಿಂಧ್ಯಾರವರು ಈ ಬರಗಾಲದ ವಿಷಯವನ್ನು ಮಾತನಾಡಬೇಕೆಂದು ಏನು ಹೇಳಿದರು, ಇದು ಗಂಭೀರವಾದ ವಿಚಾರ, ಅದಕ್ಕೆ ಸರ್ಕಾರದವರ ಅಡ್ಡಿ ಏನೂ ಇಲ್ಲ. ನಿಯಮ 69ರ ಅಡಿಯಲ್ಲಿ ನಾನು ಅಲೌ ಮಾಡುತ್ತೇನೆ.

(ಗೊಂದಲ)

ನಿಮಗೆ ಚರ್ಚೆ ಆಗಬೇಕು ಅಲ್ಲವೆ? Adjournment motion ಮುಖಾಂತರವಾಗಲ್ಲಿ ಅಥವಾ ಇನ್ನಾವಾ ರೂಪದಲ್ಲಿ ಚರ್ಚೆಯಾಗಬೇಕು ತಾನೇ...

ಶ್ರೀ ಬಿ. ಸೋಮಶೇಖರ್ : ನಿಯಮಾವಳಿಯಲ್ಲಿ ಕೆಲವು ಮಹತ್ತರವಾದ ವಿಚಾರಗಳು ಬಂದಾಗ ಸಮಸ್ಯೆಗಳು ಬಂದಾಗ, ಈ ಸದನದಲ್ಲಿ ಏನು adjournment motion ಆಗತಕ್ಕಂಥ ಅದನ್ನು ಅಲೌ ಮಾಡತಕ್ಕಂಥ ಪದ್ಧತಿ ಬಂದಿದೆ. ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ. ಇದಕ್ಕಿಂತ ಮಹತ್ತರವಾದ ವಿಚಾರವನ್ನು ನಿಲುವಳಿ ಸೂಚನೆಯಲ್ಲಿ ತರತಕ್ಕಂಥದ್ದು ಬೇರೆ ಯಾವುದಾದರೂ ಇದೆಯೇ? ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ಬಂದಿದೆ. ನೂರಾರು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ. ಲಕ್ಷಾಂತರ ಜಾನುವಾರುಗಳು ಕಸಾಯಿ ಖಾನೆಗಳಿಗೆ ಹೋಗುತ್ತಿವೆ. 60 ಕೋಟಿ ರೂಪಾಯಿ ಬೀಜವನ್ನು ಖರೀದಿಸುತ್ತೇವೆಂದು ಹೇಳಿರತಕ್ಕಂಥದ್ದು, ಓಪನ್ ಮಾರ್ಕೆಟ್‌ನಲ್ಲಿ 1250 ರೂಪಾಯಿಗೆ ಸಿಕ್ಕುತ್ತಿದ್ದರೆ ನೀವು ಸಬ್ಸಿಡಿ ರೂಪದಲ್ಲಿ 1600 ರೂಪಾಯಿಗಳಿಗೆ ಕೊಂಡುಕೊಳ್ಳುತ್ತಿದ್ದೀರಿ ಈ ಹಣ ಎಲ್ಲಿಗೆ ಹೋಗುತ್ತಿದೆ? ** ಎಂದು ಸಾರ್ವಜನಿಕರಿಂದ ದೂರು ಬರುತ್ತಿದೆ. ಇಂಥ ವಿಚಾರಗಳನ್ನು ನಾವು ತೆಗೆದುಕೊಳ್ಳದಿದ್ದರೆ ಹೇಗೆ?... ಅದನ್ನು ನಾವು ಪ್ರೂವ್ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ನೋಡಿ ಎಲ್ಲರೂ ಮಾತನಾಡುತ್ತಾರೆ, Don't take down.

ಶ್ರೀ ಬಿ. ಸೋಮಶೇಖರ್ : ಯಾರ ಜೇಬಿಗೆ ಹಣ ಹೋಗಿದೆ, ಎಲ್ಲಿಗೆ ಹೋಗಿದೆ ಅದನ್ನೆಲ್ಲಾ ನಾವು ಹೇಳುತ್ತೇವೆ ನೀವು ಇದನ್ನು ತೆಗೆದುಕೊಳ್ಳಿ.

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) : ಅದನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು : ಪಾರ್ಟಿವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಅವಕಾಶವಿಲ್ಲ. ಆ ಪದವನ್ನು ವಾಪಸ್ಸು ಪಡೆಯಬೇಕು.

ಶ್ರೀ ಎ. ಮಿನಿಯಪ್ಪ : ದಯಮಾಡಿ ಆ ಪದವನ್ನು ವಾಪಸ್ ತೆಗೆದುಕೊಳ್ಳಬೇಕು. ಚರ್ಚೆಗೆ ನಾವು ರೆಡಿ ಇದ್ದೇವೆ, ಚರ್ಚೆಗೆ ಯಾರೂ ಹಿಂದಕ್ಕೆ ಹೋಗುತ್ತಿಲ್ಲ...

ಅಧ್ಯಕ್ಷರು : ಆಯಿತು. ಆ ಪದಗಳನ್ನು ಕಡತದಿಂದ ತೆಗೆದು ಹಾಕಿ.

Sri D.B. Chandre Gowda (Minister for Law and Parliamentary Affairs) : I have a serious objection for taking up

---

** ಸನ್ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

this as an adjournment motion. ನಿಲುವಳಿ ಸೂಚನೆಯ ಬಗ್ಗೆ ಆದರೆ ಒಂದು ವೇಳೆ ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡುವುದಾದರೂ ಪ್ರಶ್ನೋತ್ತರ ಆದ ಮೇಲೆಯೇ ಚರ್ಚೆ ಮಾಡಬೇಕು. That is the Rule.

(ಗೊಂದಲ)

ಶ್ರೀ ಎನ್. ಸಂಪಂಗಿ : ಮೊದಲು ಪ್ರಶ್ನೋತ್ತರ ಆಗಲಿ.

(ಗೊಂದಲ)

ಅಧ್ಯಕ್ಷರು : ನೀವು ಹೇಳುವುದನೆಲ್ಲಾ ಹೇಳಿದ್ದಿರಿ ಅವರು ಹೇಳಿದ್ದರೆ ಮುಂದಿನ ವಿಚಾರ ನನಗೆ ಬಿಡಿ..

ಶ್ರೀ ಬಿ. ಸೋಮಶೇಖರ್ : ಇದು ತುಂಬಾ ಮಹತ್ತರವಾದ ವಿಷಯವಾಗಿರುವುದರಿಂದ ಮೊದಲು ಇದನ್ನು ತೆಗೆದುಕೊಳ್ಳಬೇಕು. ಇದಕ್ಕೆ ಬೇಕಾದಷ್ಟು ನಿದರ್ಶನಗಳು ಇವೆ. ಪ್ರಶ್ನೋತ್ತರವೇಳೆಯನ್ನು ಬದಿಗೊತ್ತಿ ಇದನ್ನು ತೆಗೆದುಕೊಂಡಿರತಕ್ಕಂಥ ಎಷ್ಟೋ ನಿದರ್ಶನಗಳು ಇವೆ. ಅನೇಕ ಸಂದರ್ಭಗಳಲ್ಲಿ ಪ್ರಶ್ನೋತ್ತರ ವೇಳೆಗಿಂತ ಮೊದಲೇ ತೆಗೆದುಕೊಂಡಿರುವುದರಿಂದ, ಇದು ಮಹತ್ತರವಾದ ವಿಚಾರ ಆಗಿರುವುದರಿಂದ ದಯಮಾಡಿ ಇದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಮಾನ್ಯ ಸೋಮಶೇಖರ್ ಅವರೇ, ತಮಗೆ ಸಂಸದೀಯ ಅನುಭವ ಸುಮಾರು ವರ್ಷಗಳಿಂದ ಇದೆ. ತಾವು ಮಾತುಗಳು ಉಪಯೋಗಿಸುವಾಗ ಒಳ್ಳೆಯ ಗೌರವಯುತವಾದ ಮಾತುಗಳನ್ನು ಉಪಯೋಗಿಸಿ ಅಷ್ಟು ಸಾಕು. That's all I can say.

ಶ್ರೀ ಸಿ. ಭೈರೇಗೌಡ : ನಾವು ಏಕೆ ಪ್ರಶ್ನೋತ್ತರ ವೇಳೆಗಿಂತ ಮೊದಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆಂದರೆ, ಕಳೆದ ಮೂರು ವರ್ಷದಿಂದ ಸತತವಾಗಿ ಬರಗಾಲ ಬಂದಿದೆ..

(ಗೊಂದಲ)

Mr. Speaker : No. I will give a Ruling.

ಶ್ರೀ ಎನ್. ಸಂಪಂಗಿ : ಮೊದಲು ಪ್ರಶ್ನೋತ್ತರ ಆಗಲಿ.

ಶ್ರೀ ಸಿ. ಭೈರೇಗೌಡ : ಜನ ಯಾವ ರೀತಿಯಲ್ಲಿ ಚರ್ಚೆ ನಡೆಯುತ್ತಿದೆ. ಸರ್ಕಾರ ಯಾವ ರೀತಿ ಉತ್ತರ ಕೊಡುತ್ತಿದೆ ಎಂದು ನೋಡುತ್ತಿದ್ದಾರೆ. ಇದಕ್ಕೆ ಸರ್ಕಾರದ ಉತ್ತರವೇನು? ಯಾವ ರೀತಿಯಾಗಿ ನಮ್ಮ ಸಮಸ್ಯೆಗಳು ಅಲ್ಲಿಗೆ ಬರುತ್ತವೆ ಎನ್ನತಕ್ಕಂಥ ವಿಚಾರದಲ್ಲಿ ರಾಜ್ಯದ ಜನತೆ ಕಾತುರದಿಂದ ನೋಡುತ್ತಿದ್ದಾರೆ. ಆದ್ದರಿಂದ ವಿಶೇಷ ಸಂದರ್ಭವಿರುವುದರಿಂದ, ಪ್ರಶ್ನೋತ್ತರವನ್ನು ಬದಿಗಿಟ್ಟು ದಯಮಾಡಿ ಇದಕ್ಕಿಂತ ಮೊದಲೇ ನಿಯಮ 60ರ ಕೆಳಗೆ ನಾವು ಏನು ಸೂಚನೆ ಕೊಟ್ಟಿದ್ದೇವೆ ಅದನ್ನು ಕೈಗೆತ್ತಿಕೊಳ್ಳಬೇಕು. ಇದಕ್ಕೆ ಒಂದು ಮಹತ್ವ ಬರುತ್ತದೆ ಜನರು ಆ ರೀತಿಯಾದಂಥ ಒಂದು ನಿರೀಕ್ಷೆಯಲ್ಲಿ ಇದ್ದಾರೆ. ಜನಗಳ ನಿರೀಕ್ಷೆಗೆ ನಾವು ತಲುಪಬೇಕಾದದ್ದು ಜನಪ್ರತಿನಿಧಿಗಳಾಗಿ ನಮ್ಮ ಕರ್ತವ್ಯ, ಆದ್ದರಿಂದ ಆ ಕೆಲಸ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಚಂದ್ರೇಗೌಡರವರು ಒಪ್ಪಿಕೊಂಡಿದ್ದಾರೆ, ಚರ್ಚೆ ಮಾಡಲಿಕ್ಕೆ ನಮ್ಮದೇನೂ ತಕರಾರು ಇಲ್ಲ, ಇದು ಗಂಭೀರವಾದ ವಿಷಯ ಅದಕ್ಕಾಗಿ ಇದನ್ನು

ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆಂದು ಅವರು ಹೇಳಿದ್ದಾರೆ. ಹೀಗಾಗಿ ಇವತ್ತು ನಾವು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇವೆ. ನಿಲುವಳಿ ಸೂಚನೆಯ ರೂಪದಲ್ಲಿ ಇದನ್ನು ಪ್ರಾರಂಭ ಮಾಡೋಣ. ಪ್ರಶ್ನೋತ್ತರ ಕಾಲದ ಅವಶ್ಯಕತೆ ಇಲ್ಲ, ಹಿಂದೆ ನಡೆದಿರುವ ಸದನದಲ್ಲಿ ಸಾಕಷ್ಟು

11.30 ಪಿ.ಎಂ.

ಸಂಪ್ರದಾಯಗಳು ಇವೆ. ಪ್ರಶ್ನೋತ್ತರ ಅವಧಿಯನ್ನು ಬದಿಗಿಟ್ಟು ನಿಲುವಳಿ ಸೂಚನೆ ಪ್ರಾರಂಭವಾಗಿರುವುದು ಸಾಕಷ್ಟು ಉದಾಹರಣೆಗಳು ಇವೆ. ಅದಕ್ಕಾಗಿ ಇದನ್ನು ನಿಲುವಳಿ ಸೂಚನೆಯ ರೂಪದಲ್ಲಿ ತಾವು ಚರ್ಚೆಗೆ ತೆಗೆದುಕೊಳ್ಳಬೇಕು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಏಕೆಂದರೆ ತಾವು ಕಾನೂನು ಪುಸ್ತಕಗಳನ್ನು ಬಿಡಿಸುತ್ತಿದ್ದೀರಿ, ಕಾನೂನು ಪುಸ್ತಕದ ಮುಖಾಂತರ ತಾವು ಏನು ಆದೇಶವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ ಅದನ್ನು ಕೊಡುತ್ತೀರಿ ಅದು ನಮಗೆ ಗೊತ್ತಿದೆ. ಆದರೆ ಇವತ್ತಿನ ವಸ್ತು ಸ್ಥಿತಿಯ ವಿಚಾರಗಳ ಹಿನ್ನೆಲೆಯಲ್ಲಿ ಮತ್ತು ಅದರ ಗಂಭೀರತೆಯ ಹಿನ್ನೆಲೆಯನ್ನು ಕೂಡ ನಾವು ಅರ್ಥಮಾಡಿಕೊಳ್ಳಬೇಕು. ಬರೀ ಕಾನೂನು ಪುಸ್ತಕಗಳ ಜೊತೆ ನಾವು ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಕೂಡ ಸ್ಪಂದನೆ ಮಾಡತಕ್ಕಂಥ ಅವಶ್ಯಕತೆಗಳೂ ಕೂಡ ಇವೆ. ಈಗಾಗಲೇ ಮಾನ್ಯ ಸೋಮಶೇಖರವರು ಉಲ್ಲೇಖ ಮಾಡಿದ ರೀತಿಯಲ್ಲಿ ಹಲವಾರು ಸಮಸ್ಯೆಗಳು......

ಶ್ರೀ ಡಿ.ಬಿ. ಚಂದ್ರೇಗೌಡ : ಹಾಗದರೆ ಕಾನೂನು ಪುಸ್ತಕದಲ್ಲಿ ಇರುವುದನ್ನು ಪಾಲನೆ ಮಾಡುವುದು ಬೇಡವೇ?

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಚಂದ್ರೇಗೌಡರೇ ಕಾನೂನು ಪುಸ್ತಕಗಳು ಬೇಕು, ಬೇಡವೆಂದು ಹೇಳುವುದಿಲ್ಲ. ಬರೀ ಕಾನೂನು ಪುಸ್ತಕಗಳನ್ನು ಹಿಡಿದುಕೊಂಡು ನೀವು ಏನು ಮಾಡಿದ್ದೀರಿ ಎಂಬುದು ಇಡೀ ರಾಜ್ಯದಲ್ಲಿ ಗೊತ್ತಾಗುತ್ತಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಹಾಗಾದರೆ ಕಾನೂನು ಪುಸ್ತಕಗಳನ್ನು ಸುಟ್ಟು ಹಾಕಿಬಿಡಿ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದಕಾರಣ ಕಾನೂನನ್ನು ಬದಿಗಿಟ್ಟು ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು : ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. Assending to Kaul and Shakder, even if the leave is granted, hour at which motion is to be taken up ಅನ್ನೊದಕ್ಕೆ an adjournment motion to the moving of which leave of the Housed has been granted is taken up at sixteen hours that means 4:00 P.M. This is No.1. ಎರಡನೇಯದು Rulingsನಲ್ಲಿ ಏನಿದೆ ಎಂದರೆ Adjournment motion shall not be resorted to when there are other means of ventilating grievances.

On 20th December, 1956 the Hon'ble Member Sri Mulka Govinda Reddy gave notice of an adjournment motion to discuss the

soaring prices of food grains in Mysore State. On that day the motion of Thanks also was to be discussed. When the Hon'ble Member sought the permission of the Hon'ble Speaker to move his adjournment motion, the Hon'ble Speaker gave the following ruling:

"There are other avenues open to the Member to ventilate his grievances. The Hon'ble Member can ventilate his grievances just now on the motion of thanks. I have also asked the Secretary to convey to the Member to Table a short notice question on this subject. Though when there are other avenues.... Please hear me.

ಶ್ರೀ ಜಗದೀಶ್ ಶೆಟ್ಟರ್ : ದಯಮಾಡಿ ತಾವು ಈ ಸದನದಲ್ಲಿ ನಡೆದಿರುವ ಸಂಪ್ರದಾಯವನ್ನು ನೋಡಬೇಕು.

ಅಧ್ಯಕ್ಷರು : ಕೌಲ್ ಅಂಡ್ ಶೆಕ್ದರ್ ಪುಸ್ತಕ ಎಂದರೆ ನಮಗೆ ಭಗವದ್ಗಿತೆ ಇದ್ದಂತೆ, It is just like a Bhagavath Geetha. We will take up at 4 o' clock. ತಾವು ದಯವಿಟ್ಟು ಇಲ್ಲಿ ಕೇಳಿ. ರೂಲ್ 69 ಮೂಲಕ 3–4 ದಿವಸಗಳವರೆಗೆ ನಾವು ಡಿಸ್‌ಕಸ್ ಮಾಡಿಕೊಂಡು ಬಂದಿರುತ್ತೇವೆ. I will allow under Rule 69. ಈಗ ಕ್ವೆಶ್ಚನ್ ಅವರ್ ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಾವು ತಮ್ಮ ರೂಲಿಂಗ್ ಅನ್ನು ರೀಕನ್ಸಿಡರ್ ಮಾಡಬೇಕು.

Mr. Speaker : I will allow the discussion under Rule 69.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಾವು, ರೂಲಿಂಗ್ ಅನ್ನು ರೀಕನ್ಸಿಡರ್ ಮಾಡಿ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಚರ್ಚೆಗೆ ಅವಕಾಶ ಮಾಡಿಕೊಡಿ, ಸಾಕಷ್ಟು ಪ್ರಾಮುಖ್ಯವಾದ ವಿಷಯಗಳು ಇವೆ.

ಅಧ್ಯಕ್ಷರು : ಬೇಡಿ, ಇದಕ್ಕಿಂತ ಮುಖ್ಯವಾದ ವಿಷಯಗಳಿದ್ದಾಗ ನಿಯಮಾವಳಿ 69ರ ಮೂಲಕ ನಾವು ಅಲೋ ಮಾಡಿದ್ದೇವೆ. ಕ್ವೆಶ್ಚನ್ ಅವರನ್ನು ತೆಗೆದುಕೊಳ್ಳಬೇಕೋ ಅಥವಾ ಬೇಡವೋ ಎನ್ನುವುದರ ಬಗ್ಗೆ ತಾವು ತೀರ್ಮಾನವನ್ನು ಮಾಡಿ. ಏಕೆಂದರೆ ಅನೇಕ ಸದಸ್ಯರು ಪ್ರಶ್ನೆಗಳನ್ನು ಕೇಳಿರುತ್ತಾರೆ. ಬೇರೆ ಸಮಯದಲ್ಲಿ ಕೇಳುವುದಕ್ಕೆ ಅವರಿಗೆ ಯಾವ ಅವಕಾಶವಿರುವುದಿಲ್ಲ.

ಶ್ರೀ ಬಿ.ಎಸ್. ಬಚ್ಚೇಗೌಡ : ಇನ್ನು ತಾವು ರೂಲಿಂಗ್ ಕೊಟ್ಟಿರುತ್ತೀರೋ ಅಥವಾ ಇಲ್ಲವೋ ಎನ್ನುವುದನ್ನು ಹೇಳಬೇಕು.

ಅಧ್ಯಕ್ಷರು : ರೂಲಿಂಗ್‌ನ್ನು ಕೊಟ್ಟಿರುತ್ತೇನೆ. I am allowing under Rule 69.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, I have got a point of order. What is the difference between Rule 60 and 69? ನಾವು ನಿಯಮ 60ರ ಮೇರೆಗೆ ಅನೇಕ ನೋಟೀಸ್‌ಗಳನ್ನು ಕೊಟ್ಟಾಗ ನೀವು ಕನ್‌ವರ್ಟ್ ಮಾಡಿದ್ದೀರಿ. ಅಲ್ಲಿ ನಮ್ಮ

ನಿಯಮಾವಳಿ ಪ್ರಕಾರ ಎರಡನ್ನು ಡಿಫರೆನ್‌ಶೇಷನ್ ಕರೆಕ್ಟಾಗಿ ಮಾಡಿ ಹಿಂದೆ ರೂಲ್ಸ್‌ನ್ನು ಮಾಡಿದ್ದಾರೆ. ರೂಲ್ಸ್ 60 ಒಳಗಡೆ ಸಾರ್ವಜನಿಕವಾಗಿ ಅತ್ಯಂತ ಮಹತ್ವವಾದ ನಿರ್ದಿಷ್ಟವಾದ ಒಂದು ಉದ್ದೇಶಕ್ಕಾಗಿ ಚರ್ಚೆ ಮಾಡುವುದಕ್ಕೆ ಇರುತ್ತದೆ. 69 ರೂಲ್ಸ್ ಇರುವುದು ಏತಕ್ಕೆಂದರೆ, ಜರೂರು ವಿಷಯದ ಬಗಗೆ ಮಾತ್ರ ಇದೆ. ಜರೂರು ವಿಷವೆಂದರೆ, ಚರ್ಚೆ ಮಾಡಬೇಕು ಸಾಯಂಕಾಲ ಸರ್ಕಾರದಿಂದ ಉತ್ತರವನ್ನು ಪಡೆಯಬೇಕು ಅದನ್ನು ಎಫೆಕ್ಟಿಗೆ ಕೊಡಬೇಕು ಜರೂರು ವಿಷಯವಿದ್ದರೆ ಅದನ್ನು ರೂಲ್ 69ರ ಕೆಳಗೆ ಮಾಡಬೇಕಾಗುತ್ತದೆ. ಅದಕ್ಕೆ ಇಬ್ಬರು ಎಂಡಾರ್ಸ್ ಮಾಡಬೇಕಾಗುತ್ತದೆ. ರೂಲ್ 60ರ ಒಳಗಡೆ ಅಂದರೆ ನಾವು ನಿರ್ದಿಷ್ಟವಾದ ಒಂದು ವಿಷಯದ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದೇವೆ. ನಿರ್ದಿಷ್ಟವಾಗಿ ಅಂದರೆ ಮಹತ್ವವಾದ ವಿಷಯದ ಬಗ್ಗೆ ನಿರ್ದಿಷ್ಟವಾಗಿ ಮಾತನಾಡುತ್ತಿದ್ದೇವೆ. ನಾನು ಪಾಯಿಂಟ್ ಆಫ್ ಆರ್ಡರ್ ಏನು ಕೇಳುತ್ತಿದ್ದೇನೆಂದರೆ ನನಗೆ ಆಶ್ಚರ್ಯವಾಗುತ್ತದೆ....

Sri D.B. Chandre Gowda : There cannot be a point of order.

Sri K.B. Mallikarjuna : I have got a point of order. I am very sorry Sir, I want a ruling.

(ಗೊಂದಲ)

Mr. Speaker : Mr. Mallikarjuna, the Speaker has got power to change any rule. please excuse me.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, ಪಾಯಿಂಟ್ ಆಫ್ ಆರ್ಡರ್ ಯಾವುದೆಂದರೆ, ನನಗೆ ರೂಲ್ 60ರ ಬಗ್ಗೆ ಪಾಯಿಂಟ್ ಆಫ್-ಆರ್ಡರ್ ಬೇಕು.

ಅಧ್ಯಕ್ಷರು : ಆಯಿತು ಬಿಡಿ. ರೂಲ್ 69ರ ಪ್ರಕಾರ ಅನೇಕ ಸಲ ನಾವು ಇದಕ್ಕಿಂತ ಮಹತ್ವವಾದ ವಿಷಯಗಳನ್ನು ಎರಡು–ಮೂರು ದಿವಸ ಚರ್ಚೆ ಮಾಡಿರುತ್ತೇವೆ. ಅದಕ್ಕಾಗಿ ನಾವು ಸುಮ್ಮನೆ ಅದರ ಮೇಲೆ ಕಾಲವನ್ನು ಕಳೆಯುವುದು ಬೇಡ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ರೂಲ್ 60 ಎಂದರೆ ನಾವು ಯಾವಾಗ ಕೊಟ್ಟರೂ ನೀವು ಕನ್‌ವರ್ಟ್ ಮಾಡುತ್ತಿದ್ದೀರಿ. ನಾವು ಕಳೆದ ವಿಧಾನಸಭೆಗೆ ಪ್ರವೇಶ ಮಾಡಿದ ಮೇಲೆ ರೂಲ್ 60 ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ. ನಾವು ಯಾವ ವಿಷಯದ ಮೇಲೆ ಇಂತಹ ವಿಷಯಗಳನ್ನು ರೂಲ್ 60ದಲ್ಲಿ ತರಬೇಕು ಎನ್ನುವುದರ ಬಗ್ಗೆ ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ ಅಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ರೂಲಿಂಗ್ ಕೊಡುವುದಕ್ಕೆ ಮೊದಲು ಹೇಳಬೇಕಾಗಿತ್ತು ರೂಲಿಂಗ್ ಕೊಟ್ಟ ಮೇಲೆ ಅಧ್ಯಕ್ಷರು ಕೊಟ್ಟಿರುವ ರೂಲಿಂಗ್‌ಅನ್ನು ಕ್ವೊಶ್ಚನ್ ಮಾಡಿದರೆ ಹೇಗೆ..

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.

ಅಧ್ಯಕ್ಷರು : ದಯವಿಟ್ಟು ಕೇಳಿ. ಇದರ ಮೇಲೆ ನಾವು ಸುಮ್ಮನೆ ಕಾಲವನ್ನು ಕಳೆಯುವುದು ಬೇಡ. You can commence now, I have no objection. Mr. Shettar, *you* please commence. ಅಧ್ಯಕ್ಷರು ನಿಯಮಾವಳಿ ಪ್ರಕಾರ ಯಾವುದೇ ರೂಲನ್ನು ಚೇಂಜ್ ಮಾಡುವುದಕ್ಕೆ ಅಧಿಕಾರವಿದೆ. That's all I can say.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ತಾವು ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ. ಅಲ್ಲಿ ಕೂಡ ಪ್ರಾಮುಖ್ಯವಾದ ಪ್ರಶ್ನೆಗಳು ಇವೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ಸ್ವಾಮಿ ತಪ್ಪಾಗುತ್ತದೆ ರೆಕಾರ್ಡ್‌ಗೆ ಹೋಗಿರುವುದರಿಂದ ರೆಕಾರ್ಡ್‌ನಲ್ಲಿ ರಾಂಗ್ ಆಗುತ್ತದೆ. ಮಾನ್ಯ ಅಧ್ಯಕ್ಷರ ರೂಲಿಂಗ್‌ಗೆ ನಾವು ಪಾಯಿಂಟ್ ಆಫ್ ಆರ್ಡರನ್ನು ರೇಜ್ ಮಾಡಬಹುದಾ? ಇದರ ಬಗ್ಗೆ ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಹೇಳಬೇಕು.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರದಲ್ಲಿ ಕೂಡ ಬಹಳ ಪ್ರಾಮುಖ್ಯವಾದ ವಿಚಾರಗಳು ಇರುವುದರಿಂದ ಅದು ಮುಗಿದ ಮೇಲೆ, ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ಮಾನ್ಯ ಬಚ್ಚೇಗೌಡರೆ, it has been decided. I have allowed under Rule 69. ಇಂತಹ ಗಹನವಾದ ವಿಷಯಗಳನ್ನು ಅನೇಕ ಸಲ ಎರಡು ಮೂರು ದಿವಸಗಳವರೆಗೆ ಬೇಕಾದಷ್ಟು ಡಿಸ್‌ಕಸ್ ಮಾಡಿದ್ದೇವೆ. ನಿಮಗೆ ಫುಲ್ ಡಿಸ್‌ಕಸ್ ಮಾಡಬೇಕಾದರೆ ಎರಡು-ಮೂರು ದಿವಸಗಳನ್ನು ತೆಗೆದುಕೊಳ್ಳಿ. I have no objection. ಅಡ್ಜರ್ನ್‌ಮೆಂಟ್ ಮೋಷನ್ ಆದರೆ ಏನು? ಯಾವುದಾದರೇನು? The Speaker has got every authority to change any rules, at any time, and at any stage.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್‌ನ್ನು ಕೊಟ್ಟಿದ್ದೀರಿ, ನಾವು ಏನು ಹೇಳುತ್ತೇವೆಂದರೆ, ಇದೊಂದು ಬಹಳ ಪ್ರಾಮುಖ್ಯವಾದಂಥ ವಿಷಯವಾಗಿದೆ. ಇಡೀ ರಾಜ್ಯದಲ್ಲಿ ಬರಗಾಲದ ಬವಣೆಯನ್ನು ಜನ ಅನುಭವಿಸುತ್ತಿದ್ದಾರೆ.

ಅಧ್ಯಕ್ಷರು : ಇನ್ನು ಅನೇಕ ವಿಷಯಗಳನ್ನು ನಾವು ರೂಲ್ 69ರ ಮೇಲೆ ಚರ್ಚೆ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ನಾವು ಕೊಡುವುದರ ಕಾರಣವೇನು? ನಾವು ರೂಲ್ 69ರ ಮೂಲಕವೇ ಕೊಟ್ಟು ಬಿಡುತ್ತಿದ್ದೆವು.

ಅಧ್ಯಕ್ಷರು : ತಾವು ಪ್ರೀಮಿಯಸ್ ಸ್ಪೀಕರ್ ಕೊಟ್ಟಿರುವ ರೂಲಿಂಗ್ಸ್‌ನ್ನು ಹೇಳುತ್ತಿದ್ದಿರಲ್ಲಾ? ಕೌಲ್ ಅಂಡ್ ಶಕ್ದರ್ ಪುಸ್ತಕ ಒಂದು ಭಗವದ್ಗಿತೆ ಇದ್ದ ಹಾಗೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅದನ್ನು ತಾವು ರೀಕನ್ಸಿಡರ್ ಮಾಡಬೇಕಾಗುತ್ತದೆ. ನಾವೆಲ್ಲರೂ ನಿಲುವಳಿ ಸೂಚನೆ ಮೂಲಕ ನೋಟೀಸ್‌ನ್ನು ಕೊಟ್ಟಿರುತ್ತೇವೆ. ಈಗಾಗಲೇ ತಮಗೆ ನಾವು 69ರ ರೂಲ್ ಮೇಲೆ ಚರ್ಚೆ ಮಾಡುವ ವಿಷಯದ ಬಗ್ಗೆ ಸಹ ಕಳುಹಿಸಿರುತ್ತೇವೆ.

ಅಧ್ಯಕ್ಷರು : ಬಹಳ ಜರೂರಾದ for example ಫ್ಲಡ್ಸ್ ಬಂದಾಗ ಅಂತಹ ಸಂದರ್ಭದಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ಮೂವ್ ಮಾಡಿರುತ್ತೇವೆ. I have no objection.

ಶ್ರೀ ಜಗದೀಶ್ ಶೆಟ್ಟರ್ : ಇಡೀರಾಜ್ಯದಲ್ಲಿ ಬರಗಾಲದಿಂದ ಇಷ್ಟೊಂದು ತೊಂದರೆಯಾಗಿದೆ.

ಅಧ್ಯಕ್ಷರು : ಇಲ್ಲವೆಂದು ಹೇಳುತ್ತಿಲ್ಲ. ಸರ್ಕಾರ ಒಪ್ಪಿದೆ, ಸರ್ಕಾರ ಒಪ್ಪದಿದ್ದರೆ ಅದು ಬೇರೆ ವಿಷಯ.

ಶ್ರೀ ಜಗದೀಶ್ ಶೆಟ್ಟರ್ : ಆದಕಾರಣ ಈ ವಿಷಯವನ್ನು ದಯವಿಟ್ಟು ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಇದರ ಪ್ರಾಮುಖ್ಯತೆ ಇರುವುದರಿಂದ, ದಯವಿಟ್ಟು ಇದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು : ಇಲ್ಲ, ನಿಲುವಳಿ ಸೂಚನೆ ಭೂಕಂಪ, ಫ್ಲಡ್ಸ್ ಬಂದು ಹಳ್ಳಿಗಳು ಮುಳುಗಡೆಯಾದ ಸಂದರ್ಭದಲ್ಲಿ ಅಂತಹ ಸಮಯಕ್ಕೆ ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುವುದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಜನ ಸಾಯುತ್ತಿದ್ದಾರೆ ಮತ್ತು ವಲಸೆ ಹೋಗುತ್ತಿದ್ದಾರೆ. ಮೇವು ಇಲ್ಲ, ಜಾನುವಾರುಗಳು ಸಾಯುತ್ತಿದ್ದಾವೆ. ಕುಡಿಯುವುದಕ್ಕೆ ನೀರೂ ಕೂಡ ಇಲ್ಲ. ವಿದ್ಯುತ್ತಿನ ಅಭಾವ ಕೂಡ ಇದೆ.

Mr. Speaker : No. I will request all the oposition leaders... You please hear me. ಶೆಟ್ಟರ್‌ವರೆ, ತಾವು ರೂಲ್ 69ರ ಮೇಲೆ ಕಮೆನ್ಸ್ ಮಾಡಿ. No. I won't change.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುವುದಕ್ಕೆ ಅಲೌ ಮಾಡಿದರೆ ಅದಕ್ಕೊಂದು ಪ್ರಾಮುಖ್ಯತೆ ಬರುತ್ತದೆ.

ಶ್ರೀ ಬಿ. ಸೋಮಶೇಖರ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ್‌ರವರು ಹೇಳಿದ್ದಾರೆ. ಅದರ ಬಗ್ಗೆ ತಾವು ದಯವಿಟ್ಟು ಕೇಳಬೇಕು.

ಅಧ್ಯಕ್ಷರು : ತಾವು ಅದನ್ನು ನಾಲ್ಕು ಸಲ ಹೇಳುತ್ತಿದ್ದೀರಿ. ತಾವು ಒಂದು ನಿಮಿಷ ಕೇಳಿ. ನಾವು ದಯವಿಟ್ಟು ಓದಿ ಬಿಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ತಾವು ದಯವಿಟ್ಟು ರೂಲಿಂಗ್‌ನ್ನು ಆಮೇಲೆ ಕೊಡಿ.

ಅಧ್ಯಕ್ಷರು : ತಾವು ಇಲ್ಲಿ ಕೇಳಿ ಸ್ವಾಮಿ ಓದುತ್ತೇನೆ, "On 23rd March 1953 during the course of debate on Demands for grants, the Hon'ble Member Sri. J. Mohamed Imam stated that the rulings of the chair regarding adjournment motion and other motions put the Opposition in a very disadvantageous position. Thereupon the Hon'ble Speaker observed.

> "A member while speaking must not discuss any ruling or observation of the Speaker or any order by the speaker disallowing a question, resolution or motion.

ನಿಮಗೆ ರೂಲಿಂಗ್ ಕೊಟ್ಟಿರುವುದಕ್ಕೆ ಗೌರವವಿಲ್ಲ. ನೀವು ಏನು ಹೇಳುವುದೂ ಬೇಕಾಗಿಲ್ಲ. I have given my ruling. This is my ruling.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್‌ನ್ನು ಮರುಪರಿಶೀಲನೆ ಮಾಡಬೇಕು.

ಅಧ್ಯಕ್ಷರು : ಸಮಯವನ್ನು ಕಳೆಯುವುದು ಬೇಡ.

(ಗೊಂದಲ)

Mr. Speaker : On both the issues, I have given my Ruling. you are questioning my ruling. ಈ ರೂಲಿಂಗ್ಸನ್ನು ಕೊಟ್ಟಿರುವಾಗ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಏನಾದರೂ ಮಾತನಾಡಿದರೆ ಮೇಲೆ, ರೂಲಿಂಗ್ ಕೊಟ್ಟ ಮೇಲೆ you must not discuss ಎಂದು ಹೇಳಿದ ಮೇಲೆ ಪುನಃ ನೀವು ಮಾತನಾಡುತ್ತಿದ್ದೀರಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ರೂಲ್-64(2) ಏನು ಹೇಳುತ್ತದೆ ಎಂಬುದನ್ನು ದಯವಿಟ್ಟು ನೋಡಬೇಕು.

ಅಧ್ಯಕ್ಷರು : ನಿಮ್ಮಂತಹ ಬುದ್ಧಿವಂತರು ಆ ರೀತಿ ಮಾತನಾಡಬಾರದು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ಒಂದು ನಿಮಿಷ ಕೇಳಬೇಕು.

ಅಧ್ಯಕ್ಷರು : ಕೇಳುವುದು ಬೇಡ. You please excuse me.

ಶ್ರೀ ಸಿ. ಬೈರೇಗೌಡ : ಅವರು ಏನು ಹೇಳುತ್ತಾರೆ ಅದನ್ನು ದಯವಿಟ್ಟು ಕೇಳಿ.

ಅಧ್ಯಕ್ಷರು : ನಾಲ್ಕನೇ ಸಲ ಅವರು ಹೇಳುತ್ತಿರುವುದನ್ನು ಕೇಳಿದ್ದೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಒಬ್ಬೊಬ್ಬರಿಗೊಂದು ರೂಲ್?

ಅಧ್ಯಕ್ಷರು : ನಾನು ರೂಲಿಂಗ್‌ನ್ನು ಕೊಟ್ಟಮೇಲೆ ಅದನ್ನು ಏತಕ್ಕಾಗಿ ಕೊಶ್ಚನ್ ಮಾಡುತ್ತೀರಿ? I cannot understand.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ತಾವು ರೂಲಿಂಗ್‌ನ್ನು ಕೊಟ್ಟಮೇಲೆ.....

(ಗೊಂದಲ)

ಅಧ್ಯಕ್ಷರು : ನಾನು ಹೇಳಿರುವುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಡಿಸ್‌ಕಷನ್ ಮಾಡಿ ಸಂತೋಷ. Alright. I will dispense with the question hour also. ಸಮಯ ಸಿಕ್ಕಿದರೆ ತೆಗೆದುಕೊಳ್ಳೋಣ. ಮಾನ್ಯ ಶೆಟ್ಟರ್‌ರವರೆ, ತಾವು ದಯವಿಟ್ಟು ಕಮೆನ್ಸ್ ಮಾಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ತಾವು ಹೇಳುವುದು ಬೇಡ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ತಾವು ದಯಮಾಡಿ ಕೇಳಬೇಕು.

ಅಧ್ಯಕ್ಷರು : ನೀವು ಎಷ್ಟಾದರೂ ಮಾತನಾಡಿ, ಅದು ನಿಮ್ಮಿಷ್ಟ. No, no ಸೋಮಶೇಖರ್‌ರವರೆ, ನಾನು ರೂಲಿಂಗ್ ಕೊಟ್ಟಮೇಲೆ ತಾವು ಇನ್ನೇನು ಹೇಳುವುದು ಇದೆ?

(ಗೊಂದಲ)

ಮಾನ್ಯ ಶೆಟ್ಟರ್‌ರವರೆ, ತಾವು ಕಮೆನ್ಸ್ ಮಾಡಿ.

Sri B. Somashekar : We are not questioning the Ruling of the Chair. But there is a provision in the procedure ರೂಲ್-64ರಲ್ಲಿ ತಾವು ಮರುಪರಿಶೀಲನೆ ಮಾಡಬೇಕೆಂದು ಹೇಳಿ ಕೇಳತಕ್ಕಂತಹ ಅವಕಾಶವಿದೆ. ಅದರ ಪ್ರಕಾರ ನಾವು ಇವತ್ತು ಕೇಳುತ್ತಿದ್ದೇವೆ. ನಮ್ಮ ಕೆ.ಬಿ. ಮಲ್ಲಿಕಾರ್ಜುನ್‌ರವರು ಬಹಳ ಮಹತ್ತರವಾದಂತಹ ಕೆಲವು ಕ್ಲಾರಿಫಿಕೇಷನ್‌ನ್ನು ತಮ್ಮಿಂದ ಕೇಳಿದ್ದಾರೆ. ಅದೇನೆಂದರೆ, ರೂಲ್ಸ್-60ರಲ್ಲಿ ಯಾವ ವಿಚಾರದಲ್ಲಿ ತೆಗೆದುಕೊಳ್ಳಬೇಕು. ರೂಲ್-69ರಲ್ಲಿ ಯಾವ ವಿಚಾರವನ್ನು ತೆಗೆದುಕೊಳ್ಳಬೇಕು. ಮಹತ್ತರವಾದಂತಹ ವಿಚಾರಗಳು ಯಾವುದು, ಅತಿ ಶೀಘ್ರವಾಗಿ ತೆಗೆದುಕೊಳ್ಳುವಂತಹ ವಿಚಾರಗಳು ಯಾವುದು, ಎನ್ನುವುದನ್ನು ತಾವು ಸ್ಪಷ್ಟೀಕರಣವನ್ನು ನೀಡಬೇಕು. ಇಗ ಏನಾಗಿದೆ ಎಂದರೆ, ನಮ್ಮ ಎಲ್ಲಾ ಸದಸ್ಯರುಗಳು, ವಿರೋಧಪಕ್ಷದವರು, ನಾವು ಮತ್ತು ಎಲ್ಲಾ ಪಕ್ಷದ ಗುಂಪಿನ ನಾಯಕರುಗಳು ಸಹ ನಮ್ಮ ಬೇಡಿಕೆಯನ್ನು ತಮ್ಮ ಮುಂದೆ ಇದನ್ನು ನಿಲುವಳಿ ಸೂಚನೆಯ ಮೇರೆಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂಬ ಬೇಡಿಕೆಯನ್ನು ಇಟ್ಟಿದ್ದೇವೆ. ಈಗ ನಿಲುವಳಿ ಸೂಚನೆಯನ್ನು ತೆಗೆದುಕೊಂಡಾಗ ಮಾತ್ರ ಇದಕ್ಕೆ ಮಹತ್ವ ಬರುತ್ತದೆ. ಮತ್ತು ಇದಕ್ಕೆ ಓಟಿಂಗ್ ಆಗುತ್ತದೆ. ರೂಲ್-69ರಲ್ಲಿ ವೋಟಿಂಗ್ ಆಗುವುದಿಲ್ಲ. ಈ ಒಂದು ಮಹತ್ತರವಾದಂತಹ ವಿಚಾರದಲ್ಲಿ ನಮಗೆ ಬೇಕಾಗಿರುವಂಥದ್ದು ವೋಟಿಂಗ್ ಆಗಬೇಕೆಂಬ ದೃಷ್ಟಿಯಿಂದಲೇ ನಾವು ನಿಲುವಳಿ ಸೂಚನೆಯನ್ನು ತೆಗೆದುಕೊಂಡಿದ್ದೇವೆ. ನಾವು ರೂಲ್-69ರಲ್ಲಿ ಯಾವುದಾದರೂ ರೂಪದಲ್ಲಿ ಚರ್ಚೆ ಮಾಡುವುದಾದರೆ ಇದಕ್ಕೆ ಮಹತ್ವ ಏನಾಗುತ್ತದೆ? ತಾವು ಫ್ಲಡ್ ಬಗ್ಗೆ ಹೇಳಿದ್ದೀರಲ್ಲಾ, ಅದಕ್ಕಿಂತ ದೊಡ್ಡರಾದ್ಧಾಂತವಾಗಿದೆ. ಅದನ್ನೆಲ್ಲವನ್ನು ನಾವು ಬಿಚ್ಚಿ ಹೇಳಬೇಕಾಗುತ್ತದೆ. ಇದಕ್ಕಿಂತ ಮಹತ್ತರವಾದಂತಹ ಒಂದು ವಿಚಾರಗಳು ಈ ನಾಲ್ಕು ವರ್ಷಗಳಲ್ಲಿ ಬಂದಿಲ್ಲ. ಆದ್ದರಿಂದ ದಯವಿಟ್ಟು ನಾವು ಇನ್ನೊಂದು ಸಾರಿ ಹೇಳುತ್ತೇವೆ. ತಾವು ಕೊಟ್ಟಿರುವಂತಹ ರೂಲಿಂಗ್‌ನ್ನು ಮರುಪರಿಶೀಲನೆ ಮಾಡಿ, ರೂಲಿಂಗ್-64ರ ಪ್ರಕಾರ ಕೊಡಬೇಕು. ನಾವು ರೂಲ್-64ರ ಆಧಾರದ ಮೇಲೆ ಕೇಳುತ್ತಿದ್ದೇವೆ. ತಾವು ಮರುಪರಿಶೀಲನೆ ಮಾಡಿ ನಿಮಗೆ ನಿಲುವಳಿ ರೂಪದಲ್ಲಿ ನಾವು ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಅದನ್ನು ರೂಲ್-60ರಲ್ಲೆ ತೆಗೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ನಮ್ಮೆಲ್ಲರ ಒಂದು ಆಗ್ರಹವಾಗಿರುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : I do not want to interfere ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ಪ್ರಸ್ತಾಪ ಮಾಡುತ್ತಲೇ ಹೇಳಿದ್ದೇನೆ. ವಿಷಯದ ಗಂಭೀರತೆಯನ್ನು ಅಷ್ಟೇ ಗಂಭೀರವಾಗಿ ಸರ್ಕಾರ ಗಮನಿಸಿದೆ. ಚರ್ಚೆಗೆ ತಾವು ಯಾವ ರೂಪದಲ್ಲಿ ಅವಕಾಶವನ್ನು ಮಾಡಿಕೊಡುತ್ತೀರಿ, ಎನ್ನುವುದರ ಬಗ್ಗೆ ಚರ್ಚೆಯಾಗಿ ತಾವು ಒಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ನಾನು

Rulings are to be obeyed without any comment. If any member were to feel that the Chair's Ruling on a particular matter is wrong, then the member should go to the Chambers of the Speaker and point out how the Ruling is wrong, and if the Chair is satisfied, the Chair may revise its Ruling. However, the Chair's Ruling cannot be commented upon in the House and they should be obeyed implicity. Therefore, ಈಗ ತಾವು ರೂಲಿಂಗ್

ಕೊಡುವುದಕ್ಕೆ ಮುಂಚೆ ಎಷ್ಟೆಷ್ಟು ಚರ್ಚೆ ಮಾಡಿದರೋ ನಾವೇನೂ ಮಧ್ಯೆ ಪ್ರವೇಶ ಮಾಡಲಿಲ್ಲ. ರೂಲಿಂಗ್ ಕೊಟ್ಟುಬಿಟ್ಟಿದ್ದೀರಿ, ಆದ್ದರಿಂದ ಚರ್ಚೆ ಯಾವ ರೂಪದಲ್ಲಿ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ನಿರ್ಧಾರ ಮಾಡಿದ್ದೇವೆ. ಈಗ ತಾವು ಪ್ರಶ್ನೋತ್ತರಗಳನ್ನು ಮಾಡಿ, ಇದಾದನಂತರ ನೇರವಾಗಿ ಚರ್ಚೆಗೆ ತೆಗೆದುಕೊಳ್ಳಬಹುದು. ನಮ್ಮದೇನು ಅಭ್ಯಂತರವಿಲ್ಲ. ನನ್ನದಿಷ್ಟೇ ಸಲಹೆ, ಈ ಪ್ರಶ್ನೆ ಮಾಡತಕ್ಕಂಥದ್ದನ್ನು ಕೊಟ್ಟರೆ ಈ ಸದನವು ಇದುವರೆವಿಗೂ ಹಾಕಿಕೊಂಡಿರತಕ್ಕಂತಹ ಸಂಪ್ರದಾಯಗಳ ಮೇಲೆ ದುಷ್ಪರಿಣಾಮ ಬೀಳುತ್ತದೆ ಎನ್ನುವುದನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ನಾವು ಏತಕ್ಕಾಗಿ ನಿಲುವಳಿ ಸೂಚನೆಯ ಬಗ್ಗೆ ಇನ್‌ಸಿಸ್ಟ್ ಮಾಡುತ್ತಿದ್ದೇವೆಂದರೆ, ನಮಗೆ ಚರ್ಚೆ ಬೇಕಾಗಿದೆ ನಿಜ. ಇವತ್ತು ಸಂಸದೀಯ ಸಚಿವರಾದ ಶ್ರೀ ಚಂದ್ರೇಗೌಡರು ಹೇಳಿದರು, ಸರ್ಕಾರ ರೆಡಿ ಇದೆ, ಈ ಬರದ ವಿಷಯದ ಬಗ್ಗೆ ಗಂಭೀರ ಇದೆ. ಇದರಿಂದಾಗಿ ಇಡೀ ರಾಜ್ಯದ ಮೇಲೆ ದುಷ್ಪರಿಣಾಮವಾಗಿದೆ ಅದಕ್ಕಾಗಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರು ಇದ್ದೇವೆ ಎಂದು ಅವರ ಕಡೆಯೂ ಇನ್‌ಸಿಯೇಷನ್ ಇದೆ. ಇವತ್ತು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಸಹ ತಯಾರಿದ್ದೇವೆ. ಆದರೆ ಯಾವ ರೂಪದಲ್ಲಿ ಚರ್ಚೆ ಮಾಡಬೇಕೆಂಬುದು ಬಹಳ ಮಹತ್ವದ್ದು. ಈ ಒಂದು ನಿಲುವಳಿ ಸೂಚನೆಯ ಮುಖಾಂತರ ಪ್ರಸ್ತಾಪ ಮಾಡುವುದಕ್ಕೂ ಮತ್ತು ನಿಯಮ 69ರ ಮುಖಾಂತರ ಚರ್ಚೆ ಮಾಡುವುದಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಅದಕ್ಕಾಗಿ ಈ ಒಂದು ಪ್ರಿಯಾರಿಟಿ, ನಾವು ಎಲ್ಲರೂ ಅಂದರೆ ಪ್ರತಿಪಕ್ಷದವರು ಬೆಳಿಗ್ಗೆ ಬಂದು ರುಲ್-69ರ ಮೇಲೆ ರಿಕ್ವೆಸ್ಟ್ ಮಾಡಿಕೊಂಡು ಇದನ್ನು ತೆಗೆದುಕೊಳ್ಳಿ ಎಂದು ಕೇಳಬಹುದಾಗಿತ್ತು. ಈಗಾಗಲೇ ಸಾಕಷ್ಟು ವಿಷಯಗಳ ಬಗ್ಗೆ ತಮಗೆ ಬೇರೆ ಬೇರೆ ವಿಷಯಗಳ ಬಗ್ಗೆ ನೋಟೀಸ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಆದರೆ ಇದು ಇಡೀ ರಾಜ್ಯಕ್ಕೆ ಸೀಮಿತವಾದಂತಹ ವಿಷಯವಾಗಿದೆ. ರೈತರಿಗೆ ಮತ್ತು ಗ್ರಾಮೀಣ ಪ್ರದೇಶದವರಿಗೆ ಇದರ ಪರಿಣಾಮಗಳನ್ನು ನೋಡುತ್ತಿರುವಂತಹ ಈ ವಿಷಯ ಇರುವುದರಿಂದ, ತಾವು ಏನು ರೂಲಿಂಗ್‌ನ್ನು ಕೊಟ್ಟಿದ್ದೀರಿ, ಅದನ್ನು ತಾವು ದಯವಿಟ್ಟು ರೀಕನ್ಸಿಡರ್ ಮಾಡಿ ಬರದ ಬಗ್ಗೆ ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಆಗ ಅದಕ್ಕೊಂದು ಬಹಳ ಮಹತ್ವ ಬರುತ್ತದೆ. ಬಹುಶಃ ಹಿಂದಿನ ವಿಧಾನಮಂಡಲದ ಎಲ್ಲಾ ಸಂಪ್ರದಾಯಗಳನ್ನು ತಾವು ತೆಗೆದುಕೊಂಡಿದ್ದೀರಿ. ಯಾವಯಾವಾಗ ಪ್ರತಿಪಕ್ಷದಲ್ಲಿದ್ದಂತಹವರು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದಾರೆ. ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡುವುದಕ್ಕೆ ದಿನಗಟ್ಟಲೆ ಅವಕಾಶವನ್ನು ಕೊಟ್ಟಿರುವುದನ್ನು ತಾವು ನೋಡುತ್ತಿದ್ದೀರಿ. ಬೆಳಿಗ್ಗೆಯಿಂದ ಸಾಯಂಕಾಲದವರೆವಿಗೂ ನಿಲುವಳಿ ಸೂಚನೆಯ ಮುಖಾಂತರ ಚರ್ಚೆಯಾಗುವುದಕ್ಕೆ ಅವಕಾಶವಿರುವುದು, ಅದನ್ನು ಮಾಡಿರುವ ಬಗ್ಗೆ ಸದನದಲ್ಲಿ ಹಿಂದಿನ ಎಲ್ಲಾ ರೆಕಾರ್ಡ್ಸ್ ತೆಗೆದು ನೋಡಿದಾಗ ಅವೆಲ್ಲವೂ ತಮ್ಮ ಕಣ್ಮುಂದೆ ಬರುತ್ತದೆ. ಸಂಪ್ರದಾಯಗಳು ಸಹ ಅದೇ ಇದೆ. ಇದು ಯಾವುದೋ ಒಂದು ವಿಷಯಕ್ಕೆ ಸೀಮಿತವಾಗಿದ್ದರೆ ಅದು ಬೇರೆ? 69 ಮುಖಾಂತರ ತರಬಹುದಾಗಿತ್ತು. ಇದು ಸಾರ್ವಜನಿಕ ಮಹತ್ವದ್ದು ಮತ್ತು ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರುವಂಥದ್ದು ಆಗಿದೆ. ಇದರ ಬಗ್ಗೆ ಪ್ರತಿಪಕ್ಷದವರು ಮತ್ತು ನಾವೆಲ್ಲರೂ ನಿಲುವಳಿ ಸೂಚನೆಯ ಮುಖಾಂತರ ತೆಗೆದುಕೊಳ್ಳಬೇಕೆಂದು ಕೊಟ್ಟಿದ್ದೇವೆ. ಇವತ್ತು ಜನತಾಪರಿವಾರದವರು ಮತ್ತು ಮಾನ್ಯ ಸಿಂಧ್ಯಾರವರು ಎಲ್ಲರೂ ಕೂಡಿಕೊಂಡು ಕೇವಲ ಈ

ಒಂದು ವಿಷಯದ ಬಗ್ಗೆ ನಿಲುವಳಿ ಸೂಚನೆಯ ತೆಗೆದುಕೊಳ್ಳುವ ಬಗ್ಗೆ ಬಹಳ ಮಹತ್ವವಿರುವುದರಿಂದ ಇದನ್ನು ತಾವು ದಯವಿಟ್ಟು ಏನು ರೂಲಿಂಗ್‌ನ್ನು ಕೊಟ್ಟಿದ್ದೀರಿ, ಅದನ್ನು ರೀಕನ್ಸಿಡರ್ ಮಾಡಿ, ನಿಲುವಳಿ ಸೂಚನೆಯ ಮುಖಾಂತರ ನಾವು ಚರ್ಚೆಯನ್ನು ಮಾಡೋಣ. – ಈಗ ನಾವು ತಕ್ಷಣ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾಗಿ ನಿಯಮಾವಳಿ–60 ಮತ್ತು 69ರಲ್ಲಿರತಕ್ಕಂತಹ ವ್ಯತ್ಯಾಸವನ್ನು ಹೇಳಿದ್ದಾರೆ. ನಿಯಮ 61ರ ಪ್ರಕಾರ ಸಾರ್ವಜನಿಕ ಮಹತ್ವ ಇರತಕ್ಕಂಥದ್ದು 69ರ ಪ್ರಕಾರ ಜರೂರು ಚರ್ಚೆಯಾಗಬೇಕಾಗಿರುವುದು. ಇದರ ಬಗ್ಗೆ ಜರೂರು ಚರ್ಚೆಯಾಗಬೇಕಾಗಿರುವಂತಹ ಅವಶ್ಯಕತೆ ಇದೆ. ಇದು ಅತ್ಯಂತ ಸಾರ್ವಜನಿಕ ಮಹತ್ವವಾಗಿರುವಂತಹ ವಿಚಾರವಾಗಿದೆ. ಇದಕ್ಕಿಂತ ಮಹತ್ವವಾಗಿರುವಂತಹ ವಿಚಾರ ಯಾವುದು ಇಲ್ಲ. ಏಕೆಂದರೆ, ಈ ರಾಜ್ಯ ಯಾವತ್ತೂ ಕೂಡ ಇಂತಹ ಬರಗಾಲವನ್ನು ಎದುರಿಸಿರಲಿಲ್ಲ. ಹಿಂದೆ ಎಲ್ಲವನ್ನೂ ನಾವು ನೋಡಿದ್ದೇವೆ. ಅವತ್ತಿನ ಬರಕ್ಕೂ ಇವತ್ತಿನ ಬರ ಬಂದಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಆದ್ದರಿಂದ ಇದು ಬಹಳ ಮಹತ್ತರವಾಗಿರುವಂತಹ ವಿಚಾರವಾಗಿದೆ. ಇಲ್ಲಿ ಆಗಿರತಕ್ಕಂತಹ ಲೋಪದೋಷಗಳು ಅತ್ಯಂತ ಗುರುತರವಾದಂತಹ ಆಗಿವೆ. ಈ ವಿಚಾರದಲ್ಲಿ ಸರ್ಕಾರ ಎಲ್ಲೆಲ್ಲಿ ಎಡವಿದೆ ಎನ್ನತಕ್ಕಂಥದ್ದನ್ನು ನಾವು ಹೇಳಬೇಕಾಗುತ್ತದೆ. ಇದರ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಯಾವುದರ ಮುಖಾಂತರವೆಂದರೆ, ಇಲ್ಲಿ ಈ ಸದನದಲ್ಲಿ ಅದರ ಮೇಲೆ ಓಟಿಂಗ್ ನಡೆಯಬೇಕಾಗುತ್ತದೆ. 60ರ ಪ್ರಕಾರ ವೋಟಿಂಗ್ ನಡೆಯುವುದಕ್ಕೆ ಸಾಧ್ಯವಿದೆಯೇ ವಿನಃ 69ರ ಪ್ರಕಾರ ವೋಟಿಂಗ್ ನಡೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಮಾಡಿರತಕ್ಕಂತಹ ತಪ್ಪುಗಳನ್ನು ನಾವು ಸಾರ್ವಜನಿಕರ ಗಮನಕ್ಕೆ ತರಬೇಕಾಗಿರುವುದು. ಆ ವೋಟಿನ ಪ್ರಕಾರ ನಾವು ಅದನ್ನು ವಿರೋಧ ಮಾಡಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ನೀವು ನಿಯಮ 60ರ ಬದಲಿಗೆ 69ನ್ನು ತೆಗೆದುಕೊಂಡರೆ ನಮ್ಮ ವೋಟು ಮಾಡತಕ್ಕಂತಹ ಅಧಿಕಾರ ಏನಿದೆ ಅದು ಮೋಟಕಾಗುತ್ತದೆ. ದಯವಿಟ್ಟು ಆ ಅಧಿಕಾರವನ್ನು ಮೊಟಕು ಮಾಡಬೇಡಿ, ನಾವು ಅಧಿಕಾರವನ್ನು ನಿಯಮ–60 ಪ್ರಕಾರ ಚಲಾಯಿಸುವುದಕ್ಕೆ ನಮಗೆ ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಕೆಂಬ ಮನವಿಯನ್ನು ನಾನು ಮಾಡಿಕೊಳ್ಳುತ್ತೇನೆ. ಆದ್ದರಿಂದ ತಾವು ದಯವಿಟ್ಟು ಏನು ರೂಲಿಂಗ್‌ನ್ನು ಕೊಟ್ಟಿದ್ದೀರಿ, ಇದನ್ನು ಬದಲಾವಣೆ ಮಾಡಬೇಕು. ನಿಯಮಾವಳಿ 61ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

+ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು, ಅಧ್ಯಕ್ಷರು ರೂಲಿಂಗ್‌ನ್ನು ಕೊಟ್ಟಮೇಲೆ ಅದನ್ನು ಕೊಶ್ಚನ್ ಮಾಡಬಾರದೆಂದು ಹೇಳಿದರು. ನಾನು ನೀವು ಕೊಟ್ಟ ರೂಲಿಂಗ್‌ನ್ನು ಕೊಶ್ಚನ್ ಮಾಡುತ್ತಿಲ್ಲ. ಇನ್ನೊಂದು ಪ್ರಾವಿಜನ್‌ನ್ನು ಇನ್‌ವೋಕ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಿಯಮ–64ರಲ್ಲಿ ತಾವು ರೂಲ್–64ನ್ನು ಓದಿದರೆ, 64(1) ಆದ ಮೇಲೆ even if he rejects. ನಿರಾಕರಿಸಿದರೂ ಕೂಡ ಅದು ಬರುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಅಧ್ಯಕ್ಷರು ನಿಯಮ–60ನ್ನು ರಿಜೆಕ್ಟ್ ಮಾಡಿದಾಗಲೂ ಸಹ ಇದು ಬರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ರಿಜೆಕ್ಟ್ ಮಾಡಿದರೂ ಸಹ ಬರುತ್ತದೆ. 23 ಜನ ನಿಂತುಕೊಂಡರೆ ಅಟೋಮ್ಯಾಟಿಕ್ ಆಗಿ ಎಲ್ಲವೂ ಆದಹಾಗೆ ಇದು. ರೂಲ್–64ನಲ್ಲಿ ನಾನು

64(1)ನಿಂದ ಓದುತ್ತೇನೆ. ಅಧ್ಯಕ್ಷರು 60ನೆಯ ನಿಯಮದ ಮೇರೆಗೆ ಒಪ್ಪಿಗೆ ಕೊಟ್ಟರೆ, ಮತ್ತು ಚರ್ಚಿಸಲು ಉದ್ದೇಶಿಸಿರುವ ವಿಷಯ ಕ್ರಮಬದ್ದವಾಗಿದೆ ಎಂದು ಅಭಿಪ್ರಾಯಪಟ್ಟರೆ ಪ್ರಶ್ನೋತ್ತರಗಳ ತರುವಾಯ ಮತ್ತು ಕಾರ್ಯಕ್ರಮ ಪಟ್ಟಿಗಳ ಪ್ರಕಾರ ಇತರೆ ವಿಷಯಗಳನ್ನುಪ್ರಾರಂಭಿಸುವುದಕ್ಕೆ ಮುಂಚೆ ಸಂಬಂಧಪಟ್ಟ ಸದಸ್ಯನ ಹೆಸರು ಕರೆಯಬೇಕು. ಅಂತಹ ಸದಸ್ಯನು ತಾನು ಸ್ಥಾನದಲ್ಲಿ ಎದ್ದು ನಿಂತು ಸದನದಲ್ಲಿ ನಿಲುವಳಿ ಸೂಚನೆಯನ್ನು ತರಲು ಅನುಮತಿಯನ್ನು ಕೇಳತಕ್ಕದ್ದು.

"ಪರಂತು ಅಧ್ಯಕ್ಷರು 60ನೇ ನಿಯಮದ ಮೇರೆಗೆ ತನ್ನ ಒಪ್ಪಿಗೆ ನೀಡಲು ನಿರಾಕರಿಸಿದರೆ ಅಥವಾ ಚರ್ಚಿಸಲು ಉದ್ದೇಶಿಸಿರುವ ವಿಷಯವು ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟರೆ ತಾನು ಅವಶ್ಯವೆಂದು ಭಾವಿಸಿದರೆ ನಿಲುವಳಿ ಸೂಚನೆಯನ್ನು ಓದಿ ಹೇಳಬಹುದು ಮತ್ತು ತಾನು ನಿಲುವಳಿ ಸೂಚನೆಯನ್ನು ತರಲು ಒಪ್ಪಿಗೆಯನ್ನು ನಿರಾಕರಿಸುವುದರ ಹಾಗೂ ನಿಲುವಳಿ ಸೂಚನೆ ಕ್ರಮಬದ್ಧವಾಗಿಲ್ಲವೆಂದು ಅಭಿಪ್ರಾಯಪಟ್ಟ ಕಾರಣಗಳನ್ನು ತಿಳಿಸಬಹುದು.

ಮತ್ತು ಪರಂತು ನಿಲುವಳಿ ಸೂಚನೆಯಲ್ಲಿ ತಿಳಿಸಿರುವ ವಿಷಯದ ಬಗ್ಗೆ ಪೂರ್ಣ ಸಂಗತಿ ಅಧ್ಯಕ್ಷರ ಬಳಿ ಇಲ್ಲದಿದ್ದರೆ ಅವರು ಒಪ್ಪಿಗೆ ಕೊಡುವ ಹಾಗೂ ನಿರಾಕರಿಸುವುದಕ್ಕೆ ಮುಂಚೆ ನಿಲುವಳಿ ಸೂಚನೆಯನ್ನು ಸದನದಲ್ಲಿ ಓದಬೇಕು ಹಾಗೂ ಮಂತ್ರಿಯಿಂದ ಅಥವಾ ಸಂಬಂಧಪಟ್ಟ ಸದಸ್ಯರಿಂದ ಸಂಕ್ಷಿಪ್ತ ವಿವರಣೆಯನ್ನು ಪಡೆಯಬೇಕು. ಅನಂತರ ನಿಲುವಳಿ ಸೂಚನೆಯನ್ನು ಅಂಗೀಕರಿಸುವ ವಿಷಯದಲ್ಲಿ ತನ್ನ ನಿರ್ಣಯವನ್ನು ತಿಳಿಸತಕ್ಕದ್ದು.'

....ಆಯಿತು ಇದನ್ನು ತಾವು ತಿಳಿಸಿದ್ದೀರಿ.

'ನಂತರ 64(2)ರಲ್ಲಿ ನಿಲುವಳಿ ಸೂಚನೆಯನ್ನು ತರಲು ನೀಡಲಾದ ಅನುಮತಿಗೆ ಆಕ್ಷೇಪಗಳು ಬಂದಲ್ಲಿ ಅಧ್ಯಕ್ಷರು ಆ ನಿಲುವಳಿ ಸೂಚನೆಯು ಸಭೆಯಲ್ಲಿ ಬರಬೇಕೆಂದು ಬಯಸುವ ಸದಸ್ಯರುಗಳು ತಮ್ಮ ಸ್ಥಾನಗಳಲ್ಲಿ ಎದ್ದು ನಿಲ್ಲುವಂತೆ ವಿನಂತಿಸಿಕೊಳ್ಳಬೇಕು......

ಈಗ ತಾವು ಏನು ಮಾಡಬೇಕಾಗುತ್ತದೆ ಎಂದರೆ ಯಾರು ಇದರ ಪರ ಇದ್ದಾರೆ ಅವರನ್ನು ಎದ್ದು ನಿಲುವುದಕ್ಕೆ ಹೇಳಬೇಕು. ಅದರಲ್ಲಿ....... 'ಇವತ್ತು ಮೂರು ಸದಸ್ಯರುಗಳಿಗೆ ಕಡಿಮೆ ಇಲ್ಲದಷ್ಟು ಸದಸ್ಯರು ಎದ್ದುನಿಂತರೆ, ನಿಲುವಳಿ ಸೂಚನೆಗೆ ಅನುಮತಿ ಸಿಕ್ಕಿದೆ ಎಂದು ಸದನಕ್ಕೆ ತಿಳಿಸಬೇಕು' ಎಂದು ಇದೆ. ಅದನ್ನು ನಾನು ಹೇಳುತ್ತಿದ್ದೇನೆ. ಆದ್ದರಿಂದ 32 ಜನ ವಿರೋಧಿ ಪಕ್ಷದವರು ಯಾರಾದರು ಎದ್ದುನಿಂತು ಇದನ್ನು ತರಲಿಕ್ಕೆ ಪ್ರಯತ್ಮ ಮಾಡುತ್ತಾ ಇದ್ದರೆ, ಅವರು ಎದ್ದು ನಿಂತಾಗ ತಾವು ಅನುಮತಿಯನ್ನು ಕೊಡಬೇಕಾಗುತ್ತದೆ. ಇದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ.

ಅಧ್ಯಕ್ಷರು : ನನಗೆ ಗೊತ್ತಿದೆ. ನಾನು ಎಲ್ಲಾ ಓದಿದ್ದೇನೆ. ಇಪ್ಪತ್ತೊಂಭತ್ತು ಜನ ಸಿಗ್ನೇಚರ್ ಮಾಡಿದ್ದಾರಲ್ಲಾ....

ಶ್ರೀ ಬಿ. ಸೋಮಶೇಖರ್ : ಬಿಜೆಪಿ ಮತ್ತು ಜನತಾ ದಳದಿಂದ......

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು 24 ಜನ ಎದ್ದುನಿಲ್ಲುತ್ತೇವೆ. ತಾವು ದಯವಿಟ್ಟು ಅಲೋ ಮಾಡಿ.

(ಗೊಂದಲ)

ಅಧ್ಯಕ್ಷರು : ತಾವೆಲ್ಲಾ ಮಾತನಾಡಿದ್ದು ಆಯಿತು ತಾನೆ? ಮಾನ್ಯ ಸೋಮಶೇಖರ್‌ರವರೇ, ಈಗ ನನಗೆ ಮಾತನಾಡುವುದಕ್ಕೆ ಬಿಡಿ. ಈಗ ನೀವು ಎಲ್ಲರೂ ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ಇದಕ್ಕಿಂತ ಮಹತ್ವವಾದ ಬಹಳ ಮುಖ್ಯವಾದ ವಿಷಯಗಳ ಬಗ್ಗೆ ನಾವು ಸುಮಾರು ನಾಲ್ಕು ವರ್ಷಗಳಿಂದ ನಿಯಮ 69ರ ಪ್ರಕಾರ ಚರ್ಚೆ ಮಾಡಿಕೊಂಡು ಬಂದಿದ್ದೇವೆ. ಎರಡು–ಮೂರು–ನಾಲ್ಕು ದಿವಸ ಕೂಡ ಚರ್ಚೆ ಬೇಕಾದಷ್ಟು ಸಲ ಆಗಿದೆ. ಈಗ ಅದನ್ನು ನೀವು ಪ್ರತಿಷ್ಠೆಯಾಗಿ ಮಾಡಿಕೊಳ್ಳಬೇಡಿ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ನೀವು ಹೇಳಿದ್ದನ್ನು ನಾನು ಕೇಳಿದ್ದೇನೆ. ಈಗ ಮತ್ತೆ ಯಾಕೆ ಎದ್ದುನಿಂತುಕೊಳ್ಳುತ್ತೀರಿ? When I am talking, you are disturbing me. You please resume your seat.... ದಯವಿಟ್ಟು ನಾನು ಹೇಳುವುದು ಇಷ್ಟೆ. ಇದನ್ನು ನೀವು ಪ್ರತಿಷ್ಠೆಯಾಗಿ ಮಾಡಿಕೊಳ್ಳಬೇಡಿ. ಬೇಕಾದರೆ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ ಅದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. ನೀವು ದಯವಿಟ್ಟು ಭಾಷಣವನ್ನು ಪ್ರಾರಂಭ ಮಾಡಿ. ಶೆಟ್ಟರ್‌ರವರೇ, ದಯವಿಟ್ಟು ಇದರ ಬಗ್ಗೆ ಪ್ರತಿಷ್ಠೆ ಬೇಡಿ. ಇದು ನನ್ನ ಬೇಡಿಕೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ.............

(ಗೊಂದಲ)

Mr. Speaker : Adjournment Motion ಕೂಡ after the Question hour ತೆಗೆದುಕೊಳ್ಳಬೇಕೆಂದು ಇದೆ. shall I show it to you?

ಶ್ರೀ ಅರಗ ಜ್ಞಾನೇಂದ್ರ : ಇದಕ್ಕೆ ಓಟಿನ ಅವಕಾಶ ಇಲ್ಲ. ವಿಷಯದ ಗಂಭೀರತೆ ಬಗ್ಗೆ ತಮಗೆ ಗೊತ್ತಿದೆ. ತಾವು ಕೋಲಾರದವರು. ತಾವು ಇಷ್ಟು ಡ್ರೈ ಆಗಬಾರದು, ಸ್ವಲ್ಪ ಮೆದು ಆಗಬೇಕು. ದಯವಿಟ್ಟು ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಂಡು ಈ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಸತತವಾಗಿ ಬರಗಾಲ ಬಂದಿದೆ. ಇದರ ಬಗ್ಗೆ ಸರ್ಕಾರ ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂಬುದರ ಬಗ್ಗೆ ನಾವು ಚರ್ಚೆ ಮಾಡಬೇಕಾಗುತ್ತದೆ. ಸರ್ಕಾರಕ್ಕೂ ಕೂಡ ತಾವು ಜನರಿಗೆ ಏನೇನು ಮಾಡಿದ್ದೇವೆ ಎಂದು ಹೇಳಿಕೊಳ್ಳುವುದಕ್ಕೆ ಇದು ಒಂದು ಅವಕಾಶ. ಕೇಂದ್ರ ಏನು ಕೊಟ್ಟಿದೆ ಮತ್ತು ಅವರು ಏನು ಮಾಡಿದ್ದಾರೆ ಎನ್ನುವುದನ್ನು ಇಲ್ಲಿ ಹೇಳಬಹುದು. ಮತ್ತೆ ನಮ್ಮ ವಿರೋಧಪಕ್ಷಗಳ ಬಗ್ಗೆ ಈಗಾಗಲೇ ಮಾನ್ಯ ಭೈರೇಗೌಡರು ಹೇಳಿದರು. ನಮಗೆ ಓಟಿಂಗ್‌ಗೂ ಇಲ್ಲಿ ಅವಕಾಶ ಇರುತ್ತದೆ. ದಯವಿಟ್ಟು ಕಳೆದ ನಾಲ್ಕು ವರ್ಷಗಳಿಂದ ನೀವು ಅವಕಾಶವನ್ನು ಕೊಡಲಿಲ್ಲ. ಇಂತಹ ಒಂದು ಸದಾವಕಾಶ ಈಗ ಸಿಕ್ಕಿದೆ. ಈಗ ಬರ ಬಂದು ಈ ಸದನಕ್ಕೆ ದೇವರು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾನೆ. ಇದು ಒಂದು ರೆಕಾರ್ಡ್ ಆಗುತ್ತದೆ. ದಯವಿಟ್ಟು ತಾವು ಇದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಆಯಿತು ಬಿಡಿ. ಈಗ ಕೋಲಾರದವರು ಆಗಿದ್ದ ಮಾತ್ರಕ್ಕೆ ಬರ ಏನೂ ಕಡಿಮೆಯಾಗುವುದಿಲ್ಲ. ನಿಮಗೇನು ಚರ್ಚೆಯಾಗಬೇಕು ತಾನೆ? ಇವತ್ತು ನಾಳೆ ಮತ್ತು ನಾಡಿದ್ದು ಬೇಕಾದರೆ ಪೂರ್ತಿಯಾಗಿ ಚರ್ಚೆಮಾಡೋಣ. ಇದಕ್ಕೆ ನನ್ನ ಅಭ್ಯಂತರ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ನನ್ನದು ಒಂದೇ ಒಂದು ಪ್ರಶ್ನೆ. ನಾನು ಇಷ್ಟರತನಕ ಸದನದ ಕಲಾಪಗಳನ್ನು ನೋಡಿದ್ದೇನೆ. ತಾವು ನಿಲುವಳಿ ಸೂಚನೆ ಮೂಲಕ ಅವಕಾಶ ಕೊಡುತ್ತೀರೆಂದು ನಮಗೆ ಭರವಸೆ ಇತ್ತು ಆದರೆ ತಾವೇನೋ ನಿಯಮ 69ರ ಅಡಿಯಲ್ಲಿ ಕನ್ವರ್ಟ್ ಮಾಡುವುದಕ್ಕೆ ನೋಡುತ್ತಿದ್ದೀರಿ.

ಅಧ್ಯಕ್ಷರು : ಮಾಡಿಯಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದನ್ನು ತಾವು ಪುನರ್ ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಮಗೆ ಇಲ್ಲಿ ಮತದಾನ ಆದರೆ ಈ ಬರಗಾಲದ ಕೆಲಸ ಸರಿಯಾಗಿಲ್ಲವೆಂದು ಭಾವನೆ ಕಾಂಗ್ರೆಸ್‌ನವರಲ್ಲೂ ಅನೇಕರಿಗೆ ಇದೆ. ಅವರು ನಮ್ಮ ಪರವಾಗಿ ಓಟು ಹಾಕಿಬಿಡಬಹುದು ಎಂದು ತಾವು ಆ ರೀತಿಯಲ್ಲಿ ಭಯಪಟ್ಟುಕೊಳ್ಳುತ್ತಾ ಇದ್ದೀರಿ ಎಂದು ಒಂದು. ಅದಕ್ಕೇ ಬರ ಪರಿಹಾರ ಕಾಮಗಾರಿಗಳು ಸರಿಯಾಗಿ ಆಗಿಲ್ಲ ಎನ್ನುವಂತಾದ್ದು ರಾಜ್ಯದ ಜನತೆಯ ಅಭಿಪ್ರಾಯ ಇದೆ. ಇದು ಸರಿಯಾಗಿ ಆಗಿಲ್ಲವೆಂದು ಅನೇಕ ಪ್ರಮುಖ ಸದಸ್ಯರು ಕಾಂಗ್ರೆಸ್ ಪಕ್ಷದಲ್ಲಿ ಏನು ಇದ್ದಾರೆ ಅವರಿಗೂ ಹಾಗೆ ಅನ್ನಿಸಿದೆ. ಸರ್ಕಾರ ತಪ್ಪು ಮಾಡುತ್ತಿದೆ, ಅದು ಸರಿಯಾದ ದಾರಿಯಲ್ಲಿ ನಡೆಯುತ್ತಿಲ್ಲ. ಅಧ್ಯಕ್ಷರೆ, ತಮ್ಮ ಕ್ಷೇತ್ರದಲ್ಲೂ ಏನಾಗಿದೆ ಎಂಬುದು ತಮಗೆ ಗೊತ್ತಿದೆ. ಹೀಗಾಗಿ ಈ ಮತದಾನಕ್ಕೆ ಅವಕಾಶ ಇರುವಂತಹ ನಿಲುವಳಿ ಸೂಚನೆಗೆ ನಿಯಮ 60ರ ಅಡಿಯಲ್ಲಿ ತಾವು ಅವಕಾಶವನ್ನು ಕೊಡಬೇಕು. ಮತ್ತೆ ಅವರು ಗುಂಪುಗಾರಿಕೆಯಿಂದ ನಮ್ಮ ಕಡೆಗೆ ಬಂದರೆ ಬರಲಿ. ಅವರು ನಮಗೆ ಓಟು ಬೇಕಾದರೆ ಹಾಕಲಿ. ಸರ್ಕಾರಕ್ಕೂ ಕೂಡ ಇದರಿಂದ ಏನಾಗಿದೆ ಎನ್ನುವುದು ಸ್ಪಷ್ಟವಾಗಲಿ. ಆದ್ದರಿಂದ ನನ್ನ ವಿನಂತಿ ಏನೆಂದರೆ ತಾವು ಇದಕ್ಕೆ ನಿಯಮ 60ರ ಅಡಿಯಲ್ಲಿ ಅವಕಾಶವನ್ನು ಕೊಡಬೇಕು. ಇದರ ಬಗ್ಗೆ ನಾನು ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ವಿಷಯವನ್ನು ಎಲ್ಲೆಲ್ಲೋ ತೆಗೆದುಕೊಂಡು ಹೋಗಿ ಏನೇನೋ ಮಾಡಬೇಡಿ. ನೀವು ಎಲ್ಲರೂ, ಫಸ್ಟ್ ಬೆಂಚ್, ಸೆಕೆಂಡ್ ಬೆಂಚ್‌ನವರೆಲ್ಲರೂ ಮಾತನಾಡಿದ್ದೀರಿ.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ದಯವಿಟ್ಟು ಇದನ್ನು ಪುನರ್‌ಪರಿಶೀಲನೆ ಮಾಡಬೇಕು. ಇದು ಬಹಳ ಮುಖ್ಯವಾದ ವಿಷಯ ಇದೆ ಸ್ವಾಮಿ.

ಅಧ್ಯಕ್ಷರು : ಓಟಿಂಗ್ ಬಗ್ಗೆ I do not want to comment. I am not here to just coment on the voting or any such thing ಅವತ್ತಿನ ದಿವಸ ಹೇಗೆ ಇರುತ್ತದೆಯೋ ಆ ರೀತಿ ಇದು ಹೋಗುತ್ತದೆ. I am not worried about voting ಅಥವಾ ಯಾರಿಗೆ ಮೆಜಾರಿಟಿ ಬರುತ್ತದೋ ಅದು ಆಗುತ್ತದೆ......

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸರ್ಕಾರ ನಾವು ರೆಡಿಯಿದ್ದೇವೆ ಎಂದು ಹೇಳಲಿ. ಅವರ ಆಡಳಿತದ ಬಗ್ಗೆ ಅವರಿಗೆ ವಿಶ್ವಾಸ ಇದ್ದರೆ ಅವರು ಆ ರೀತಿ ಹೇಳಲಿ.

ಅಧ್ಯಕ್ಷರು : ಈ ಚರ್ಚೆಯಲ್ಲೇ ಒಂದು ಗಂಟೆ ಹೋಯಿತು. ಶೆಟ್ಟರ್‌ರವರೇ, ದಯವಿಟ್ಟು ಕೇಳಿ. Question hour ಗೆ ನಾನು ಇನ್ನೊಂದು ದಿವಸ ಅಲೌ ಮಾಡುತ್ತೇನೆ. ಇವತ್ತು ಯಾವ್ಯಾವ ಪ್ರಶ್ನೆಗಳು ಬಂದಿವೆಯೋ ಆ ಪ್ರಶ್ನೆಗಳನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. ಆದ್ದರಿಂದ ಶೆಟ್ಟರ್‌ರವರೇ, ನೀವು ದಯವಿಟ್ಟು ಪ್ರಾರಂಭ ಮಾಡಿ.

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೇ, ತಾವು ದಯವಿಟ್ಟು ಹಠಹಿಡಿಯಬೇಡಿ. ಇದನ್ನು ತಾವು ದಯವಿಟ್ಟು ಪುನರ್‌ಪರಿಶೀಲನೆ ಮಾಡಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮುಳಬಾಗಿಲು ತಾಲ್ಲೂಕಿನಲ್ಲಿ ನಾವು ನೋಡುತ್ತಿದ್ದೇವೆ, ಎಲ್ಲೂ ದನಗಳಿಗೆ ಮೇವು ಇಲ್ಲ.

ಅಧ್ಯಕ್ಷರು : ಅದನ್ನು ನೋಡಿದ್ದಕ್ಕೋಸ್ಕರವೇ ನಾನು ಅಲೋ ಮಾಡಿರುವುದು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರಿಗೆ ಏನು ಚರ್ಚೆ ನಡೆದಿದೆ ಎಂಬುದು ಗೊತ್ತಿಲ್ಲ. ಈಗ ಬಂದಾಕ್ಷಣವೇ ಹೀಗೆ ಮಾತನಾಡುತ್ತಿದ್ದಾರೆ. ಈಗಾಗಲೇ ಎಲ್ಲರೂ ಮಾತನಾಡಿದ್ದಾರೆ.

ಶ್ರೀ ಕೆ. ಶ್ರೀನಿವಾಸ ಗೌಡ (ಕುಡುವನಹಳ್ಳಿ) : ಇವತ್ತು ಇಂತಹ ಪರಿಸ್ಥಿತಿ ಇರುವುದರಿಂದ ತಾವು ದಯವಿಟ್ಟು ನಿಲುವಳಿ ಸೂಚನೆಗೆ ಅವಕಾಶವನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು : ನಾನು ಬೇರೆ ರೂಪದಲ್ಲಿ ಅಲೋ ಮಾಡಿದ್ದೇನೆ. ನಿಯಮ 69ರಲ್ಲಿ ನಾನು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಕೆ. ಶ್ರೀನಿವಾಸ ಗೌಡ (ಕುಡುವನಹಳ್ಳಿ) : ನಿಲುವಳಿ ಸೂಚನೆಗೆ ತಾವು ಅವಕಾಶವನ್ನು ಕೊಡದೇ ಇದ್ದರೆ, ತಾವು ಆ ತರಹ ಮಾಡಲಿಲ್ಲ ಎಂದರೆ ನಮ್ಮ ಅಧ್ಯಕ್ಷರು ನಿಲುವಳಿ ಸೂಚನೆಗೆ ಅವಕಾಶ ಕೊಟ್ಟಿಲ್ಲ ಎಂದು ನಾನು ಊರು ತುಂಬ ಹಳ್ಳಿಹಳ್ಳಿಗೆ ಹೋಗಿ ಹೇಳುತ್ತೇವೆ. ತಾವು ದಯವಿಟ್ಟು ಅರ್ಥಮಾಡಿಕೊಳ್ಳಿ. ರಾಜ್ಯದಲ್ಲಿ ಬಹಳ ಭೀಕರವಾದ ಪರಿಸ್ಥಿತಿ ಇರುವುದರಿಂದ ತಾವು ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ಚಂದ್ರೇಗೌಡರು ಹೇಳಿದ ಪ್ರಕಾರ ಅವರು ಚರ್ಚೆಗೆ ತಯಾರಿದ್ದಾರೆ. ಅದು ಯಾವ ರೂಪದಲ್ಲಿ ನಡೆಯಬೇಕು ಎನ್ನುವಂಥಾದ್ದು ಒಂದೇ ಪ್ರಶ್ನೆ ಬರುವಂಥಾದ್ದು. ಅವರು ಚರ್ಚೆಗೆ ತಯಾರಾಗಿದ್ದಾರಲ್ಲವೆ? ಈಗಾಗಲೇ ಮಾನ್ಯ ಹಿರಿಯ ಶಾಸಕರು, ನಾಯಕರುಗಳು ಹೇಳಿದರು. ಇಲ್ಲಿ ಓಟಿಂಗ್‌ನ ಒಂದು ಪ್ರಶ್ನೆ ಬರುತ್ತದೆ. ವಿಶ್ವೇಶ್ವರ ಹೆಗಡೆಯವರು ಏಕೆ ಓಟಿಂಗ್ ಮಾಡಬೇಕು ಎನ್ನುವುದರ ಬಗ್ಗೆ ಹೇಳಿದರು. ಇಲ್ಲಿ ಬರಗಾಲದಿಂದ ಇಡೀ ರಾಜ್ಯ ತತ್ತರಿಸುವಂಥ ಪರಿಸ್ಥಿತಿ ಇದ್ದಾಗ ತಾವು ಇದನ್ನು ಆದ್ಯತೆ ಮೇರೆಗೆ ತೆಗೆದುಕೊಂಡು ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡಿದರೆ ಇದಕ್ಕೆ ಒಂದು ಅರ್ಥ ಇರುತ್ತದೆ. ಅದಕ್ಕಾಗಿ ಇವತ್ತು ದಯವಿಟ್ಟು ಅವರು ಚರ್ಚೆಗೆ ತಯಾರಾಗಿದ್ದಾಗ ಮಾನ್ಯ ಅಧ್ಯಕ್ಷರೇ, ತಾವು ಮನಸ್ಸು ಮಾಡಬೇಕು. ದಯವಿಟ್ಟು ತಾವು ಔದಾರ್ಯವನ್ನು ತೋರಿಸಿ ಇವತ್ತು ಏನು ರೂಲಿಂಗ್‌ನ್ನು ಕೊಟ್ಟಿದ್ದೀರಿ ಅದನ್ನು ರೀಕನ್ಸಿಡರ್ ಮಾಡಬೇಕು ಮತ್ತು ಮಾನ್ಯ ಚಂದ್ರೇಗೌಡರು ದಯವಿಟ್ಟು ಹೇಳಿಬಿಡಲಿ ಏನೆಂದರೆ ನಿಲುವಳಿ ಸೂಚನೆ ಮುಖಾಂತರ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆ ಎಂದ) ಮಾನ್ಯ ಸಭಾಧ್ಯಕ್ಷರು ಆ ರೀತಿ ರೂಲಿಂಗ್ ಕೊಟ್ಟರೂ ಅಡ್ಡಿಯಿಲ್ಲ ಎನ್ನುವಂಥ ಮಾತನ್ನು ಚಂದ್ರೇಗೌಡರು ಹೇಳಿದರೆ ಇದರಲ್ಲಿ ಯಾವುದೇ ಪ್ರತಿಷ್ಠೆ ಇಲ್ಲ ಎಂದು ಆಗುತ್ತದೆ. ಸರ್ಕಾರ ಎಲ್ಲ ರೀತಿಯಿಂದ ಚರ್ಚೆ ಮಾಡುವುದಕ್ಕೆ ತಯಾರಿದೆ. ಇವತ್ತು ನಿಯಮ 60ರ

ಪ್ರಕಾರವೇ ಅವರು ಚರ್ಚೆ ಮಾಡುವುದಕ್ಕೆ ತಯಾರಿದ್ದಾರೆ. ಆದ್ದರಿಂದ ನಿಲುವಳಿ ಸೂಚನೆಯನ್ನು ಪ್ರಾರಂಭ ಮಾಡೋಣ ಎಂದು ತಾವು ಹೇಳಿದರೆ ಒಳ್ಳೆಯದಾಗುತ್ತದೆ. ಅದಕ್ಕಾಗಿ ನಾವು ಕೂಡ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ದಯವಿಟ್ಟು ನಿಲುವಳಿ ಸೂಚನೆ ಮುಖಾಂತರವೇ ಚರ್ಚೆ ಮಾಡುವುದಕ್ಕೆ ಸರ್ಕಾರ ಸಹಕಾರ ಕೊಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರತಿಷ್ಠೆ ಇಲ್ಲವೇ ಇಲ್ಲ. ನಾನು ಕೇಳುತ್ತಾ ಇರುವುದು ಇಷ್ಟೇ......

ಶ್ರೀ ಬಿ. ಸೋಮಶೇಖರ್ : ನೀವು ಇದನ್ನು ಪ್ರತಿಷ್ಠೆಯಾಗಿ ಮಾಡಬೇಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಹೆಗಡೆಯವರು, ಮಲ್ಲಿಕಾರ್ಜುನ್‌ರವರು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಸ್ತಾಪ ಮಾಡಿದ್ದಾರೆ. ಆದರೆ ಇದಕ್ಕೆ ನೋಟೀಸ್ ಎಲ್ಲಿದೆ? ಯಾರದ್ದಾದರೂ ನೋಟಿಸ್ ಇರಬೇಕಲ್ಲಾ? ರೂಲ್ 69 ಅಂದರೆ it is on matters of urgent public importance for short duration. For voting ಓಟಿಂಗ್ ಬೇಕು ಎಂದು ಕೇಳುವವರು there should be a notice. None of them........ have given notice.

ಶ್ರೀ ಅರಗ ಜ್ಞಾನೇಂದ್ರ : ನಾವು ನೋಟಿಸ್ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೇ, ತಮ್ಮ ಕಾರ್ಯಾಲಯದಲ್ಲಿ ನೋಟೀಸ್‌ನ್ನು ಕೊಟ್ಟಿದ್ದೇವೆ.

12.00 ಪಿ.ಎಂ.

ಅಧ್ಯಕ್ಷರು : ಏಕೆ ಎಲ್ಲರೂ ಒಂದೇ ಸಲ ಎದ್ದು ನಿಂತು ಮಾತನಾಡುತ್ತೀರಿ?

ಈ ಹಂತದಲ್ಲಿ ಬಿ.ಜೆ.ಪಿ. ಮತ್ತು ಪ್ರಗತಿಪರ ಜನತಾ ದಳದ ಸದಸ್ಯರುಗಳು ಬಾವಿಗೆ ಬಂದರು)

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಕಾನೂನು ಸಚಿವರು ಈ ಸದನವನ್ನು ಬಹಳ ಹಗುರವಾಗಿ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಪ್ರತಿಭಟನೆ ಮಾಡುತ್ತಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಸ್ಪೀಕರ್‌ರವರಿಗೆ ಗೌರವವನ್ನು ಕೊಡುವುದನ್ನು ಕಲಿತುಕೊಳ್ಳಿ. ಮೊದಲು ಸ್ಪೀಕರ್ ಜೊತೆ ಗೌರವವಾಗಿ ನಡೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಚಂದ್ರೇಗೌಡರೆ, ಅವರು ಅಡ್‌ಜರ್ನ್‌ಮೆಂಟ್ ಮೋಷನ್ 9 ಗಂಟೆಗೆ ಕೊಟ್ಟಿದ್ದಾರೆ. ಅದನ್ನು ತಮ್ಮ ಕಛೇರಿಗೆ 9–30ಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅವರೇನೂ 69ರ ಮೇರೆಗೆ ಕಳುಹಿಸಿಲ್ಲ. I have converted it as rule 69 ಅವರು ಕೊಟ್ಟಿರುವುದು ಅಡ್‌ಜರ್ನ್‌ಮೆಂಟ್ ಮೋಷನ್‌ನೇ. 69ರ ಮೂಲಕ ನಾನು ಅದನ್ನು ಕನ್‌ವರ್ಟ್ ಮಾಡಿದ್ದೇನೆ ಅಷ್ಟೇ 69ರ ಮೂಲಕ ಅವರು ಕೊಡಬೇಕಾಗಿಲ್ಲ. ನಾನು ಅದನ್ನು ಕನ್‌ವರ್ಟ್ ಮಾಡಿದ್ದೇನಷ್ಟೆ. ತಾವು ಏತಕ್ಕೆ ಗಲಾಟೆ ಮಾಡುತ್ತೀರಿ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರಿಗೆ ಅಧ್ಯಕ್ಷರ ಬಗ್ಗೆ ಗೌರವವಿಲ್ಲ. ನಿಯಮಾವಳಿಯ ಮಸ್ತಕದ ಬಗ್ಗೆ ಗೌರವವಿಲ್ಲ. ನಾನು ಪ್ರಶ್ನೆ ಮಾಡತಕ್ಕದ್ದು.......

(ಗೊಂದಲ)

ಶ್ರೀ ಎನ್. ಸಂಪಂಗಿ : ವಿರೋಧ ಪಕ್ಷದವರು ಬಹಳ ಅನ್ಯಾಯ ಮಾಡುತ್ತಿದ್ದಾರೆ. ಅಂಥದ್ದೇನಾದರೂ ಚರ್ಚೆ ಮಾಡುವುದಿದ್ದರೆ ಮೊದಲು ಪ್ರಶ್ನೋತ್ತರಕ್ಕೆ ಅವಕಾಶ ಕೊಡಲಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಸ್ಪೀಕರ್‌ರವರ ರೂಲಿಂಗ್‌ನ್ನೇ ಪ್ರಶ್ನೆ ಮಾಡತಕ್ಕದ್ದು.......

ಶ್ರೀ ಎನ್. ಸಂಪಂಗಿ : ವಿರೋಧ ಪಕ್ಷದವರು ಸದನವನ್ನು ಬಹಳ ಬೇಜವಾಬ್ದಾರಿಯಿಂದ ನಡೆಸಿಕೊಳ್ಳುತ್ತಿದ್ದಾರೆ. ಸದನವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರಿಗೆ ಚರ್ಚೆ ಬೇಕಾಗಿಲ್ಲ. ಪ್ರಚಾರ ಬೇಕಾಗಿದೆ ಅಷ್ಟೇ

(ಗೊಂದಲ)

ಅಧ್ಯಕ್ಷರು : ಅವರು ಕೊಟ್ಟಿಲ್ಲ. ನಾನು ಅಡ್‌ಜರ್ನ್‌ಮೆಂಟ್ ಮೋಷನ್ ಅನ್ನು, ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆ.

ಶ್ರೀ ಸಿ. ಬೈರೇಗೌಡ : ತಾವು ಚರ್ಚೆಗೆ ಒಪ್ಪಿದ್ದೀರಿ, ಪ್ರಶ್ನೋತ್ತರ ವೇಳೆಯನ್ನು ಮುಂದುವರೆಸಲು ಒಪ್ಪಿದ್ದೀರಿ, ಈ ವಿಚಾರದಲ್ಲಿ ಬಹಳ ಹೆಜ್ಜೆಗಳನ್ನು ಮುಂದೆ ಇಟ್ಟುಕೊಂಡು ಬಂದಿದ್ದಿರಿ, ಇನ್ನು ಇರತಕ್ಕದ್ದು ಒಂದೇ ಒಂದು ಹೆಜ್ಜೆ ಇದನ್ನು ನಿಯಮ 69ರ ಬದಲಾಗಿ 60ರಲ್ಲಿ ತೆಗೆದುಕೊಳ್ಳುತ್ತೇನೆ ಎನ್ನತಕ್ಕದ್ದನ್ನು ತಾವು ಹೇಳಿದರೆ ಮುಗಿದು ಹೋಯಿತು ಬಹಳ ಸುಗಮವಾಗಿ ಚರ್ಚೆ ನಡೆಯುತ್ತದೆ.

ಶ್ರೀ ಜಗದೀಶ್‌ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಪ್ರಶ್ನೋತ್ತರ ಬೇಡ ಚರ್ಚೆ ಮಾಡಿ ಎಂದು ತಾವೇ ಮಾನ್ಯ ಅಧ್ಯಕ್ಷರು ಹೇಳಿದ್ದೀರಿ. ದಯಮಾಡಿ ಇದನ್ನು ರೀಕನ್‌ಸಿಡರ್ ಮಾಡಿ ನಿಲುವಳಿ ಸೂಚನೆಗೆ ಚರ್ಚೆ ಪ್ರಾರಂಭ ಮಾಡಲು ಹೇಳಿ ಅಷ್ಟೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಸರ್ಕಾರ ಪ್ರತಿಷ್ಠೆಯ ಮೇಲೆ ನಿಲ್ಲಬಾರದು ಈಗಾಗಲೇ ಇದರ ಬಗ್ಗೆ ಒಂದೂವರೆ ಗಂಟೆಗಳ ಕಾಲ ಚರ್ಚೆಯಾಗಿದೆ. 69ರ ಬದಲಾಗಿ 60 ಅಡಿಯಲ್ಲಿ ಸರ್ಕಾರ ಚರ್ಚೆಗೆ ತೆಗೆದುಕೊಳ್ಳಲಿ ಅಷ್ಟೇ. ವಿರೋಧ ಪಕ್ಷದವರ ಜೊತೆಗೆ ದಯಮಾಡಿ ಸಹಕಾರ ಕೊಡಬೇಕು.

(ಗೊಂದಲ)

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ತಾವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ಆದರೂ ಅವರು ತಮ್ಮ ರೂಲಿಂಗ್ ಬಗ್ಗೆಯೇ ಪ್ರಶ್ನೆ ಮಾಡುತ್ತಿದ್ದಾರೆ, ಇದು ಸರಿಯೇ?

(ಗೊಂದಲ)

ಅಧ್ಯಕ್ಷರು : ರೂಲ್ 96ರ ಕೆಳಗಡೆ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಆದ್ದರಿಂದ ದಯವಿಟ್ಟು ಅವರವರ ಜಾಗಗಳಿಗೆ ಹೋಗಿ. ತಾವು ಯಾವ ಮೂಲಕವಾದರೂ ಚರ್ಚೆ ಮಾಡಿ ಎಂದು ಅವರು ಹೇಳಿದ್ದಾರೆ. I have allowed the discussion under Rule 69.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ತಾವು ನಿಯಮ 69ರ ಬದಲಾಗಿ 60ರ ಅಡಿಯಲ್ಲಿ ಎಂದು ಒಪ್ಪಿಕೊಂಡುಬಿಡಿ.

ಅಧ್ಯಕ್ಷರು : ನಾನು ಚರ್ಚೆಗೆ ಅಲೋ ಮಾಡಿದ್ದೇನಲ್ಲಾ? ನಾನು ಚರ್ಚೆಗೆ ಅಲೋ ಮಾಡದಿದ್ದರೆ ಬೇರೆ ವಿಚಾರ, ಬಹಳ ಮುಖ್ಯವಾಗಿದೆಯೆಂದು ನಾನೇ ಚರ್ಚೆಗೆ ಅಲೋ ಮಾಡಿದ್ದೇನಲ್ಲಾ. ತಮಗೆ ಚರ್ಚೆ ಬೇಕು ಮಾಡಿ. ತಾವು ಚರ್ಚೆಯನ್ನು ಪ್ರಾರಂಭ ಮಾಡಬಹುದು. ಮಾಡಿ.

ಶ್ರೀ ಜಗದೀಶ್‌ಶೆಟ್ಟರ್ : ಇದಕ್ಕಿಂತಲೂ ಗಂಭೀರವಾದಂಥ ಪರಿಸ್ಥಿತಿ ಯಾವುದೂ ಇಲ್ಲ. ಇದರಲ್ಲಿ ಯಾವುದೇ ಪ್ರತಿಷ್ಠೆ ಬೇಡ. ಇದರಲ್ಲಿ ಸರ್ಕಾರ ಪ್ರತಿಷ್ಠೆ ಮಾಡುವುದು ಬೇಕಾಗಿಲ್ಲ. ಈ ನಿಯಮಾ, ರೂಲ್ಸ್ ಎಂದು ಸರ್ಕಾರದವರು ಪ್ರತಿಷ್ಠೆ ಮಾಡಿಕೊಳ್ಳುವುದು ಬೇಕಾಗಿಲ್ಲ. ಚರ್ಚೆ ಮಾಡಲು ಒಪ್ಪಿಕೊಂಡಾದಮೇಲೆ ನಿಯಮ 69ರ ಬದಲಾಗಿ 60ರ ಅಡಿಯಲ್ಲಿ ಚರ್ಚೆಗೆ ಒಪ್ಪಿಕೊಂಡು ಬಿಟ್ಟರೆ ಸಾಕು.

ಶ್ರೀ ಆರಗಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ತಾವು ಹಿಂದಿನ ನಡವಳಿಕೆಯನ್ನು ಉಲ್ಲೇಖ ಮಾಡಿದಿರಿ, ಹಾಗೆ ಮುಂದಿನ ಸ್ಪೀಕರ್‌ರವರು ತಮ್ಮ ನಡವಳಿಯನ್ನು ಉಲ್ಲೇಖ ಮಾಡಲು ಇದು ರೆಕಾರ್ಡ್ ಆಗಲಿ. ದಯವಿಟ್ಟು ಈ ಸಂದರ್ಭದಲ್ಲಿ ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಿ. ದೊಡ್ಡ ಮನಸ್ಸು ಮಾಡಿ ಅವಕಾಶ ಕೊಡಿ.

ಅಧ್ಯಕ್ಷರು : ನಾನು ಕನ್‌ವೆನ್‌ಷನ್‌ನ್ನು ಫಾಲೋ ಮಾಡಬೇಕಲ್ಲಾ? ಇಲ್ಲಿ ದೊಡ್ಡ ಮನಸ್ಸಿನ ಪ್ರಶ್ನೆ ಬರುವುದಿಲ್ಲ. I have allowed the discussion.

ಶ್ರೀ ಆರಗಜ್ಞಾನೇಂದ್ರ : ದಯವಿಟ್ಟು ರೀ ಕನ್‌ಸಿಡರೇ ಮಾಡಬೇಕು.

ಅಧ್ಯಕ್ಷರು : ದಯಮಾಡಿ ಸುಮ್ಮನೆ ಇರಿ. ಮಾನ್ಯ ಜಗದೀಶ್‌ಶೆಟ್ಟರ್‌ರವರೇ ಚರ್ಚೆಯನ್ನು ಪ್ರಾರಂಭ ಮಾಡಿ.

(ಗೊಂದಲ)

ಅಧ್ಯಕ್ಷರು : ಈಗ ಸಮಯ 12 ಗಂಟೆ 10 ನಿಮಿಷ, We will meet once again at 12.00 ಪಿ.ಎಂ. ದಯವಿಟ್ಟು ನಾಯಕರುಗಳೆಲ್ಲಾ ಬನ್ನಿ

(ಸದನವು 12 ಗಂಟೆ 10 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 12 ಗಂಟೆ 30 ನಿಮಿಷಕ್ಕೆ ಸೇರಲು ನಿರ್ಧರಿಸಿತು)

(ಸದನವು ಪುನಃ 1.30ಕ್ಕೆ ಪ್ರಾರಂಭವಾಯಿತು)

(ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ವಿಷಯ : ಬರಗಾಲ ಪರಿಸ್ಥಿತಿ ಚರ್ಚೆಯನ್ನು ನಿಯಮ 60ರ ಕೆಳಗೆ ತೆಗೆದುಕೊಳ್ಳುವ ಬಗ್ಗೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ವಿನಂತಿ ಮಾಡಿಕೊಂಡಿದ್ದೇವೆ. ಇದೊಂದು ರಾಜ್ಯ ವ್ಯಾಪ್ತಿಪ್ರಾಮುಖ್ಯವಾದ ವಿಷಯವಾದುದರಿಂದ ಇದನ್ನು ನಿಲುವಳಿ ಸೂಚನೆ ಮುಖಾಂತರ ಪ್ರಸ್ತಾಪ ಮಾಡುವ ಉದ್ದೇಶದಿಂದ

ಮತ್ತು ಅದಕ್ಕೆ ಪ್ರಾಮುಖ್ಯತೆ ಸಿಗಲಿ ಎನ್ನುವ ಉದ್ದೇಶದಿಂದ ಮಾಡಿದ್ದೇವೆ. ಸರ್ಕಾರದವರೂ ಹೇಳಿದ್ದಾರೆ. ಚಂದ್ರೇಗೌಡರು ಹೇಳಿದ್ದಾರೆ, ಚರ್ಚೆ ಮಾಡುವುದಕ್ಕೆ ನಮ್ಮ ಅಡ್ಡಿ ಇಲ್ಲ, ಯಾವುದೇ ರೂಪದಲ್ಲಿ ಇರಲಿ ಎನ್ನುವುದು....

ಅಧ್ಯಕ್ಷರು : ಚರ್ಚೆ ಮಾಡಿ ಎಂದು ನಾವು ಅಲೋ ಮಾಡಿದ್ದೇವೆ. ನೀವು ಚರ್ಚೆ ಮಾಡಲಿಲ್ಲವೆಂದರೆ ನಾವು ಏನು ಮಾಡುವುದು?

ಶ್ರೀ ಜಗದೀಶ್ ಶೆಟ್ಟರ್ : ನಾವು ನಿಲುವಳಿ ಸೂಚನೆ ಕೊಟ್ಟಿರುವುದು ಇದಕ್ಕೆ ಪ್ರಾಮುಖ್ಯತೆ ಬರಲಿ ಎಂದು. ರೂಲ್ 69ರ ಪ್ರಕಾರ ಸಾರ್ವಜನಿಕ ಮಹತ್ವದ ಸಾಕಷ್ಟು ವಿಷಯಗಳು ಇವೆ ಅವುಗಳ ಬಗ್ಗೆ ರೂಲ್ 69ರಲ್ಲಿ ನೋಟಿಸ್ ಕೊಟ್ಟಿದ್ದೇವೆ. ಇಡೀ ರಾಜ್ಯದಲ್ಲಿ ಪ್ರಾಮುಖ್ಯವಾದ ವಿಷಯ ಗ್ರಾಮೀಣ ಪ್ರದೇಶಗಳಲ್ಲಿ ಬರಗಾಲದ ಪರಿಸ್ಥಿತಿ ಏನು ಇದೆ ಎನ್ನುವುದು ವಿವರಣೆ ಕೊಡುವ ಸಲುವಾಗಿ ಈ ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ರೂಲ್ 60ರ ಪ್ರಕಾರ ಚರ್ಚೆ ಮಾಡುವ ಸಂದರ್ಭದಲ್ಲಿ ಅದಕ್ಕೆ ಒಂದು ಪ್ರಾಮುಖ್ಯತೆ ಇದೆ. ಬರಗಾಲದ ಪರಿಸ್ಥಿತಿ ಬಗ್ಗೆ ಜನರ ಗಮನ ಸೆಳೆಯುವುದು, ಸರ್ಕಾರದ ಮೇಲೆ ಒತ್ತಡ ತರುವುದೇ ನಮ್ಮ ಉದ್ದೇಶ ಹೊರತು ಬೇರೆ ಯಾವುದೇ ಉದ್ದೇಶ ಇಲ್ಲ. ರೂಲ್ 60 ಮತ್ತು 69 ಅನ್ನು ಯಾವ ಉದ್ದೇಶದಿಂದ ತಂದಿದ್ದೇವೆ ಎನ್ನುವುದು ಈಗಾಗಲೇ ನಮ್ಮ ಶಾಸಕ ಮಿತ್ರರು ತಮ್ಮ ಗಮನಕ್ಕೆ ತಂದಿದ್ದಾರೆ. ಅದಕ್ಕಾಗಿ ತಾವು ದೊಡ್ಡ ಮನಸ್ಸು ಮಾಡಬೇಕು. ಸರ್ಕಾರಕ್ಕೆ ಪ್ರತಿರೋಧ ಬರಲಿಕ್ಕೆ ಇಲ್ಲ, ಅದಕ್ಕೆ ಅವರು ಪ್ರತಿಷ್ಠೆ ವಿಷಯ ಮಾಡಿಕೊಳ್ಳಬಾರದು ಎಂದು ಹೇಳುತ್ತೇನೆ. ಚರ್ಚೆ ಬೇಕೆಂದು ಒಂದು ಕಡೆ ಹೇಳುತ್ತಿದ್ದಾರೆ. ರೂಲ್ 60ರ ಪ್ರಕಾರ ಚಿಂತನೆ ಮಾಡುವುದಕ್ಕೆ ಅವರಿಗೆ ಏನು ಪ್ರತಿಷ್ಠೆ ಅಡ್ಡವಾಗಿದೆ ಎಂದು ನಾನು ಮಾನ್ಯ ಚಂದ್ರೇಗೌಡರಿಗೆ ಕೇಳಬಯಸುತ್ತೇನೆ. ರೂಲ್ 60ರ ಪ್ರಕಾರ ಚರ್ಚೆ ಮಾಡುವುದಕ್ಕೆ ನಮ್ಮ ತಕರಾರು ಇಲ್ಲವೆಂದು ಹೇಳಲಿ. ರೂಲ್ 60ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ನೀವು ಏಕೆ ಹಿಂದೇಟು ಹಾಕುತ್ತಿದ್ದೀರಿ? ಇದು ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ತಾವು ಅದಕ್ಕೆ ಮನಸ್ಸು ಮಾಡಿದ್ದೀರಿ, ನಾವು ಇಲ್ಲಿಯವರೆಗೆ ಏನು ವಿಷಯಗಳನ್ನು ಮಂಡನೆ ಮಾಡಿದ್ದೇವೆ. ಅದು ತಮಗೂ ಕನ್‌ವಿನ್ಸ್ ಆಗಿದೆ. ದಯವಿಟ್ಟು ರೂಲ್ 60ರ ಪ್ರಕಾರ ಈ ನಿಲುವಳಿ ಸೂಚನೆಯನ್ನು ಈ ಬರಗಾಲದ ಸಮಯದಲ್ಲಿ ಚರ್ಚೆ ಮಾಡುವುದಕ್ಕೆ ದಯವಿಟ್ಟು ತಾವು ಏನು ತೀರ್ಪು ಕೊಟ್ಟಿದ್ದೀರಿ. ಅದನ್ನು ರೀಕನ್‌ಸಿಡರ್ ಮಾಡಬೇಕು. ಸರ್ಕಾರವು ಕೂಡ ಪ್ರತಿಷ್ಠೆ ಬಿಟ್ಟು ರೂಲ್ 60ರ ಪ್ರಕಾರ ಚರ್ಚೆ ಮಾಡುವುದಕ್ಕೆ ಅವರೂ ಸಹಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಭಾಧ್ಯಕ್ಷರೆ. ನನಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದಸ್ಯರೆಲ್ಲರಿಗೂ ಕೂಡ ರಾಜ್ಯದಲ್ಲಿ ಇರತಕ್ಕಂತಹ ತೀವ್ರತರವಾದಂಥ ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡುವ ಕಳಕಳಿ ಏನಿದೆ ಅದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಆ ಚರ್ಚೆಯಲ್ಲಿ ನಾವು ಕೂಡ ಭಾಗವಹಿಸಬೇಕೆಂಬುದು ನಮ್ಮ ಆಸೆ. ನನ್ನ ಪ್ರಶ್ನೆ ಇಷ್ಟೆ. ರೂಲ್ 60ರಲ್ಲಿ ಚರ್ಚೆ ಆಗಬೇಕೆಂದರೆ ಅದರ ಹಿನ್ನೆಲೆ ಏನು? ರೂಲ್ 69ರಲ್ಲಿ discussion of matters of urgent public importance for short duration. ನಿಯಮ 69ರಲ್ಲಿ ರಾಜ್ಯದ ಹಿತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಬಹಳ ತುರ್ತಾಗಿ

ಇರತಕ್ಕಂತಹ ವಿಷಯಗಳನ್ನು ಪ್ರಾಮುಖ್ಯವಾದ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಈ ಸದನದಲ್ಲಿ ನಡೆಯತಕ್ಕಂತಹ ಎಲ್ಲಾ ಚರ್ಚೆ ಕೂಡ ಗಂಭೀರವಾಗಿ ನಡೆಯುತ್ತದೆ ಎಂಬುದು ನಮ್ಮ ಭಾವನೆ. ರೂಲ್ 69ರಲ್ಲಿ ನಡೆದರೆ ಲಘುವಾಗಿ ತೆಗೆದುಕೊಳ್ಳುವುದು, ರೂಲ್ 69ರಲ್ಲಿ ನಡೆದರೆ ಬಹಳ ಗಂಭೀರವಾಗಿ ತೆಗೆದುಕೊಳ್ಳುವ ಪದ್ಧತಿ ಇಲ್ಲ. ಆದ್ದರಿಂದ ಇವತ್ತು ಈ ವಿಷಯ ಚರ್ಚೆಯಾಗಬೇಕು ಎನ್ನುವುದು ಅಷ್ಟೇ ನಮ್ಮ ಉದ್ದೇಶ. ಆದರೆ ನಿಯಮ 60ರಲ್ಲಿ ಆಗಬೇಕು ನಿಯಮ 69ರಲ್ಲಿ ಇದು ಚರ್ಚೆಯಾಗಕೂಡದು ಎಂದು ಇವರು ಏನು ಪ್ರತಿಷ್ಠೆ ಪ್ರಶ್ನೆ ಮಾಡಿಕೊಂಡಿದ್ದಾರೆ ಅದು ತಪ್ಪು. ನಿಜವಾಗಿ ಈ ವಿಷಯದ ಬಗ್ಗೆ ಅವರಿಗೆ ಕಳಕಳಿ ಇಲ್ಲ ಎನ್ನುವುದರ ಬಗ್ಗೆ ಆಕ್ಷೇಪ ಎತ್ತಬೇಕಾಗುತ್ತದೆ. ಕಳಕಳಿ ಇದ್ದರೆ ಈಗಾಗಲೇ ನಾವು ಸುಮಾರು ಎರಡೂವರೆ ಗಂಟೆಗಳ ಕಾಲ ಸಮಯ ವ್ಯರ್ಥ ಮಾಡಿದ್ದೇವೆ. ಈ ಎರಡೂವರೆ ಗಂಟೆಗಳ ಕಾಲ ನಾವು ಬರಗಾಲದ ಬಗ್ಗೆ ಚರ್ಚೆ ಮಾಡಬಹುದಾಗಿತ್ತು. ಅದಕ್ಕಾಗಿ ಇವತ್ತು ಈಗಾಗಲೇ ತಾವು ಏನು ತೀರ್ಮಾನ ಕೊಟ್ಟಿದ್ದೀರಿ, ರೂಲ್ 60ರಲ್ಲಿ ಹಾಕಿರುವ ಮನವಿಯನ್ನು ರೂಲ್ 69ರಲ್ಲಿ ಚರ್ಚೆ ಮಾಡುವುದಕ್ಕೆ ನಮ್ಮೆಲ್ಲರ ಸಹಮತ ಇದೆ. ಸರ್ಕಾರ ಕೂಡ ಒಪ್ಪಿದೆ ಎಂದು ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ನಾವೂ ಕೂಡ ಆಡಳಿತ ಪಕ್ಷದವರೂ ಕೂಡ ಈ ಚರ್ಚೆಯಲ್ಲಿ ಭಾಗವಹಿಸಬೇಕೆಂದು ಕಾತುರತೆಯಿಂದ ಇದ್ದೇವೆ. ಇಡೀ ರಾಜ್ಯದಲ್ಲಿ ಇರತಕ್ಕಂತಹ ತೀವ್ರತರವಾದ ಬರಗಾಲ ಪರಿಸ್ಥಿತಿ ಹಿನ್ನೆಲೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ದಯಮಾಡಿ ನಮಗೆ ಅವಕಾಶ ಮಾಡಿಕೊಡಬೇಕು. ರೂಲ್ 69ರಲ್ಲಿ ಅತಿ ಗಂಭೀರವಾದ ವಿಷಯವನ್ನು ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಇರುವುದರಿಂದ ದಯಮಾಡಿ ರೂಲ್ 69ರಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬೇಕು. ಆದಷ್ಟು ಸಮಯವನ್ನು ವ್ಯರ್ಥ ಮಾಡುವುದರಲ್ಲಿ ಅರ್ಥ ಇಲ್ಲ. we are sending once again wrong signals to the people. ದಯಮಾಡಿ ರೂಲ್ 69ರಲ್ಲಿ ಡಿಸ್‌ಕಷನ್‌ಗೆ ಅಲೋ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಅಧ್ಯಕ್ಷರೆ, ಪ್ರಮುಖವಾದ ಈ ವಿಚಾರವನ್ನು ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧ ಇದೆ. ನಮ್ಮ ಬೇಡಿಕೆ ಇರುವುದು ರೂಲ್ 60ರಲ್ಲಿ ತೆಗೆದುಕೊಳ್ಳಬೇಕೆಂದು. ರೂಲ್ 60ರಲ್ಲಿ ಯಾವ ವಿಚಾರಗಳನ್ನು ತೆಗೆದುಕೊಳ್ಳಬೇಕು, ರೂಲ್ 69ರಲ್ಲಿ ಯಾವ ವಿಚಾರಗಳನ್ನು ತೆಗೆದುಕೊಳ್ಳಬೇಕೆಂದು ನಮ್ಮ ಪಕ್ಷದ ಹಿರಿಯ ಸದಸ್ಯರಾದ ಮಲ್ಲಿಕಾರ್ಜುನ್‌ರವರು ತಮ್ಮ ಗಮನಕ್ಕೆ ತಂದಿದ್ದಾರೆ. ರೂಲ್ 60ರಲ್ಲಿ ಇದುವರೆಗೆ ಯಾವುದೇ ವಿಚಾರಗಳನ್ನು ತೆಗೆದುಕೊಂಡಿಲ್ಲ. ಏಕೆಂದರೆ, ಸರ್ಕಾರ ರೂಲ್ 60ರಲ್ಲಿ ತೆಗೆದುಕೊಳ್ಳುವ ವಿಚಾರಗಳು ಇಲ್ಲದೇ ಇರಬಹುದು ಎಂಬ ಭಾವನೆ ಇರಬಹುದು. ಆದರೆ ನಮ್ಮ ಭಾವನೆಯಲ್ಲಿ ಎಲ್ಲಾ ಪಕ್ಷದ ಮುಖಂಡರು ಈ ವಿಚಾರ ಬಹಳ ಮಹತ್ತರವಾದ ವಿಚಾರ. ಇದರಲ್ಲಿ ಅನೇಕ ರೀತಿಯ ಅವ್ಯವಹಾರ ನಡೆದಿದೆ. ಭ್ರಷ್ಟಾಚಾರ ನಡೆದಿದೆ. ಸಮರ್ಪಕವಾದ ಕೆಲಸ ಆಗಲಿಲ್ಲ. ದುರುಪಯೋಗವಾಗಿದೆ. ಈ ಎಲ್ಲಾ ವಿಚಾರಗಳನ್ನು ಸಾರ್ವಜನಿಕ ಮಹತ್ವದ ವಿಚಾರವಾಗಿರುವುದರಿಂದ ಬೇರೆ ಎಲ್ಲಾ ವಿಚಾರಗಳನ್ನು ಬದಿಗೊತ್ತಿ ಇದನ್ನೇ ಎಕ್ಸ್‌ಕ್ಲೂಸೀವ್ ಆಗಿ ತೆಗೆದುಕೊಳ್ಳಬೇಕೆಂದು ನಿಯಮ 60ರಲ್ಲಿ ಇದೆ. ನಿಯಮ 60 ಎಂದರೆ, ಈ ಸಾರಿ ತಾವು ನಿಯಮಾವಳಿ ಬದಿಗೊತ್ತಿ ತೆಗೆದುಕೊಂಡರೆ ಅದು ಸಂಪೂರ್ಣ ಮುಗಿಯುವ ತನಕ ಬೇರೆ ವಿಚಾರಗಳನ್ನು ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಆಗ ಇದಕ್ಕೆ ಮಹತ್ವ ಸಿಗುತ್ತದೆ. ಇದರಲ್ಲಿ ನಮ್ಮ ಪಕ್ಷದ ಸದಸ್ಯರ ಕ್ಷೇತ್ರಗಳಲ್ಲಿ ಅವ್ಯವಹಾರ ಆಗಿದ್ದರೂ ಅವರು ನಮ್ಮನ್ನು

ಎಕ್ಸ್‌ಪೋಸ್ ಮಾಡುವ ಅವಕಾಶ ಇದೆ. ನಾವು ಹೇಳಬಹುದು. ಮತ ನೀಡುವಾಗ ಸಾರ್ವಜನಿಕವಾಗಿ ಈ ವಿಚಾರದಲ್ಲಿ ಯಾರ್‍ಯಾರು ಯಾವ ಯಾವ ನಿಲುವು ತೆಗೆದುಕೊಂಡಿದ್ದಾರೆಂಬುದು ಗೊತ್ತಾಗುತ್ತದೆ. ಇದು ನಮ್ಮ ಅಭಿಲಾಷೆ ಇದೆ. ಇದು ಏನು ಹೊಸದಾಗಿ ನಿಯಮಾವಳಿಯಲ್ಲಿ ಬಂದಿದ್ದು ಅಲ್ಲ. 1972ರಲ್ಲಿ ಇದೇ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಮಂತ್ರಿಗಳಾಗಿದ್ದರು, ನಮ್ಮ ವಿರೋಧ ಪಕ್ಷದನಾಯಕರಾಗಿದ್ದಂಥ ಶ್ರೀ ಮಾನ್ ಹೆಚ್.ಡಿ. ದೇವೇಗೌಡರು ಇದೇ ವಿಚಾರದಲ್ಲಿ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ನಮ್ಮ ಸರ್ಕಾರ ಇರುವಾಗ ನಾಲ್ಕು ಸಂದರ್ಭಗಳಲ್ಲಿ ನಿಯಮ 60ರ ಪ್ರಕಾರ ಅವಕಾಶ ಕೊಟ್ಟಿದ್ದೇವೆ. ಆಗ ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿ ಇದ್ದರು. ತಾವು ಈ ನಾಲ್ಕು ವರ್ಷಗಳಲ್ಲಿ ಒಂದೂ ಕೂಡ ಅವಕಾಶ ಕೊಡಲಿಲ್ಲ. ಒಂದು ಮಹತ್ತರವಾದ ವಿಚಾರಕ್ಕೆ ಅವಕಾಶ ಕೊಡಬೇಕು. ನಾವು ನಾಲ್ಕು ವರ್ಷಗಳಿಂದಲೂ ಸಹಕಾರ ಕೊಟ್ಟಿದ್ದೇವೆ. ಸರ್ಕಾರ ಜೊತೆ ಸಹಕಾರ ಕೊಟ್ಟಿದ್ದೇವೆ. ನಾವು ನಿಮಗೆ ಕೇಳುವುದು, ನಮ್ಮ ಬೇಡಿಕೆಗೆ ತಾವು ಒಂದು ಸಾರಿ ಸಹಕಾರ ಕೊಡಿ. ಇದು ಒಂದು ಸಾರಿ ಆದರೂ ಸಹಕಾರ ಕೊಡಿ. ನಾಲ್ಕು ವರ್ಷಗಳಲ್ಲಿ ಒಂದು ಸಾರಿಯೂ ಅವಕಾಶ ಕೊಟ್ಟಿಲ್ಲ. ಇದು ಬಹಳ ಮಹತ್ವದ ವಿಷಯವಾಗಿದೆ. ಇದನ್ನು ತಾವು ಪ್ರೆಸ್ಟೀಜಾಗಿ ಏಕೆ ತೆಗೆದುಕೊಳ್ಳುತ್ತೀರಿ? ತಾತ್ವಿಕವಾಗಿ ಈ ಚರ್ಚೆಗೆ ಒಪ್ಪಿಗೆ ಕೊಟ್ಟಿರುವುದರಿಂದ ನಿಯಮ 60ರಲ್ಲಿ ಒಪ್ಪಿಗೆ ಕೊಡಿ. ಏನೂ ತೊಂದರೆಯಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ದೊಡ್ಡ ಮನಸ್ಸು ಮಾಡಬೇಕು. ತಮಗೂ ಸಹ ಒಂದು ದೊಡ್ಡ ಕೀರ್ತಿ ಬರುತ್ತದೆ. ಮಾನ್ಯ ಅಧ್ಯಕ್ಷರು ಇಂತಹ ಮಹತ್ತರವಾದ ವಿಚಾರವನ್ನು ಧಾರಾಳವಾಗಿ ಚರ್ಚೆ ನಡೆಯುವುದಕ್ಕೆ ಅವಕಾಶ ಕೊಟ್ಟರು ಎಂದು ಮೆಸೇಜ್ ಹೋಗುತ್ತದೆ. ಇದರಲ್ಲಿ ಪಕ್ಷಪಾತ ಮಾಡುವುದು ಬೇಡ. ಪಕ್ಷಗಳ ಭಿನ್ನಾಭಿಪ್ರಾಯಗಳು ಬೇಡ. ಇದು ಎಲ್ಲಾ ಕ್ಷೇತ್ರಗಳಿಗೂ ಸಂಬಂಧಪಟ್ಟ ವಿಚಾರ. ದಯವಿಟ್ಟು ನಾವು ಮನವಿ ಮಾಡುತ್ತೇವೆ. ತಾವು ಕೊಟ್ಟಂಥ ತೀರ್ಪನ್ನು ಪುನರ್ ಪರಿಶೀಲಿಸಬೇಕೆಂದು, ಹಾಗೂ ನಿಯಮ 60ರ ಪ್ರಕಾರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಮ್ಮ ಒತ್ತಾಯ.

+ ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಅಧ್ಯಕ್ಷರೆ, ದಯಮಾಡಿ, ಎಲ್ಲಾ ಪಕ್ಷಗಳ ಮುಖಂಡರು ನಿಮ್ಮಲ್ಲಿ ಪರಿಪರಿಯಾಗಿ ವಿನಂತಿ ಮಾಡುತ್ತೇವೆ. ಈ ರಾಜ್ಯದ ಮಹತ್ವದ ವಿಚಾರವಾದ ಕಾರಣ ತಾವು ನಿಯಮ 60ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟು ರಾಜ್ಯದ ಜನತೆಗೆ ನ್ಯಾಯ ದೊರಕಿಸಿ ಕೊಡಬೇಕೆಂದು ನಮ್ಮ ಪಕ್ಷವತಿಯಿಂದ ವಿನಂತಿ ಮಾಡುತ್ತೇವೆ.

+ ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಅಧ್ಯಕ್ಷರೆ, ನಮ್ಮ ಮಿತ್ರರರಿಗೆ ಬರದ ಬಗ್ಗೆ ಏನು ಕಾಳಜಿ ಇದೆ. ಅಷ್ಟೇ ಕಾಳಜಿ ನಮಗೂ ಇದೆ ಎಂದು ಅವರಿಗೂ ಮನವರಿಕೆ ಆಗಿದೆ. ಆದರೂ ಸಹ ಚರ್ಚೆಗೆ ನಾವು ಒಪ್ಪಿದ್ದೇವೆ. ಸರ್ಕಾರ ಒಪ್ಪಿದೆ. ನೀವು ಒಪ್ಪಿದ್ದೀರಿ, ಇನ್ನು ಸಮಸ್ಯೆ ಎಲ್ಲಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಈಗ ಅವರಿಗೆ They want to censure the Government. That is all the whole trick of the trade.Censure of the Governmentಗೆ ಚರ್ಚೆಗೆ ಬೇಕಾದಷ್ಟು ಅವಕಾಶಗಳು ಬರುತ್ತವೆ. 30 ದಿನಗಳಲ್ಲಿ ಬೇಕಾದಷ್ಟು ಚರ್ಚೆ ಆಗುತ್ತದೆ. ಆ ಚರ್ಚೆಗಳನ್ನು ಸೆನ್ಸೂರ್ ಮಾಡುವುದಕ್ಕೆ You are very particular about it. ಡಿಸ್ಕಷನ್ ಸೀರಿಸ್ ಆಗಿದ್ದರೆ why are you bothered about other things? ಅಪೋಸಿಷನ್ ಮಿತ್ರರೆಲ್ಲರೂ ದಯಮಾಡಿ ಈ ಚರ್ಚೆಗೆ ಏನು ಅವಕಾಶ ಕೊಟ್ಟಿದ್ದಾರೆ. ನಮಗೂ

ಕೂಡ ಅವಕಾಶ ಸಿಗುತ್ತದೆ. ಇದನ್ನು ಒಪ್ಪಿಕೊಳ್ಳಬೇಕು ಅದರಿಂದ ನಾವೂ ಕೂಡ ನಿಮ್ಮ ಜೊತೆ ಕೈ ಜೋಡಿಸುತ್ತೇವೆ. ತಪ್ಪಾಗಿದ್ದರೆ ತಪ್ಪು ಎಂದು ನಾವು ಹೇಳುತ್ತೇವೆ. ಕಾರ್ಯಕ್ರಮಗಳು ಸರಿ ಇಲ್ಲ ಎಂದು ಇದ್ದರೆ ಅದರ ಬಗ್ಗೆಯೂ ನಾವು ಹೇಳುತ್ತೇವೆ. ಆದ್ದರಿಂದ ನಮಗೇನೂ ಬೇಜಾರಿಲ್ಲ. ಆದ್ದರಿಂದ ಮೊದಲು ಚರ್ಚೆಗೆ ಅವಕಾಶವನ್ನು ನಮಗೆ ಕಲ್ಪಿಸಿಕೊಡಿ. ಅದನ್ನು ಬಿಟ್ಟು ಕೊಶ್ಚನ್ ಹವರ್ ಬೇಡ. ಅದು ಬೇಡ. ಇದು ಬೇಡ ಎಂದರೆ ಹೇಗೆ? rule of law ನೇ ಬೇಡ ಎಂದರೆ ಹೇಗೆ ಸಾರ್? ಕೌಲ್ ಅಂಡ್ ಶೆಕ್ದರ್ ಪುಸ್ತಕ ತೆಗೆದು ಒಂದು ಹತ್ತು ನಿಮಿಷದಿಂದ ನಾನು ಓದುತ್ತಿದ್ದೇನೆ. In Parliament also in serious and more serious matters, ಕೂಡ they have allowed under Rule 69 only and not they were taken up under rule 60. You kindly look to the rulings given Kaul and Shakdher Book ಆದ್ದರಿಂದ ದಯಮಾಡಿ ನಾನು ಮಾನ್ಯ ಮಿತ್ರರಲ್ಲಿ ಕೇಳುತ್ತೇನೆ. ಇದೇನು ಈಗ ನಮಗೆ ಬೈಬಲ್ ಇದೆ ಅದೇ ಇಂಪಾರ್ಟೆನ್ಸ್ ಇರುವುದರಿಂದ ಅಷ್ಟೇ ಸೀರಿಯಸ್ ಇರುವುದರಿಂದ ದಯಮಾಡಿ ಮಾನ್ಯ ಮಿತ್ರರು ಇದರ ಬಗ್ಗೆ ಸಹಕಾರ ಕೊಡಬೇಕು. ಈಗಾಗಲೇ ಇದರ ಬಗ್ಗೆ ಕಳೆದೆರಡು ಗಂಟೆಗಳಿಂದ ಡಿಸ್‌ಕಶನ್ ಮಾಡಿದ್ದರೆ ಬಹಳ ಚೆನ್ನಾಗಿಯೇ ಚರ್ಚೆಯನ್ನು ಮಾಡಿ ಮುಗಿಸಬಹುದಿತ್ತು. ಈಗಲಾದರೂ kindly consider ಇನ್ನೊಂದು ವಿಷಯ ಮಾನ್ಯ ಅಧ್ಯಕ್ಷರೆ, 1871ರಲ್ಲಿ Bengal famine ಎಂದು ಬರಗಾಲ ಬಂದಿತ್ತು. ಬರಗಾಲ ಎಂಥದ್ದು ಅಂದರೆ ರಸ್ತೆ ರಸ್ತೆಯಲ್ಲೇ ಜನರು ಸತ್ತು ಹೋಗಿಬಿಟ್ಟರು. ಹೊಟ್ಟೆಗೆ ಅನ್ನ ನೀರು ಏನು ಇಲ್ಲದೇ ಸತ್ತುಹೋದರು. ಆ ಕಾಲದಲ್ಲಿ ಡೆಮಾಕ್ರಸಿ ಇರಲಿಲ್ಲ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ. ಇವೊತ್ತು ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಇದೆ. ಈಗ ಅವಕಾಶ ಸಿಕ್ಕಿದೆ. ಚರ್ಚೆ ಮಾಡುವುದಕ್ಕೆ ಅಲೊ ಮಾಡುತ್ತೇವೆ ಎಂದರೂ ಇವರು ಬೇಡ ಎಂದರೆ ಏನರ್ಥ ಸಾರ್? I can't understand it. ಚರ್ಚೆ ಬೇಕೋ, ಒಟ್ ಬೇಕೋ ಎನ್ನುವ ಪ್ರಶ್ನೆಯೂ ನಮಗೆ ಕಾಡುತ್ತದೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈಗಿನಿಂದ ಇನ್ನು ಒಂದು ವರ್ಷ ನಾಲ್ಕು ತಿಂಗಳು ನಮ್ಮ ಲೈಫ್. ಆ ಲೈಫ್ ಒಳಗಡೆ ಒಳ್ಳೆಯ ಅರ್ಥಗರ್ಭಿತವಾಗಿ ನಾವೆಲ್ಲಾ ಜೀವನ ಮಾಡೋಣ ಎನ್ನುವ ಒಂದು ಅಪೀಲನ್ನು ಅವರಲ್ಲಿ ನಾನು ಮಾಡುತ್ತೇನೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ತಾವು ನಿಯಮ 69ರಡಿಯಲ್ಲಿ ಮಾತ್ರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಷಯದ ಗಂಭೀರತೆಯನ್ನು ಗಮನಿಸಿಯೇ ಸರ್ಕಾರ ಯಾವುದೇ ಪ್ರತಿಷ್ಠೆ ಮೇಲೆ ನಿಲ್ಲದೇ ಈ ಚರ್ಚೆಯನ್ನು ಮಾಡುವುದಕ್ಕೆ ಮುಕ್ತ ಮನಸ್ಸಿನಿಂದ ಇದ್ದೇವೆ. ಚರ್ಚೆಯೂ ಮುಕ್ತವಾಗಿ ಆಗಬೇಕು ಎಂದು ಹೇಳುತ್ತೇವೆ. ಮುಕ್ತವಾಗಿ ಚರ್ಚೆ ಎಂದು ಹೇಳುವಾಗ ಅದನ್ನು ಪ್ರತಿಪಕ್ಷಗಳಿಗೆ ಮಾತ್ರ ಸೀಮಿತವಾಗಿ ಎಂದು ನಾನು ಹೇಳಲಿಲ್ಲ. ಚರ್ಚೆ ಮುಕ್ತವಾಗಿರಬೇಕು, ಎಲ್ಲರಿಗೂ ಚರ್ಚೆಯಲ್ಲಿ ಪಾಲ್ಗೊಳ್ಳಲು ಅವಕಾಶ ಇರಬೇಕು. ಆದರೆ ನಿಲುವಳಿ ಸೂಚನೆಯಲ್ಲಿ ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಯಾರು ಸಿಗ್ನೇಟರೀಸ್ ಇರುತ್ತಾರೋ ಅವರಿಗೆ ಮಾತ್ರ ಕೊಡಬೇಕು. ಇದರಲ್ಲಿ ತುಂಬಾ ರಿಸ್ಟ್ರಿಕ್ಷನ್ಸ್‌ಗಳಿವೆ. ಬಹಳ ಮುಖ್ಯವಾದ ರಿಸ್ಟ್ರಿಕ್ಷನ್ ಏನು ಎಂದರೆ The 'Closure of debate:- The Speaker may, if he is satisfied

that there has been adequate debate, put the question at 5 p.m. or at such other hour not being less than two hours from the time of commencement of the debate." ಅಂದರೆ ಏನು ಎರಡು ಗಂಟೆಯೊಳಗೆ ಡಿಬೇಟ್ ಮುಗಿಸಿಬಿಡಬೇಕು. ಆದರೆ ನಿಯಮ 69ರಲ್ಲಿ ಸ್ಕೋಪ್ ಏನಾಗುತ್ತದೆಂದರೆ ಅದು ವಿಸ್ತಾರವಾಗುತ್ತದೆ. ಸ್ಕೋಪ್ ವಿಸ್ತಾರವಾಗುತ್ತದೆ. ಅಡ್ಜೆರ್ನಮೆಂಟ್ ಮೋಷನ್‌ನ್ನು ಕನವರ್ಟ್ ಮಾಡಿದರೆ ಪ್ರತಿಪಕ್ಷಗಳು ಮಾತ್ರವಲ್ಲದೆ ಆಳುವ ಪಕ್ಷದವರೂ ಕೂಡ ಸಜಶನ್ ಕೊಡುವುದಕ್ಕೆ, ಅಥವಾ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಬಹುದೆಂದು ಅವರೂ ಕೂಡ ಹೇಳಿದ್ದಾರೆ. ಆದ್ದರಿಂದ ಆಳುವ ಪಕ್ಷದವರು ಹೇಳುವುದಕ್ಕೆ ಅವಕಾಶ ಸಿಗುತ್ತದೆ. ಈ ರೀತಿ ಮಾಡದಿದ್ದರೆ ಮತ್ತೊಂದು ಬಾರಿ ಆಳುವ ಪಕ್ಷ ಸೆಪರೇಟ್ ಆಗಿ ಚರ್ಚೆ ಮಾಡಬೇಕಾಗುತ್ತದೆ. ಪ್ರತಿಪಕ್ಷದವರು ಒಮ್ಮೆ ಚರ್ಚೆ ಮಾಡಿ ನಂತರ ಆಳುವ ಪಕ್ಷದವರು ಚರ್ಚೆ ಮಾಡಬೇಕಾಗುತ್ತದೆ. ಅಂದರೆ ವೈಡರ್ ಸ್ಕೋಪ್ ಸಿಗುತ್ತದೆ. ಆದರೆ ಅಡ್ಜೆರ್ನ್‌ಮೆಂಟ್ ಮೋಶನ್ ಆದರೆ ಇವೊತ್ತೇ ಚರ್ಚೆ ಮುಗಿಸಬೇಕಾಗುತ್ತದೆ. even if it is dead-night. ರೂಲ್ಸ್‌ನಲ್ಲಿ ಬಹಳ ರಿಸ್ಟ್ರಿಕ್ಷನ್ಸ್‌ಗಳಿವೆ. ಆ ಕಾರಣಕ್ಕಾಗಿಯೇ ನಾವೇನು ಮಾಡುತ್ತೇವೆ. ಸ್ಪೆಸಿಫಿಕ್ ಕೊಶ್ಚನ್ಸ್, ಸ್ಪೆಸಿಫಿಕ್ ಕೊಶ್ಚನ್, ಅದೂ ಅರ್ಜೆಂಟ್ ಪಬ್ಲಿಕ್ ಇಂಪಾರ್ಟೆನ್ಸ್, ಈ ಶಬ್ದಗಳನ್ನೆಲ್ಲಾ ಬಳಕೆ ಮಾಡುತ್ತಾರೆ. ಇದರಲ್ಲಿ ಸ್ಪೆಸಿಫಿಕ್ ಕೊಶ್ಚನ್ ಇಲ್ಲ, ಬರೀ ಬರದ ವಿಷಯ ಮಾತ್ರ ಅಲ್ಲ. ಬರದಲ್ಲಾಗಿರುವ ಅವಾಂತರಗಳೇನು, ಅಲ್ಲಿ ಯಾರಿಗೆ ಕೊಟ್ಟರು ಮತ್ತೊಬ್ಬರು, ಮಗದೊಬ್ಬರು ಎಂದು ಎಲ್ಲಾ ಇದೆ ಮೇಲಾಗಿ ಜವಾಬ್ದಾರಿ ಕೇವಲ ಸರ್ಕಾರದ ಮೇಲೆ ಇಲ್ಲ. ಜವಾಬ್ದಾರಿ ಪ್ರತಿಯೊಬ್ಬ ಸದಸ್ಯರ ಮೇಲೆ ಇದೆ. ಪ್ರತಿಯೊಬ್ಬ ಸದಸ್ಯರು ಯಾವ ಯಾವ ಕ್ಷೇತ್ರಗಳಲ್ಲಿ ಬರ ಕಾಮಗಾರಿಯನ್ನು ತೆಗೆದುಕೊಂಡಿದ್ದೇವೋ ಅಲ್ಲಿ ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ. Let us not forget that. ಆ ದೃಷ್ಟಿಯಿಂದ ಇವೆಲ್ಲವನ್ನೂ ಒಂದು ಕಡೆ ನಾವು ಇಟ್ಟರೂ ಕೂಡ, ಒಂದು ವೇಳೆ ಚರ್ಚೆ ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ. ರೂಲ್ 64ನೇ ಕೋಟ್ ಮಾಡುತ್ತಿದ್ದರು, ನಾನು ಅಲ್ಲಿಗೆ ಹೋಗಿರಲಿಲ್ಲ. ರೂಲ್ 64ರಲ್ಲಿ ಏನು ಹೇಳುತ್ತದೆಂದರೆ "The Speaker, if he does not give consent..... That is one part. If he does not give consent" that is another part. If he gives consent under Rule 60 and holds that the matter proposed to be discussed is in order, "shall after question hour and before the list of business" - Even if you given consent, if should be only after Question Hour. ತಾವು ಕೊಶ್ಚನ್ ಹವರ್‌ನ್ನು ಡಿಸ್‌ಪೆನ್ಸ್ ಮಾಡಿದ್ದೀರಿ What more the Hon. Members from the Opposition with such an experience and the senior colleagues of mine would say that. ತಾವು ತಪ್ಪು ಮಾಡಿದ್ದೀರಿ ಎಂದು ಹೇಳುವುದಕ್ಕಾಗುತ್ತದೆಯೇ? ಕೊಶ್ಚನ್ ಹವರ್‌ನ್ನು ಕೂಡ ಡಿಸ್‌ಪೆನ್ಸ್ ಮಾಡಿ ಇದಕ್ಕೆ ಇಂಪಾರ್ಟೆನ್ಸ್ ಕೊಟ್ಟಿದ್ದೀರಿ. ಪ್ರಶ್ನೋತ್ತರವನ್ನು ಮುಂದೂಡಿ ಮುಕ್ತವಾಗಿ ಚರ್ಚೆ ಮಾಡಲು ಎಲ್ಲಾ ಸದಸ್ಯರಿಗೂ ಅವಕಾಶವನ್ನು ಕಲ್ಪಿಸಿಕೊಡುವ ಸಲುವಾಗಿ ಈ ರೂಲ್ 60ರಲ್ಲಿ ಇರುವ ರಿಸ್ಟ್ರಿಕ್ಷನ್ಸ್‌ಗಳನ್ನು ಗಮನದಲ್ಲಿಟ್ಟುಕೊಂಡು ತಾವು ನಿಯಮ 69ಕ್ಕೆ ಬದಲಾವಣೆ ಮಾಡಿದ್ದೀರಿ. Merits of the case are different. I dont want to argue the case on the merit and the

second most important question is, ತಮ್ಮಿಂದ ಒಂದು ತೀರ್ಪು ಬಂದ ಮೇಲೆ ಆ ತೀರ್ಪನ್ನು ಗೌರವಿಸುವುದು ಮೊದಲು ನಮ್ಮ ಕೆಲಸ. ಆಮೇಲೆ ನೀವು ಇದರ ಬಗ್ಗೆ ಮರುಪರಿಶೀಲನೆ ಮಾಡಿ ಎಂದಾದರೂ ಕೇಳಿ, ಸರ್ಕಾರ ಒಪ್ಪುತ್ತದೋ ಬಿಡುತ್ತದೋ ಅದು ಬೇರೆ ಪ್ರಶ್ನೆ. ನಮ್ಮದೇನು ಪ್ರೆಸ್ಟೀಜ್ ಏನಿದೆ? ಚರ್ಚೆ ಆಗಬೇಕು ಎಂದಮೇಲೆ ಚರ್ಚೆ ಆಗಬೇಕು. ನಮಗೇನು ಸಂಖ್ಯೆಯ ಕೊರತೆ ಇದೆಯ್ಯೇ? ಇಲ್ಲ, ಸಂಖ್ಯೆಯ ಕೊರತೆ ಇಲ್ಲ. ಸಂಖ್ಯೆಯ ಕೊರತೆ ಖಂಡಿತಾ ಇಲ್ಲ. ಬಹುಮತ ಇರತಕ್ಕಂಥದ್ದನ್ನು ಸಾಬೀತುಪಡಿಸುವುದಕ್ಕೆ ಬೇರೆ ಮಾರ್ಗಗಳು ಇವೆ. ಆ ಮಾತು ಬೇರೆ. ನಾನು ಅದಕ್ಕೆ ಹೋಗುವುದಿಲ್ಲ. ಆದರೆ ಇವೊತ್ತು ಕಾಂಗ್ರೆಸ್ ಪಕ್ಷಕ್ಕೆ ರಾಜ್ಯವನ್ನು ಆಳಲು ಜನಾದೇಶ ಇನ್ನೂ ಜೀವಂತವಾಗಿದೆ. ಜ್ವಲಂತವಾಗಿದೆ. ಬದುಕಿದೆ. ಆದ್ದರಿಂದ ಯಾವ ರೂಪದಲ್ಲಾದರೂ ಚರ್ಚೆ ಮಾಡಲು ನಮ್ಮದೇನೂ ಅಭ್ಯಂತರವಿಲ್ಲ. ಆದರೆ ತಮ್ಮ ರೂಲಿಂಗ್‌ನ್ನು ಪುನಃ ಪ್ರಶ್ನೆ ಮಾಡಿ ಮರುಪರಿಶೀಲನೆ ಎಂದರೆ, ನನಗೆ ಗೊತ್ತಿರುವ ಹಾಗೆ ನಾನು ತಮ್ಮ ಜಾಗದಲ್ಲಿ ಕುಳಿತಾಗ ಅನೇಕ ಜನಗು ಚರ್ಚೆ ಮಾಡಿರುವುದನ್ನು ನಾನು ನೋಡಿದ್ದೇನೆ. ಅನೇಕ ಇವೆ. ಇಂಥ ಕನ್ಸೆಂಟ್ ಪುನರ್ ಪರಿಶೀಲನೆ ಮಾಡುವಂಥ ಮತ್ತೊಂದು ಉದಾಹರಣೆಯನ್ನು ನಾನು ನೋಡಿಲ್ಲ. ಹೊಸ ಉದಾಹರಣೆಗಳನ್ನು ಮಾಡಬಾರದು ಎಂದೇನೂ ಇಲ್ಲ. ಬೇಕಾದಷ್ಟು ಉದಾಹರಣೆಗಳು ಇವೆ. ಆದರೆ ಈ ಸಂದರ್ಭದಲ್ಲಿ ಪ್ರತಿಷ್ಠೆ ಯಾವುದಕ್ಕೆ? ಚರ್ಚೆಗೆ ಪ್ರತಿಷ್ಠೆಯೋ? ಇಲ್ಲಿ ಆಗಿರತಕ್ಕಂಥ ತಪ್ಪು ಸರಿಗಳನ್ನು ವಿಮರ್ಶೆ ಮಾಡುವುದಕ್ಕೆ ಪ್ರತಿಷ್ಠೆಯೋ ಅಥವಾ ಇಂಥ ನಿಯಮದಲ್ಲಿಯೇ ಚರ್ಚೆ ಮಾಡಬೇಕು ಎಂಬುದರಲ್ಲಿ ಪ್ರತಿಷ್ಠೆಯೋ? ಜನಹಿತ ತಾಂತ್ರಿಕವಾಗಿ, ಯಾವ ನಿಯಮ ಅಂದರೆ ನಿಯಮ 60 ರಲ್ಲಿ ಮಾಡಿದರೋ, 64 ರಡಿಯಲ್ಲಿ ಚರ್ಚೆ ಮಾಡಿದರೋ ಎಂಬುದರಲ್ಲಿ ಇಲ್ಲ. ಜನಹಿತ ಇರತಕ್ಕಂಥದ್ದು ಎಲ್ಲಿ ಎಂದರೆ, ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆಯಾಯಿತು ಮತ್ತು ಅದಕ್ಕೆ ಪ್ರಾಧಾನ್ಯತೆ ಸಿಕ್ಕಿತು ಎಂಬುದರಲ್ಲಿದೆ. ಏಕೆಂದರೆ ತಾವು ವಿಷಯದ ಗಂಭೀರತೆಯನ್ನು ಅರಿತುಕೊಂಡೇ ಕೊಶ್ಚನ್ ಹವರ್‌ನ್ನು ಸಸ್ಪೆಂಡ್ ಮಾಡಿದ್ದೀರಿ. ನಾನು ಇಲ್ಲಿ ಒಬ್ಬ ಸಾಮಾನ್ಯ ಸದಸ್ಯನಾಗಿ ಮಾತನಾಡುತ್ತಿದ್ದೇನೆಯೇ ಹೊರತು ಕಾನೂನು ಸಚಿವನಾಗಿ ಮಾತನಾಡುತ್ತಿಲ್ಲ. ಸಾಮಾನ್ಯ ಸದಸ್ಯನಾಗಿ ನಮ್ಮ ಪ್ರಥಮ ಕರ್ತವ್ಯ ನಾನು ಭಾವನೆ ಮಾಡಿರುವ ಹಾಗೆ ತಾವು ಕೊಟ್ಟಿರತಕ್ಕಂಥ ಆದೇಶವನ್ನು ಪರಿಪಾಲನೆ ಮಾಡುವುದು. ಆ ಪರಿಪಾಲನೆ ಆದಮೇಲೆ ಮರುಪರಿಶೀಲನೆ ಆಗತಕ್ಕಂಥದ್ದನ್ನು ಹೇಳಬೇಕು ಎಂದರೆ ಸದನದ ಬಾವಿಯಲ್ಲಿ ಸದಸ್ಯರುಗಳು ಇದ್ದರೆ ನಾವು ಡಿಸ್ಕೈಡ್ ಮಾಡುವುದಕ್ಕಾಗುವುದಿಲ್ಲ. ಸದಸ್ಯರುಗಳು ತಮ್ಮ ಘನತೆಗೆ ತಕ್ಕ ಹಾಗೆ ತಮ್ಮ ತಮ್ಮ ಆಸನಗಳಲ್ಲಿ ಅಲಂಕರಿಸಿ ತಮ್ಮ ಜೊತೆಗೆ ಮನವಿ ಮಾಡಿಕೊಂಡು ಆದಮೇಲೆ ತಾವು ಅದರ ಮೇಲೆ ಏನು ನಿರ್ಣಯ ಮಾಡುತ್ತೀರೋ ಅದು ಅಧ್ಯಕ್ಷರಾದ ತಮಗೆ ಬಿಟ್ಟಿದ್ದು. ಆದರೆ ನಾವು ಈ ಭಾಗದಲ್ಲಿ ಕುಳಿತಿರುವ ಸದಸ್ಯರುಗಳಾಗಿ ತಾವು ಕೊಟ್ಟಿರತಕ್ಕಂಥ ತೀರ್ಪನ್ನು ಕಾಯಾ ವಚಾ ಮನಸಾ ಪಾಲನೆ ಮಾಡುತ್ತೇವೆ. ಯಾವ ಕಾರಣಕ್ಕೂ ನಾವು ತಮ್ಮ ತೀರ್ಪಿಗೆ ವಿರುದ್ಧ ಹೋಗುವುದಿಲ್ಲ.

+ **ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ)** : ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಸಹೋದ್ಯೋಗಿ ಮಿತ್ರರು ಧರಣಿಯನ್ನು ಮಾಡುತ್ತಿರುವುದು ತಮ್ಮ ವಿರುದ್ಧವಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ ಈ ಸದನದ ನಿಯಮಾವಳಿ ಪ್ರಕಾರವಾಗಿ ತಾವು ಕೊಟ್ಟಂಥ ತೀರ್ಮಾನ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ನಾವು ಮನವಿ ಮಾಡಬಹುದೇ ವಿನಃ ಬಾಕಿದಕ್ಕೆ ಯಾವುದಕ್ಕೂ ಕೂಡ

ಅವಕಾಶವಿಲ್ಲ. ಆದರೆ ಸರ್ಕಾರದ ವಿರುದ್ಧ ನಾವು ಏಕೆ ಪ್ರತಿಭಟನೆಯನ್ನು ಮಾಡುತ್ತಿದ್ದೇವೆ. ಇಂಥ ಒಂದು ತೀವ್ರವಾದ ವಿಚಾರ ಸರ್ಕಾರಕ್ಕೆ ಮನಗಂಡಿದ್ದರೆ, ಸರ್ಕಾರಕ್ಕೆ ಇದರ ಬಗ್ಗೆ ಪ್ರಾಮಾಣಿಕತೆ ಇದ್ದಿದ್ದರೆ, ಸರ್ಕಾರಕ್ಕೆ ಇದರ ಬಗ್ಗೆ ಏನಾದರೂ ಹೇಳಬೇಕು ಎಂದು ಇದ್ದಿದ್ದರೆ, ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯನ್ನು ತಮಗೆ ಸಾಂಪ್ರದಾಯಿಕವಾಗಿ ನಿಯಮಾವಳಿ ಪ್ರಕಾರ ಕಳುಹಿಸಿದಾಗ, ಅದೇ ನಿಯಮಾವಳಿಗಳ ಪ್ರಕಾರ ಮಾನ್ಯ ಸಂಬಂಧಪಟ್ಟ ಕಂದಾಯ ಸಚಿವರಿಗೆ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಅದರ ಪ್ರತಿಗಳನ್ನು ಕಳುಹಿಸುತ್ತೇವೆ ಎನ್ನುವುದು ಗೊತ್ತಿದೆ. ಅವರಿಗೇನೂ ಇದು ಆಕಸ್ಮಿಕವಾಗಿ ಗೊತ್ತಿಲ್ಲದೇ ಇರತಕ್ಕಂಥ ವಿಚಾರವೇನೂ ಅಲ್ಲ. ಇನ್ನು ಬರಗಾಲದ ಬಗ್ಗೆ ಚರ್ಚೆ ಆಗುತ್ತದೆ ಎಂದು ಕಳೆದ ಎಂಟು ದಿವಸಗಳಿಂದ ಪತ್ರಿಕೆಗಳ ಮೂಲಕ ಮತ್ತು ಇನ್ನಿತರ ಮಾಧ್ಯಮಗಳಲ್ಲಿ ಬರುತ್ತಿದೆ. ಸರ್ಕಾರದವರಿಗೆ ಇದರ ಬಗ್ಗೆ ಪ್ರಾಮಾಣಿಕವಾಗಿ ಚರ್ಚೆ ಆಗಬೇಕು ಎನ್ನುವುದು ಇದ್ದಿದ್ದರೆ ನಿಯಮಾವಳಿಗಳ ಪ್ರಕಾರವಾಗಿಯೇ ನಾವು ಹೇಳಿದಂಥ ಸಂದರ್ಭದಲ್ಲಿ ಇಂದು ಬೆಳಿಗ್ಗೆ ಇವರು ಒಂದು ಹೇಳಿಕೆಯನ್ನು ಕೊಡಬಹುದಾಗಿತ್ತು. ಕೇಂದ್ರ ಸರ್ಕಾರದಿಂದ ಇಷ್ಟೊಂದು ಹಣ ಬಂದಿದೆ. ಕೇಂದ್ರ ಸರ್ಕಾರದಿಂದ ದವಸ ಧಾನ್ಯಗಳು ಬಂದಿವೆ. ಇದೆಲ್ಲಾ ಆಗಿದೆ. ಇಷ್ಟೆಲ್ಲಾ ಮಾಡಿದ್ದೇವೆ ಎಂಬ ಬಗ್ಗೆ ಒಂದು ಹೇಳಿಕೆಯನ್ನು ಇವರು ಕೊಟ್ಟು, ಅದು ಆದನಂತರ ನೀವು ಚರ್ಚೆಯಲ್ಲಿ ಭಾಗವಹಿಸಿ ಎಂದು ಹೇಳಿದ್ದರೆ ಚರ್ಚೆಗೂ ಕೂಡ ಹೆಚ್ಚು ಮಹತ್ವ ಬರುತ್ತಿತ್ತು. ಆದುದರಿಂದ ನಾನು ಈಗ ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ನಮ್ಮದು ತೀವ್ರವಾಗಿರತಕ್ಕಂಥ ಪ್ರತಿಭಟನೆ ಇರತಕ್ಕಂಥದ್ದು.. ಅನೇಕ ಸಂದರ್ಭಗಳಲ್ಲಿ ಮೌನವೇ ಅನೇಕ ವಿಚಾರಗಳಿಗೆ ಪ್ರತಿಭಟನೆ ಆಗುತ್ತದೆ. ಮೌನಕ್ಕಿಂತ ಪ್ರತಿಭಟನೆ ಬೇರೆ ಯಾವುದೂ ಇಲ್ಲ. ಈಗ ನಾಳೆ ಪ್ರತಿಬಿಂಬ ಆಗುತ್ತದೆ ಇದು. ನಾವು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಚರ್ಚೆ ಮಾಡಬಹುದಾಗಿತ್ತು. ಎರಡ್ಮೂರು ಘಂಟೆ ವೃಥಾ ಹೋಯಿತು ಎನ್ನತಕ್ಕಂಥದ್ದು ಬರುತ್ತದೆ. ಆದರೆ ಅನೇಕ ಸಂದರ್ಭಗಳಲ್ಲಿ, ಅನೇಕ ವಿಚಾರಗಳಲ್ಲಿ ಕಟುವಾದ ವಿರೋಧವನ್ನು ವ್ಯಕ್ತ ಮಾಡುವುದಕ್ಕೆ ಆಗತಕ್ಕಂಥದ್ದು ಮೌನದ ಮೂಲಕವೇ ಎನ್ನತಕ್ಕಂಥದ್ದು ತಮಗೆ ತಿಳಿದಿರುವ ವಿಚಾರ. ಇದೇ ಸಂದರ್ಭದಲ್ಲಿ ಮಾನ್ಯ ಚಂದ್ರೇಗೌಡರು ಮತ್ತೊಂದು ಮಾತನ್ನು ಹೇಳಿದರು. ಅದೇನೆಂದರೆ ಮಾನ್ಯ ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಮತಕ್ಷೇತ್ರಗಳಲ್ಲಿ ಈ ಒಂದು ಬರಪರಿಹಾರ ಕೆಲಸದ ಟಾಸ್ಕ್ ಫೋರ್ಸ್ ಅಧ್ಯಕ್ಷರು ಆಗಿರುತ್ತಾರೆ. ಅವರದ್ದೂ ಜವಾಬ್ದಾರಿ ಇದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಇನ್ನು ಕೆಲವು ಮಿತ್ರರು ಮಾತನಾಡತಕ್ಕಂಥ ಸಂದರ್ಭದಲ್ಲಿ ನಮ್ಮದೇನಾದರು ತಪ್ಪುಗಳಿದ್ದರೆ ಎಕ್ಸ್‌ಪೋಸ್ ಮಾಡಿ ಎನ್ನುವಂತಹ ಮಾತೂ ಸಹ ಈ ಸದನದಲ್ಲಿ ಕೇಳಿಬಂತು. ಎಕ್ಸ್‌ಪೋಸ್ ಮಾಡುವುದಕ್ಕೆ ಏನಿಲ್ಲ, ಅಲ್ಲಿ ನಾವು ಟಾಸ್ಕ್‌ಫೋರ್ಸ್ ಸದಸ್ಯರಾಗಿ ಅಥವಾ ಅಧ್ಯಕ್ಷರಾಗಿ ಇರತಕ್ಕಂಥಾದ್ದು ಕೆಲಸ ಮಾಡುವುದಕ್ಕೆ ಅಲ್ಲ. ನಾನು ಕುಳಿತುಕೊಂಡು ಎಇಇ ಸಿಆರ್ ಅನ್ನು ಬರೆಯುವುದಿಲ್ಲ. ಅವನಿಗೆ ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಜೂನಿಯರ್ ಇಂಜಿನಿಯರ್ ಅನ್ನು ನಾನು ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಇಂತಹವರಿಗೇ ಕಂಟ್ರಾಕ್ಟ್ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ನನ್ನ ಕೆಲಸ ಏನಿದ್ದರೂ ಸಜೆಸ್ಟ್ ಮಾಡತಕ್ಕಂಥಾದ್ದು. ಬರೀ ಎಂ.ಎಲ್.ಎ.ಗಳು ಹೇಳಿದಷ್ಟೇ ಕೆಲಸಕ್ಕೆ ಹಣ ಬಿಡುಗಡೆಯಾಗಿಲ್ಲ. ಎಂ.ಎಲ್.ಸಿ ಗಳು ಹೇಳಿರುವುದಕ್ಕೂ ಹಣ ಬಿಡುಗಡೆಯಾಗಿದೆ. ಎಂ.ಪಿ ಗಳು ಹೇಳಿರುವುದಕ್ಕೂ ಸಹ ಹಣ ಬಿಡುಗಡೆಯಾಗಿದೆ. ಆದುದರಿಂದ ಒಟ್ಟಾರೆ ಹೇಳಬೇಕೆಂದರೆ

ನಮ್ಮ ಮೇಲೆ ನೀವು ಹೊರಿಸಿ, ನೀವು 70 ಜನ ವಿರೋಧಪಕ್ಷದಲ್ಲಿ ಇದ್ದೀರಿ. ನಿಮ್ಮದು ಜವಾಬ್ದಾರಿ ಇದೆ. ನಿಮ್ಮ ಕ್ಷೇತ್ರದಲ್ಲಿ ದುರುಪಯೋಗವಾಗಿದೆ ಎಂದರೆ ನಿಮ್ಮ ಹತ್ತಿರ ಲೋಕಾಯುಕ್ತ ಇದೆ. ನಿಮ್ಮ ಹತ್ತಿರ ಸಿ.ಓ.ಡಿ. ಇದೆ. ನಿಮ್ಮ ಹತ್ತಿರ ಕಾನೂನು ಇದೆ. ಅದರ ಪ್ರಕಾರ ನೀವು ಕ್ರಮವನ್ನು ತೆಗೆದುಕೊಳ್ಳಬಹುದಾಗಿತ್ತು. ಇದುವರೆಗೂ ಏಕೆ ನೀವು ಮೌನವಾಗಿದ್ದೀರಿ? ಯಾರಾದರೂ ಈ ಟಾಸ್ಕ್‌ಫೋರ್ಸ್ ಅಧ್ಯಕ್ಷರು ಹೋಗಿ ಅಕ್ಕಿಯನ್ನು ಕಳ್ಳತನದಲ್ಲಿ ಮಾರಾಟ ಮಾಡಿಕೊಳ್ಳಿ ಎಂದು ಹೇಳಿದ್ದರಾ ಅಥವಾ ಇಂತಹವರಿಗೆ ಕಂಟ್ರಾಕ್ಟ್ ಕೊಡಿ ಎಂದು ಹೇಳಿದ್ದಾರಾ?

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಅಲೋ ಮಾಡುವುದಿದ್ದರೆ ಮಾಡಿ. ಈಗ ಚರ್ಚೆಗೆ ಅಲೋ ಮಾಡಿಲ್ಲ. ನೀವು ಮಾಡಿದರೆ ಸಂತೋಷ. ಅಲೋ ಮಾಡಿ ನಾವೂ ಕೂಡ ಚರ್ಚೆಯಲ್ಲಿ ಭಾಗವಹಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುತ್ತಿದ್ದೇನೆ. ತಾವು ಅವಕಾಶ ಕೊಟ್ಟಿದ್ದೀರಿ. ದೀರ್ಘವಾಗಿ ಇದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸತಕ್ಕಂಥ ಸನ್ನಿವೇಶದಲ್ಲಿ ಈ ಸರ್ಕಾರ ಎಲ್ಲಿ ಎಡವಿದೆ ಅದನ್ನೆಲ್ಲಾ ಹೇಳಬೇಕಾಗುತ್ತದೆ. ನಾನು ಹೇಳುತ್ತೇನೆ. ನಮ್ಮ ಜವಾಬ್ದಾರಿಯಲ್ಲಿ ನಾವು ವೈಫಲ್ಯವಾಗಿದ್ದರೆ ಅದನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಈಗ ಪ್ರಶ್ನೆ ಬಂದಿರತಕ್ಕಂಥಾದ್ದು ನಿಯಮ 60ರಲ್ಲಿ ಮಾಡಬೇಕೋ ಅಥವಾ ನಿಯಮ 69ರಲ್ಲಿ ಚರ್ಚೆ ಮಾಡಬೇಕೋ ಎಂದು. ತಾವು ಈಗಾಗಲೇ ತೀರ್ಪು ಕೊಟ್ಟಿದ್ದೀರಿ. ತಾವು ವಿರೋಧಪಕ್ಷದವರನ್ನು ಸಹ ಕರೆಸಿ, ಇನ್ನೊಮ್ಮೆ ದಯವಿಟ್ಟು ಪರಿಶೀಲನೆ ಮಾಡಿ. ಇದರಲ್ಲಿ ಏನೂ ತೊಂದರೆಯಾಗುವುದಿಲ್ಲ. ಒಂದು ಗಂಟೆ ಹೌಸ್ ಅನ್ನು ಮುಂದೆ ಹಾಕಿ. ವಿರೋಧಪಕ್ಷದವರನ್ನು ಕರೆಸಿ, ಸರ್ಕಾರದವರನ್ನು ಕರೆಸಿ, ಚರ್ಚೆ ಯಾವರೀತಿಯಲ್ಲಿ ಆಗಬೇಕು ಎನ್ನುವುದರ ಬಗ್ಗೆ ಏಕೆ ನಾವು ತೀವ್ರವಾಗಿ ಹೇಳುತ್ತಿದ್ದೇವೆ ಮಾನ್ಯ ನಾಗಪ್ಪನವರ ವಿಚಾರದಲ್ಲಿ ನೀವು ಏಕೆ ತತ್‌ಕ್ಷಣ ಒಪ್ಪಿಕೊಂಡಿರಿ? ಆಯಿತು, ನೀವು ನಿಲುವಳಿ ಸೂಚನೆಗೆ ಏಕೆ ಒಪ್ಪಿಗೆ ಕೊಟ್ಟಿರಿ? ಅದರಷ್ಟೇ ಗಂಭೀರವಾಗಿ ಇರುವಂತಹ ವಿಚಾರ ಇದೂ ಕೂಡ. ಅದರಿಂದಾಗಿ ನೀವು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಟ್ಟರೆ ಏನೂ ಆಕಾಶ ಕಳಚಿ ಬಿದ್ದು ಹೋಗುವುದಿಲ್ಲ. ತಾವು ಅವಕಾಶ ಮಾಡಿಕೊಡಬೇಕು. ಅದರ ಬಗ್ಗೆ ತಮ್ಮ ತೀರ್ಮಾನ ಏನಿದೆ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಾವ್ಯಾರು ನಿಮ್ಮ ವಿರುದ್ಧ ಪ್ರತಿಭಟನೆ ಮಾಡುವುದಕ್ಕೆ ಹೊರಟಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಸಚಿವರು ಕೆಲವು ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಿಯಮ 60 ಹಾಗೂ 69ರಲ್ಲಿ ಇರತಕ್ಕಂಥ ವ್ಯತ್ಯಾಸ ಏನೆಂದು ಹೇಳಿದ್ದಾರೆ. ಅಲ್ಲಿ ಮಾನ್ಯ ಸದಸ್ಯರಿಗೆ ಯಾರು ರುಜು ಮಾಡಿರುತ್ತಾರೋ ಆ ಸೂಚನೆಗೆ, ಅವರು ಮಾತ್ರ ಭಾಗವಹಿಸಬೇಕು ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರಿಗೆ ಪರಮಾಧಿಕಾರ ಇದೆ. ಯಾವ ಸದಸ್ಯರನ್ನು ಬೇಕಾದರೂ ಸಹ ಈ ಚರ್ಚೆಯಲ್ಲಿ ಭಾಗವಹಿಸತಕ್ಕಂಥಾದ್ದಕ್ಕೆ ಅವಕಾಶ ಕೊಡುವುದಕ್ಕೆ ತಮಗೆ ಅಧಿಕಾರ ಇದೆ.

ಅಧ್ಯಕ್ಷರು : ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದಾಗ ಆಡಳಿತ ಪಕ್ಷದವರಿಗೆ ಮಾತನಾಡುವುದಕ್ಕೆ ಮುಜುಗರವಾಗುತ್ತದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅವರನ್ನು ಮುಜುಗರ ಮಾಡುವುದಕ್ಕೇ ನಾವು ಇರುವುದು.

ಅಧ್ಯಕ್ಷರು : ಅದರಲ್ಲಿ ಆಡಳಿತ ಪಕ್ಷದವರಿಗೆ ಮಾತನಾಡುವುದಕ್ಕೆ ಮುಜುಗರ ಆಗುತ್ತದೆ. ಆದರೆ ನಿಯಮ 69ರಲ್ಲಿ ತಾವು ಮಾತನಾಡಬಹುದು. ನಿಯಮ 69ರಲ್ಲಿ ಎಲ್ಲಾ ಸದಸ್ಯರು ಮಾತನಾಡಬಹುದು.

(ಗೊಂದಲ)

ಶ್ರೀ ಸಿ. ಬೈರೇಗೌಡ : ದಯವಿಟ್ಟು ತಾವು ಆ ಮಾತನ್ನು ಹೇಳಬೇಡಿ. ನಾವು, ಮುಜುಗರ ಮಾಡುವುದಕ್ಕೆ ಹಾಗೂ ಅಲ್ಲಿರತಕ್ಕಂಥ ಲೋಪದೋಷಗಳು ಏನಿವೆ ಅವುಗಳನ್ನು ತೋರಿಸುವುದಕ್ಕೆ ಇರತಕ್ಕಂಥಾದ್ದು.

ಅಧ್ಯಕ್ಷರು : ನಾಳೆ ನೀವು ಆಡಳಿತ ಪಕ್ಷಕ್ಕೆ ಬಂದಾಗ ನಿಮಗೆ ಅರ್ಥವಾಗುತ್ತದೆ. ಈಗಲ್ಲ. ನಿಯಮ 69ರಲ್ಲಿ ಸರಾಗವಾಗಿ ಮಾತನಾಡಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಿಯಮ 69 ಮತ್ತು ನಿಯಮ 60ಕ್ಕೆ ಇರತಕ್ಕಂಥ ವ್ಯತ್ಯಾಸವನ್ನು ನಾವಿಗಾಗಲೇ ಹೇಳಿದ್ದೇವೆ. ನಿಯಮ 69ರಲ್ಲಿ ಮತ ಚಲಾಯಿಸುವುದಕ್ಕೆ ಅವಕಾಶ ಇಲ್ಲ. ನಿಯಮ 60ರಲ್ಲಿ ಮತ ಚಲಾಯಿಸುವುದಕ್ಕೆ ಅವಕಾಶ ಇದೆ. ಮತ ಚಲಾಯಿಸತಕ್ಕಂಥಾದ್ದು ನಮ್ಮ ಹಕ್ಕು. ಮತ ಚಲಾಯಿಸತಕ್ಕಂಥ ಹಕ್ಕನ್ನು ಮೊಟಕು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಆಯಿತು,

ಶ್ರೀ ಸಿ. ಬೈರೇಗೌಡ : ತಾವು ನಿಯಮ 69ರಲ್ಲಿ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳು. ಆದರೆ ನಿಯಮ 69ರ ಬದಲಿಗೆ ತಾವು ತೀರ್ಪನ್ನು ಬದಲಾವಣೆ ಮಾಡಿ ನಿಯಮ 60ರಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಸ್ತಾಪಿಸುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ಎರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಆಗುತ್ತಿರುವ ಚರ್ಚೆಯನ್ನೂ ನಾವು ಗಮನಿಸಿದರೆ ಒಂದು ಅರ್ಥ ಏನು ಬರುತ್ತದೆ ಎಂದರೆ ಆಡಳಿತ ಪಕ್ಷದ ಸದಸ್ಯರ್ಯಾರೂ ಈ ಚರ್ಚೆಯಲ್ಲಿ ಭಾಗವಹಿಸಬಾರದೆನ್ನುವಂತಹ ಅಭಿಪ್ರಾಯ ಸ್ಪಷ್ಟಪಡುತ್ತಿದೆ. ಅದು ಮುಕ್ತವಾದಂತಹ ಚರ್ಚೆಯಾಗುವುದಿಲ್ಲ. ವ್ಯಾಪಕವಾದಂತಹ ಚರ್ಚೆಯಾಗುವುದಿಲ್ಲ. ನಿಜವಾಗಲೂ ವ್ಯಾಪಕವಾದ ಚರ್ಚೆಯಾಗಬೇಕೆಂದರೆ ಈ ಸದನದ ಎಲ್ಲಾ ಸದಸ್ಯರು ಭಾಗವಹಿಸುವುದಕ್ಕೆ ಅವಕಾಶ ಇರಬೇಕು. ಆ ರೀತಿಯಾದರೆ ಮುಕ್ತವಾದಂತಹ ಹಾಗೂ ವ್ಯಾಪಕವಾದಂತಹ ಚರ್ಚೆಯಾಗುತ್ತದೆ. ಇಲ್ಲದೇ ಹೋದರೆ ಅವರು ಹೇಳುವ ಪ್ರಕಾರ ನಿಯಮ 60ರಲ್ಲಿ ತೆಗೆದುಕೊಂಡರೆ ಸೀಮಿತವಾದಂತಹ ಚರ್ಚೆಯಾಗಿರುತ್ತದೆ. ಸೀಮಿತವಾದಂತಹ ಜನ ಭಾಗವಹಿಸುತ್ತಾರೆ. ಬಾಕಿಯವರೆಲ್ಲಾ ಎಕ್ಸ್‌ಕ್ಲೂಡ್ ಆಗುತ್ತಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರಿಗೆ ಅಧಿಕಾರ ಇದೆ. ಅಧ್ಯಕ್ಷರು ತಮ್ಮನ್ನೂ ಕೂಡ ಆಹ್ವಾನ ಮಾಡಬಹುದು. ನೀವೂ ಕೂಡ ಪಾಲ್ಗೊಳ್ಳಬೇಕು. ನಿಮ್ಮಂತಹ ಹಿರಿಯ ಮಂತ್ರಿಗಳು...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನಿಯಮದಲ್ಲಿ ಏನಿದೆ? ಯಾರು ನೋಟಿಸ್‌ಗೆ ರುಜು ಮಾಡಿದ್ದಾರೆ ಅವರು, ಭಾಗವಹಿಸಬಹುದು ಎಂದಿದೆ. ಮಾತನಾಡುವುದಕ್ಕೆ ಬಾಕಿಯವರಿಗೆ ಎಲ್ಲಿ ಅವಕಾಶ ಇದೆ?

ಶ್ರೀ ಸಿ. ಬೈರೇಗೌಡ : ನಿಯಮಾವಳಿಗಳನ್ನು ರದ್ದು ಪಡಿಸತಕ್ಕಂಥ ಅವಕಾಶ ಅಧ್ಯಕ್ಷರಿಗೆ ಇದೆ. ಅದನ್ನು ಸಸ್ಪೆಂಡ್ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ಏಕೆ? ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಇರಬೇಕಾದರೆ ಅದನ್ನು ಎಲ್ಲರೂ ಏಕೆ ಉಪಯೋಗ ಮಾಡಿಕೊಳ್ಳಬಾರದು? ಇದರಲ್ಲಿ ಏನಾದರೂ ಮುಚ್ಚಿಟ್ಟಿದ್ದೇವಾ?

ಶ್ರೀ ಸಿ. ಬೈರೇಗೌಡ : ನಿಯಮ 69ರಲ್ಲಿ ಕೂಡ ರಿಸ್ಟ್ರಿಕ್ಷನ್ ಇದೆ. ಅದನ್ನು ಗಮನಿಸಿ.

ಶ್ರೀ ಡಿ.ವಿ. ಸದಾನಂದಗೌಡ : ಇದನ್ನು ಏಕೆ ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳಿದರೆ ಇಡೀ ಪ್ರಜಾತಂತ್ರ ವ್ಯವಸ್ಥೆ ನಿಲ್ಲುವಂಥಾದ್ದು ಪ್ರತಿಯೊಬ್ಬ ವ್ಯಕ್ತಿಗೆ ಇರುವಂತಹ ಸಂವಿಧಾನಬದ್ಧವಾದ ಮತ ಚಲಾವಣೆ ಹಕ್ಕಿನ ಆಧಾರದಲ್ಲಿ ಇದರಲ್ಲಿ ಏನಾಗುತ್ತದೆ ಎಂದರೆ ನಾನು ಈಗ ಮಾತನಾಡಿದರೆ ಅಷ್ಟ ಸಮರ್ಪಕವಾಗುವುದಿಲ್ಲವೆಂದು ಮಾತನಾಡುವುದಿಲ್ಲ. ತಾವು ತಮ್ಮ ಅವಧಿಯಲ್ಲಿ ನಮಗೆ ಎಲ್ಲಾ ಅವಕಾಶಗಳನ್ನು ಈ ಪುಸ್ತಕದ ವಿಧದಲ್ಲಿ ಕೊಟ್ಟಿದ್ದೀರಿ. ಎಲ್ಲಿಯವರೆಗೆ ಎಂದರೆ ನಮ್ಮನ್ನೆಲ್ಲಾ ಎತ್ತಿ ಹೊರಗೆ ಹಾಕುವಂತಹ ಪರಿಸ್ಥಿತಿಯನ್ನು ಕೂಡ ಎಲ್ಲವೂ ನಡೆದಿದೆ. ಇಲ್ಲ ಎಂದು ನಾವು ಹೇಳುವುದಿಲ್ಲ. ಆದರೆ ತಮ್ಮ ಅವಧಿಯಲ್ಲಿ ಒಮ್ಮೆ ಕೂಡ ನಿಯಮ 60ರಲ್ಲಿ ಚರ್ಚೆಯಾದಂತಹ ಪ್ರಮೇಯ ಇಲ್ಲ. ಆದುದರಿಂದ ದಯವಿಟ್ಟು ಈ ಒಂದು ಸದನ ಮುಗಿಯುವುದಕ್ಕೆ ಮೊದಲಾದರೂ ನಿಯಮ 60ರಲ್ಲಿ.....

ಅಧ್ಯಕ್ಷರು : ಪ್ರಮೇಯ ಬಂದರೆ ಆಗ ಕೊಡೋಣ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಹೇಳುತ್ತೇನೆ. ವೋಟಿಂಗ್‌ನ ಬಗ್ಗೆ ನಮ್ಮ ಆಡಳಿತ ಪಕ್ಷದವರು ತಿಳಿದುಕೊಂಡಿರಬಹುದು. ನಮಗೆ 150 ಉಂಟು, 160 ಉಂಟು 170 ಆಗುತ್ತದೆ. ಎಷ್ಟಾಗುತ್ತದೆ ಆ ಪ್ರಶ್ನೆ ಅಲ್ಲ. ಆ ಭಾಗದಲ್ಲಿ ಇರುವಂತಹ ಜನರ ಮನಸ್ಸಿನಲ್ಲಿ ಇರುವಂತಹ ಭಾವನೆಗಳಿಗೆ ನಿಜವಾದಂತಹ ಒಂದು ಅರ್ಥ ಕಲ್ಪನೆ ಮಾಡಬೇಕೆಂದು ಹೇಳಿದರೆ ಇಷ್ಟು ಗಂಭೀರವಾದಂತಹ ವಿಚಾರ ಮತ ಚಲಾವಣೆ ಮೂಲಕ ಈ ಸದನದಲ್ಲಿ ನಡೆಯಬೇಕು. ಅವರ ಅಭಿಪ್ರಾಯಗಳು ವ್ಯಕ್ತವಾಗಬೇಕು. ಆ ಅಭಿಪ್ರಾಯಗಳನ್ನು ವ್ಯಕ್ತ ಮಾಡುವುದಕ್ಕೆ ಇರುವಂತಹ ಒಂದೇ ಒಂದು ಸಾಧನ ಎಂದರೆ ಮತ ಚಲಾವಣೆ. ಪ್ರಜಾತಂತ್ರ ವ್ಯವಸ್ಥೆಯ ಅತ್ಯಂತ ದೊಡ್ಡ ಮಹತ್ವದ ವಿಚಾರ ಇದು. ಈ ಹಿನ್ನೆಲೆಯಲ್ಲಿ ತಾವು ಪುನರ್ ಪರಿಶೀಲನೆ ಮಾಡಬೇಕು. ನಮಗೆ ಇರುವಂತಹ ಮತದಾನದ ಹಕ್ಕನ್ನು ಮೊಟಕುಗೊಳಿಸುವಂತಹ ವ್ಯವಸ್ಥೆ ಈ ಸದನದ ಒಳಗೆ ಇರುವಂತಹ ಸದಸ್ಯರ ಹಕ್ಕನ್ನು ಚ್ಯುತಿ ಮಾಡುವಂತಹ ವ್ಯವಸ್ಥೆಗಳು ಅದರ ಬಗ್ಗೆ ಆಡಳಿತ ಪಕ್ಷದವರಿಂದ ಒತ್ತಡಗಳು ಬರುವಂತಹ ಕೆಲಸ ಕಾರ್ಯಗಳು ಆಗಬಾರದು. ಇನ್ನು ಎರಡನೆಯದಾಗಿ ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಆ ಭಾಗದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬೇಕು ಎಂದು ಹೇಳಿದರು. ನಮ್ಮದು ಸ್ವಾಗತ ಇದೆ. ಅವರೂ ಕೂಡ ಹೇಳುವುದಕ್ಕೆ ಅವಕಾಶ ಇದೆ. The Speaker is supreme. He can permit you to discuss the matter. ಪ್ರಜಾತಂತ್ರ ವ್ಯವಸ್ಥೆ

ಉಳಿವಿಗೋಸ್ಕರ, ಪ್ರಜಾತಂತ್ರ ವ್ಯವಸ್ಥೆಯನ್ನು ಈ ಸದನದ ಒಳಗೆ ಚಲಾವಣೆ ಮಾಡುವುದಕ್ಕೋಸ್ಕರ ದಯವಿಟ್ಟು ತಾವು ನಿಯಮ 60ರಲ್ಲಿ ಚರ್ಚೆಗೆ ಸ್ವೀಕಾರ ಮಾಡಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಏನು ತೀರ್ಮಾನ ಮಾಡುತ್ತಾರೆ, ಬೇರೆ ಮಾತು.

ಅಧ್ಯಕ್ಷರು : ಈಗ ಒಟ್ಟಾರೆ ಎರಡೂ ಕಡೆಯ ವಾದ ವಿವಾದಗಳನ್ನು ಕೇಳಿದ್ದೇನೆ. ಫೈನಲ್ ಆಗಿ ನಾನು ಹೇಳುವುದಿಷ್ಟೆ, ದಯವಿಟ್ಟು ತಾವು ಯೋಚನೆ ಮಾಡಿ ನೋಡಿ. ಎಲ್ಲಾ ಘಟಾನುಘಟಿಗಳು ಇದ್ದೀರಿ. ಇಲ್ಲಿ ಯಾರೂ ಕಡಿಮೆ ಏನಿಲ್ಲ. ಅತ್ತ ಕಡೆನೂ ಘಟಾನುಘಟಿಗಳು ಇದ್ದಾರೆ, ಇತ್ತ ಕಡೆನೂ ಇದ್ದಾರೆ. ತಾವು ಹೇಳಿದ ಪ್ರಕಾರ ಪ್ರಶ್ನೋತ್ತರ ವೇಳೆಗೆ ಮೊದಲು ಚರ್ಚೆ ನಡೆಯಬೇಕು ಎಂದು ಹೇಳಿದಾಗ ಅದನ್ನು ಕೂಡ ಸಸ್ಪೆಂಡ್ ಮಾಡಿದೆ. ಇದು ಬಹಳ ಮಹತ್ವವಾದ ವಿಷಯವಾದ್ದರಿಂದ ಕೊಶ್ಚನ್ ಹವರ್ ಸಸ್ಪೆಂಡ್ ಮಾಡಿ ಪ್ರಾರಂಭ ಮಾಡಿದ್ದೇವೆ. ನಾಳೆ ಜನತೆ ಏನು ಹೇಳುತ್ತಾರೆ ಆಲೋಚನೆ ಮಾಡಿ ನೋಡಿ. ನಿಯಮ 69ರಲ್ಲಿ ಚರ್ಚೆಯಾದರೇನು, ನಿಯಮ 60ರಲ್ಲಿ ಆದರೇನು ಎನ್ನುವ ರೀತಿಯಲ್ಲಿ ಅವರು ಅಂದಾರು ಎಂಬುದು ನನ್ನ ಒಂದು ಭಾವನೆ. ನಾನು ಇನ್ನು ತಮಗೆ ಒಂದು ಗಂಟೆ ಸಮಯ ಕೊಡುತ್ತೇನೆ. ಮತ್ತೆ ಮೂರು ಗಂಟೆಗೆ ಸೇರೋಣ. ತಾವು ಯೋಚನೆ ಮಾಡಿ.

(ಸದನವು 1.58ಕ್ಕೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ ಮೂರು ಘಂಟೆ, ಮೂವತ್ತಾರು ನಿಮಿಷಕ್ಕೆ ಸಮಾವೇಶಗೊಂಡಿತು).

(ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು).

(ವಿರೋಧ ಪಕ್ಷದ ಬಿ.ಜೆ.ಪಿ. ಮತ್ತು ಎ.ಬಿ.ಜೆ.ಡಿ. ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿನಿರತರಾಗಿದ್ದರು).

ಅಧ್ಯಕ್ಷರು : ಈಗ ಮತ್ತೊಮ್ಮೆ ತಮ್ಮಲ್ಲಿ ಒಂದು ಅರಿಕೆ ಏನೆಂದರೆ ಮೇಲ್ಮನೆಯಲ್ಲಿ ಇದೇ ರೀತಿ ನಿಲುವಳಿ ಸೂಚನೆ ಮೂವ್ ಮಾಡಿದ್ದನ್ನು ರಿಜೆಕ್ಟ್ ಮಾಡಿ ನಿಯಮ 68ರ ಮೂಲಕ ಚರ್ಚೆ ಮಾಡುವುದಕ್ಕೆ ಅಲೋ ಮಾಡಿ ಅವರು ಈಗಾಗಲೇ ಚರ್ಚೆ ಪ್ರಾರಂಭ ಮಾಡಿದ್ದಾರೆ. ಹಾಗೆಯೇ ಅಲ್ಲಿ ಪ್ರಶ್ನೋತ್ತರ ವೇಳೆ ನಡೆದಿದೆ. ಜೀರೋ ಹವರ್ ಹೀಗೆ ಎಲ್ಲಾ ನಡೆದಿದೆ. ಆದ್ದರಿಂದ ಮತ್ತೊಮ್ಮೆ ನಾನು ತಮ್ಮಲ್ಲಿ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಶ್ರೀ ಶೆಟ್ಟರ್‌ರವರೇ ತಾವು ದಯವಿಟ್ಟು ಚರ್ಚೆ ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇವತ್ತು ಮೇಲ್ಮನೆಯಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಇಲ್ಲಿ ಚರ್ಚೆ ಮಾಡುವುದು ಬೇಕಾಗಿಲ್ಲ.

ಅಧ್ಯಕ್ಷರು : ನಿಮ್ಮ ಮಾಹಿತಿಗಾಗಿ ಈ ವಿಷಯವನ್ನು ನಿಮಗೆ ತಿಳಿಸಿದೆ ಅಷ್ಟೆ.

ಶ್ರೀ ಜಗದೀಶ್ ಶೆಟ್ಟರ್ : ಮೇಲ್ಮನೆಯಲ್ಲಿ ಯಾವ ರೀತಿ ಹೇಗೆ ನಿರ್ಮಾಣವಾಗುತ್ತದೆ. ಅಲ್ಲಿ ಯಾವ ರೀತಿ ಪ್ರೊಸೀಡಿಂಗ್ಸ್ ಆಗುತ್ತಿದೆ. ಅದರ ಬಗ್ಗೆ ಇಲ್ಲಿ ಹೆಚ್ಚು ಚರ್ಚೆ ಮಾಡುವಂಥದ್ದಕ್ಕೆ ಅವಶ್ಯಕತೆಯಿಲ್ಲವೆಂದು ನಾನು ಹೇಳುತ್ತೇನೆ.

ಅಧ್ಯಕ್ಷರು : ಇಲ್ಲಿ ಕೇಳಿ, ಹಾಗಿದ್ದರೆ ಮೇಲ್ಮನೆಗೆ ಹೆಚ್ಚು ಪ್ರಾಶಸ್ತ್ಯ ಬಂದಿದೆ. ಎಲ್ಲಾ ಮುಗಿಸುತ್ತಾರೆ.. ಎಂದು ಹೇಳಿದರೆ....

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುವಂಥದ್ದು ಏನೆಂದರೆ, ಇಲ್ಲಿ ರೂಲ್ 60 ಪ್ರಕಾರ ನಾವೆಲ್ಲಾ ನಿಲುವಳಿ ಸೂಚನೆ ಕೊಟ್ಟಿದ್ದೇವೆ. ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆಂದು ಸರ್ಕಾರದ ಕಡೆಯಿಂದಲೂ ಪ್ರತಿಕ್ರಿಯೆ ಬಂದಿದೆ. ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹಾಗೆಯೇ ಸರ್ಕಾರಕ್ಕೂ ಸಹ ಒತ್ತಾಯ ಮಾಡುತ್ತಿದ್ದೇನೆ. ದಯವಿಟ್ಟು ಈ ಮೊಂಡು ಹಠವನ್ನು ಬಿಟ್ಟುಬಿಡಿ, ಈ ಪ್ರತಿಷ್ಠೆಯನ್ನು ಮಾಡುವುದು ಬೇಡಿ, ಚರ್ಚೆಯನ್ನು ಪ್ರಾರಂಭ ಮಾಡೋಣ.

(ಗೊಂದಲ)

ಜನರ ಹಿತದೃಷ್ಟಿಯಿಂದ ದಯವಿಟ್ಟು ರೂಲ್ 60ರ ಪ್ರಕಾರ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರ ಇಷ್ಟೊಂದು ಹಠ ಮಾಡುವುದು ಅವಶ್ಯಕತೆ ಇಲ್ಲ. ತಾವು ಚರ್ಚೆ ಮಾಡಲು ರೆಡಿ ಇದ್ದೀರಿ. ರೂಲ್ 60ರ ಪ್ರಕಾರ ಚರ್ಚೆ ಮಾಡಲು ಏತಕ್ಕಾಗಿ ಹಿಂದೇಟು ಹಾಕುತ್ತಿದ್ದಾರೆನ್ನುವುದು ನನಗೆ ಅರ್ಥವಾಗುತ್ತಿಲ್ಲ.....

ಶ್ರೀ ಯು.ಆರ್. ಸಭಾಪತಿ : ಈ ನಾಟಕ ಬೇಡ........

ಶ್ರೀ ಜಗದೀಶ್ ಶೆಟ್ಟರ್ : ಈ ಒಂದು ವಿಷಯಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಈಗಾಗಲೇ ತಮ್ಮಲ್ಲಿ ಮನವಿ ಮಾಡಿದ್ದೇವೆ. ಕೊಶ್ಚನ್‌ವರನ್ನು ಬದಿಗೊತ್ತಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಧಾರ ಮಾಡಿದ್ದೀರಿ. ಅದಕ್ಕಾಗಿ ತಾವು ಇನ್ನೊಮ್ಮೆ ಮನಸ್ಸು ಮಾಡಿ ಸರ್ಕಾರಕ್ಕೆ ಸ್ವಲ್ಪ ಹೇಳಿ ದಯವಿಟ್ಟು ರೂಲ್ 60ರ ಪ್ರಕಾರ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿ ಕೊಳ್ಳುತ್ತಿದ್ದೇವೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನಾಟಕ ಏಕೆ ಆಡುತ್ತಿದ್ದೀರಿ? ಈ ಧರಣಿ ಹೂಡುವ ನಾಟಕ ಬೇಡ ಇವತ್ತು. ಇಷ್ಟಾದರೂ ಸಂಖ್ಯೆಯಲ್ಲಿದ್ದೀರಿ. ನಾಳೆ ಪುನಃ ಒಳಗೆ ಬರಲಿಕ್ಕೆ ಅವಕಾಶ ಸಿಗಲಿಕ್ಕಿಲ್ಲ. ಈ ತರಹ ನಾಟಕ ಮಾಡಬೇಡಿ. ಬರಗಾಲದ ಬಗ್ಗೆ ನಮಗೂ ಮಾತನಾಡಲು ಹಕ್ಕಿದೆ. ನಾವು ಮಾತನಾಡುತ್ತೇವೆ. ನೀವೇಕೆ ನಾಟಕ ಆಡಬೇಕು. ಇಂಥ ರೂಪದಲ್ಲೇ ಚರ್ಚೆಯಾಗಬೇಕೆಂದು ಧರಣಿ ಹೂಡುವುದು ಇತಿಹಾಸದಲ್ಲೇ ಫಸ್ಟ್ ಟೈಂ. ಸಭಾಧ್ಯಕ್ಷರು ಕೊಟ್ಟಂಥ ತೀರ್ಪಿಗೆ ವಿರುದ್ಧವಾಗಿ ವಿರೋಧ ಪಕ್ಷದವರು ಧರಣಿ ಕುಳಿತಿದ್ದಾರೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಸೋಮಶೇಖರ್ : ಸಭಾಧ್ಯಕ್ಷರೆ.......

ಶ್ರೀ ಯು.ಆರ್. ಸಭಾಪತಿ : ಸಭಾಧ್ಯಕ್ಷರೇ ಪ್ರಜಾಪ್ರಭುತ್ವದ ವಿರುದ್ಧ ಇವರು ನಡೆಯುತ್ತಿದ್ದಾರೆ. ಸಭಾಧ್ಯಕ್ಷರೆ, ತಾವು ಕೊಟ್ಟಂಥ ತೀರ್ಪಿನ ವಿರುದ್ಧ ನಡೆದುಕೊಳ್ಳುತ್ತಾರೆ.

ಶ್ರೀ ಬಿ. ಸೋಮಶೇಖರ್ : ನಾವು ಮೇಲ್ಮನೆಯಲ್ಲಿ......

ಶ್ರೀ ಯು.ಆರ್. ಸಭಾಪತಿ : ನಾವು ಮತ್ತೆ ಮತ್ತೆ ಮಾತನಾಡುವ ಅವಶ್ಯಕತೆ ಇಲ್ಲ. ಅವರು ಸಭಾಧ್ಯಕ್ಷರು ತೀರ್ಮಾನದ ವಿರುದ್ಧ ಮಾತನಾಡುತ್ತಿದ್ದಾರೆ. ಬೆಳಿಗ್ಗೆಯಿಂದ ಅದನ್ನೇ ಹೇಳುತ್ತಿದ್ದೀರಿ.

ಇಡೀ ಸದನದ ಸಮಯವನ್ನು ನೀವು ತೆಗೆದು ಹಾಕಿದ್ದೀರಿ. ನಿಮ್ಮನ್ನು ಜನರು ಮೆಚ್ಚುತ್ತಾರೆಯೇ? ನಾಳೆ ಪತ್ರಿಕೆಯಲ್ಲಿ ಬರುತ್ತದೆ. ನೋಡೋಣ. ನಾವು ಜನರ ಹತ್ತಿರ ಹೋಗುತ್ತೇವೆ. ಇಡೀ ಸದನವನ್ನು ನೀವು ಗುತ್ತಿಗೆ ಹಾಕಿಕೊಂಡಿದ್ದೀರಾ? ಏನು ನಾಟಕ ನಿಮ್ಮದು? ಸೋಮಶೇಖರ್‌ರವರೆ, ನೀವು ಹೊಸದಾಗಿ ನಾಯಕತ್ವ ವಹಿಸಿಕೊಂಡಿದ್ದೀರಿ. ನಿಮ್ಮ ಜವಾಬ್ದಾರಿ ಬಹಳಷ್ಟು ಇದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ನೋಡೋಣ.

(ಗೊಂದಲ)

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ಅವರಿಗೆ ಎಷ್ಟು ಕಾತುರವಿದೆಯೋ, ನಮಗೂ ಅಷ್ಟೇ ಕಾತುರವಿದೆ. ಸದನದ ವೇಳೆಯನ್ನು ಅವರೇ ಹಾಳು ಮಾಡುತ್ತಿದ್ದಾರೆ. ನಿಯಮ 69ರ ಅಡಿಯಲ್ಲಿ ಚರ್ಚೆ ಎಂದು ನೀವು ರೂಲಿಂಗ್ ಕೊಟ್ಟಿದ್ದೀರಿ. ನಿಮ್ಮ ವಿರುದ್ಧ ಧರಣಿ ಕುಳಿತಿದ್ದಾರೆ. ಸರ್ಕಾರ ಆಗಲೇ ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಅವರಿಗೆ ಮಾತನಾಡುವುದಕ್ಕೆ ಇಂಟರೆಸ್ಟ್ ಇಲ್ಲವೆಂದರೆ ನಮ್ಮ ಕಡೆಯವರಿಗೆ ಮಾತನಾಡುವುದಕ್ಕೆ ಚಾನ್ಸ್ ಕೊಡಿ. ನಾವು ಮಾತನಾಡುತ್ತೇವೆ. ಅವರಿಗೆ ಮಾತನಾಡುವಂಥ ಆಸಕ್ತಿ ಅಥವಾ ಅದರಲ್ಲೇನಾದರೂ ಜನರ ಸಮಸ್ಯೆಗೆ ಸ್ಪಂದಿಸಬೇಕೆಂದು ಹೇಳಿ ಆಸಕ್ತಿ ಇಲ್ಲವೆಂದರೆ ನಮಗಾದರೂ ಅವಕಾಶ ಮಾಡಿಕೊಟ್ಟರೆ ನಾವು ಮಾತನಾಡುತ್ತೇವೆ.

(ಗೊಂದಲ)

ಮಾನ್ಯ ಸದಸ್ಯರು : ಮಾತನಾಡಿದರೆ ಕೆಲಸವೇನು ಆಗುವುದಿಲ್ಲ.........

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಹೇಳಿ. ಕೆಲಸವಾಗುವುದಿಲ್ಲವೆಂದು ಹೇಳಿ. ನಾವು ಬೇಡವೆಂದು ಹೇಳುವುದಿಲ್ಲ.

ಶ್ರೀ ಕರಿಯಣ್ಣ : ತಾವು ಬೆಳಿಗ್ಗೆಯಿಂದ ಬಹಳ ಅರ್ಜೆಂಟ್ ವಿಚಾರ ಮಾತನಾಡಬೇಕೆಂದು ಅವಕಾಶ ಮಾಡಿಕೊಡುವುದಕ್ಕೋಸ್ಕರವೇ ಬಹಳ ಮುಖ್ಯವಾಗಿರುವ ಕ್ವೆಶ್ಚನ್ ಹವರ್ ಅನ್ನೂ ಸಹ ಮುಂದಕ್ಕೆ ಹಾಕಿದ್ದೀರಿ. ಸರ್ಕಾರ ಸಹ ಯಾವುದೇ ವಿಚಾರದಲ್ಲಿ ಚರ್ಚೆ ಮಾಡಲು ನಾವು ಸಿದ್ಧರಿದ್ದೇವೆ ಎಂದು ಆಗಲೇ ಅವರು ಹೇಳಿದ್ದಾರೆ. ಜೊತೆಯಲ್ಲಿ, ತಾವು ಯಾವ ರೀತಿ ಚರ್ಚೆಗೆ ಅವಕಾಶ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಇದಕ್ಕೆ ನಿಯಮ 60ರ ಅಡಿಯಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ, ಇವತ್ತು ಸರ್ಕಾರಕ್ಕೇ ಅವರು ಧಿಕ್ಕಾರ ಹಾಕಿಕೊಂಡು ತೆಗೆದುಕೊಂಡಿರುವ ನಿಲುವು ಸರಿಯಲ್ಲ. ನಿಮ್ಮ ವಿರುದ್ಧ ಮಾಡುತ್ತಿದ್ದಾರೆ. ಈ ರೀತಿಯಾಗಿ ಯಾವತ್ತೂ ಸದನದಲ್ಲಿ ಇಂಥ ವಿಚಾರ ನಡೆದಿರಲಿಲ್ಲ. ದಯವಿಟ್ಟು ಅವರೇನಾದರೂ ಆ ಕಡೆಯವರು ಮಾತನಾಡುವುದಿದ್ದರೆ, ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಿದ್ದರೆ, ಇವರನ್ನೆಲ್ಲಾ ಕೂರಿಸಿ ನೀವು ಅವರನ್ನು ವಿನಂತಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಈ ತರಹ ನಮ್ಮ ಹಿರಿಯ ನಾಯಕರುಗಳು ಮತ್ತು ವಿರೋಧ ಪಕ್ಷದ ನಾಯಕರುಗಳು ಈ ರೀತಿಯಾಗಿ ಮಾತನಾಡುವುದು ಸರಿಯಲ್ಲ ಎಂಬುದನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಕರಿಯಣ್ಣ : ನಿಮಗೆ ಕಳಕಳಿ ಇದ್ದರೆ ಮಾತನಾಡಿ. ನಮಗೆ ಕಳಕಳಿ ಇದೆ. ನಿಮಗೆ ಕಳಕಳಿ ಇಲ್ಲ. ರಾಜಕಾರಣ ಮಾಡುವುದಕ್ಕೆ ನಿಮಗೆ ಕಳಕಳಿ ಇದೆ. ನಮಗೆ ಬರಗಾಲದ ಬಗ್ಗೆ ಚರ್ಚೆ ಮಾಡಿ, ಇನ್ನು ಅನೇಕ ವಿಚಾರಗಳ ಬಗ್ಗೆ ಸರ್ಕಾರಕ್ಕೆ ತಿಳಿಸಬೇಕಾಗಿದೆ. ನಾವು ಕೇಳಬೇಕಾಗಿದೆ. ದಯವಿಟ್ಟು ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಕೇವಲ ಇವರು ಧರಣಿ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಇಲ್ಲಿ ನಿಂತು ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ. ಅವರು ಅವರ ಖುರ್ಚಿಗೆ ಹೋಗಲಿ. ಅವರ ಪಕ್ಷದವರು ಡೆಪ್ಯುಟಿ ಲೀಡರ್ ಆಗಿದ್ದಾರೆ. ಏನು ಮಾತನಾಡಬೇಕೆಂಬುದು ಗೊತ್ತಿಲ್ಲ. ನಿಯಮಾವಳಿ ಗೊತ್ತಿಲ್ಲ. ಅದನ್ನು ನನ್ನಿಂದ ಕಲಿಯಬೇಕಾಗಿಲ್ಲ. ಪುಸ್ತಕ ನೋಡಿ ಕಲಿಯಿರಿ. ಡೆಪ್ಯುಟಿ ಲೀಡರ್ ಏಕೆ ಆಗುತ್ತೀರಿ? ಒಂದು ನಿಯಮ ಪಾಲಿಸುವುದಕ್ಕೆ ಬರುತ್ತಿಲ್ಲ. ಡೆಪ್ಯುಟಿ ಲೀಡರ್ ಏಕೆ ಆಗುತ್ತೀರಿ?

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರನ್ನು ಕೇಳೋಣ. ತಮಗೂ ಅವಕಾಶ ಕೊಡುತ್ತೇನೆ. ಸೋಮಶೇಖರ್‌ರವರು ಮಾತನಾಡಿದ ಮೇಲೆ ನೀವೇ ಮಾತನಾಡಿ.

ಶ್ರೀ ಬಿ. ಸೋಮಶೇಖರ್ : ಈಗಾಗಲೇ ಆ ಕಡೆಯ 2-3 ಜನ ಸದಸ್ಯರು ಮಾತನಾಡಿದ್ದಾರೆ. ನಮ್ಮ ಕಷ್ಟ ಬಹುಶಃ ಮಾನ್ಯ ಸಭಾಪತಿಯವರಿಗೆ ಗೊತ್ತಿರಲಿಕ್ಕಿಲ್ಲ. ಅವರ ಒಂದು ತಾಲ್ಲೂಕಿನ ಜಿಲ್ಲೆಯ ಪರಿಸ್ಥಿತಿ ಬೇರೆ. ಉಳಿದ ಜಿಲ್ಲೆಗಳ ಪರಿಸ್ಥಿತಿ ಬೇರೆ. ಅತಿವೃಷ್ಟಿಯಿಂದ ಅವರಿಗೆ ಹೆಚ್ಚು ನೀರು ಲಭ್ಯವಾಗುತ್ತಿದೆ. ನಾವು ದನಕರುಗಳಿಗೂ ನೀರಿಲ್ಲದೆ ಕಷ್ಟಪಡುತ್ತಿದ್ದೇವೆ. ಆದ್ದರಿಂದ ನಮ್ಮ ಸಂಕಷ್ಟಗಳನ್ನು ಈ ರೂಪದಲ್ಲಿ ನಿಯಮ 60ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ತಾವು ಮೇಲ್ಮನೆಯಲ್ಲಿ ಈ ರೀತಿಯಲ್ಲಿ ಚರ್ಚೆಗೆ ತೆಗೆದುಕೊಂಡಿದ್ದಾರೆ. ಇದನ್ನು ನಾವೂ ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದೀರಿ. ನನ್ನ ಸವಿನಯ ಪ್ರಾರ್ಥನೆ ಏನೆಂದರೆ, ಆ ಮನೆಯ ನಿಯಮಗಳು ಬೇರೆ, ನಮ್ಮ ಮನೆ ನಿಯಮಗಳು ಬೇರೆ. ಅಲ್ಲಿ ನಿಯಮಗಳ ಪ್ರಕಾರ ನಿಲುವಳಿ ಸೂಚನೆಗೆ ಮತ ಹಾಕುವ ಅವಕಾಶವಿಲ್ಲ. ನಮ್ಮಲ್ಲಿ ಮತಕ್ಕೆ ಹಾಕುವ ಅವಕಾಶವಿದೆ. ಇವತ್ತು ಈ ಒಂದು ವಿಚಾರದಲ್ಲಿ ಸರ್ಕಾರವನ್ನು ಸೆನ್‌ಸೂರ್ ಮಾಡಬೇಕೆಂಬುದು ನಮ್ಮ ಉದ್ದೇಶ. ಸರ್ಕಾರ ಮುಕ್ತವಾಗಿ ಚರ್ಚೆಗೆ ಸಿದ್ಧವೆಂದು ಹೇಳಿದ ಮೇಲೆ 60ರ ಅಡಿಯಲ್ಲಿ ಚರ್ಚೆಯಾದರೇನು? 69ರ ಅಡಿಯಲ್ಲಿ ಚರ್ಚೆಯಾದರೇನು? ಅವರೇಕೆ ಇದಕ್ಕೆ ಹೆದರಬೇಕು?

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಬೆಳಿಗ್ಗೆಯಿಂದ ಅವರೇ ಹೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಎಲ್ಲರಿಗೂ ತಾವು ನಿರ್ದೇಶನ ಕೊಡಬೇಕು. ಅವರಿಬ್ಬರು ಮಾತನಾಡುವವರೆಗೆ ನಾನು ಸುಮ್ಮನೆ ಕುಳಿತಿದ್ದೆ. ತಾವು ಅವಕಾಶ ಕೊಟ್ಟ ನಂತರ ನಾನು ಮಾತನಾಡಿದೆ. ನಾನು ಅನ್-ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗಿಸದೇ ಇದ್ದರೆ ಅವರು ಸುಮ್ಮನಿರಬೇಕು. ಇಲ್ಲದಿದ್ದರೆ ತಾವು ಸಾಕು ಕುಳಿತುಕೊಳ್ಳಿ ಎಂದು ಹೇಳಬೇಕು. ಆದ್ದರಿಂದ ನಾನು ಮಾತು ಮುಗಿಸುವವರೆಗೂ ಅವರಿಗೆ ಹೇಳಬೇಕು. ನಂತರ ಅವರು ಮಾತನಾಡಲಿ. ಆದ್ದರಿಂದ ತಮ್ಮಲ್ಲಿ ಕಳಕಳಿಯಿಂದ ಕೇಳುವುದೇನೆಂದರೆ, ಈ ವಿಚಾರ ಬಹಳ ಪ್ರಮುಖವಾದ ವಿಚಾರ. ಇಡೀ ರಾಜ್ಯದ ಇಂಥ ಸಂದರ್ಭಗಳಲ್ಲಿ 5-6 ಜಿಲ್ಲೆಗಳಲ್ಲಿ ಬರ ಪರಿಹಾರ ಕಾಮಗಾರಿಗಳು ಸರಿಯಾಗಿ ಆಗದಿರುವಾಗಲೇ ನಿಲುವಳಿ ಸೂಚನೆಗಳನ್ನು ತೆಗೆದುಕೊಂಡಿರುವ ನಿದರ್ಶನಗಳು ಈ ಸದನದಲ್ಲಿವೆ.

ಅದನ್ನು ಬೇರೆ ವಿಚಾರದಲ್ಲಿ ಎತ್ತಿಕೊಳ್ಳುತ್ತೇವೆ. ಆದರೆ, ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಬರ ಕಾಮಗಾರಿಗಳು ಸರಿಯಾಗಿ ಆಗದಿರುವುದರಿಂದ ಜಾನುವಾರುಗಳಿಗೆ ನೀರಿಲ್ಲದೆ, ಮತ್ತು ವಿತರಣೆ ಮಾಡುವುದರಲ್ಲಿ ಅವ್ಯವಹಾರವಾಗಿರುವುದನ್ನು ನಾವು ಎತ್ತಿ ಹಿಡಿಯಬೇಕಾಗಿದೆ. ಆದ್ದರಿಂದ ಈ ರೂಪದಲ್ಲಿ ತೆಗೆದುಕೊಳ್ಳಬೇಕೆಂಬುದು ನಮ್ಮ ವಾದ. ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. ಅಷ್ಟೊಂದು ಕಾನ್‌ಫಿಡೆಂಟ್ ಆಗಿದ್ದರೆ, ನಿಯಮ 69ರಲ್ಲಾದರೂ ಆಗಲಿ ಅಥವಾ 60ರಲ್ಲಾದರೂ ಚರ್ಚೆಯಾಗಲಿ ಎಂದು ಹೇಳಿ. ತಮಗೆ ಅವಕಾಶವಿದೆ. 60ರ ಅಡಿಯಲ್ಲಿ ತೆಗೆದುಕೊಂಡರೂ ಅವರು ನಾವು ಹೇಳುವ ವಿಚಾರಗಳಿಗೆ ಡಿಫೆಂಡ್ ಮಾಡುವ ಅವಕಾಶವಿದೆ. ಅವಕಾಶ ಕೊಡಿ. ಆದ್ದರಿಂದ, ಇದೇ ಒಂದು ನಿಯಮಾವಳಿ ಅಡಿಯಲ್ಲಿ ತೆಗೆದುಕೊಳ್ಳಬೇಕೆಂಬುದು ನಮ್ಮೆಲ್ಲರ ಉದ್ದೇಶವಿದೆ. ತಮಗೆ ಗೊತ್ತಿರುವ ಹಾಗೆ, ನಾಲ್ಕು ವರ್ಷಗಳ ಕಾಲ ಇಷ್ಟೊಂದು ಒಗ್ಗಟ್ಟಿನಿಂದ ಯಾವುದೇ ಪಕ್ಷದವರು, ವಿರೋಧ ಪಕ್ಷದವರು ಈ ನಿಲುವು ತೆಗೆದುಕೊಂಡಿರುವ ಸಂದರ್ಭ ಯಾವುದಿದೆ? ತಾವು ನಮಗೆ ಅವಕಾಶ ಕೊಟ್ಟು, ಗೌರವ ಕೊಡಬೇಕು. ನಾಲ್ಕು ವರ್ಷಗಳ ಕಾಲ ನಾವು ತಾವು ಹೇಳಿದ ಎಲ್ಲಾ ನಿಯಮಗಳನ್ನೂ ಒಪ್ಪಿಕೊಂಡಿದ್ದೇವೆ. ಈ ವರ್ಷ ತಾವು ನಮ್ಮ ಈ ಒಂದು ಬೇಡಿಕೆಯನ್ನು ಮನ್ನಿಸಬೇಕು. ದೊಡ್ಡ ಮನಸ್ಸು ಮಾಡಿ, ತಾವು ಕೊಟ್ಟಿರುವ ತೀರ್ಪನ್ನು ಪುನರ್ ಪರಿಶೀಲನೆ ಮಾಡಬೇಕೆಂಬುದು ನಮ್ಮ ಮನವಿ.

+ ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಪ್ರಶ್ನಾವಳಿ ಇತ್ತು. ನಮ್ಮ ಪ್ರಶ್ನೆಗಳು ಬರುವುದಿತ್ತು. ಗ್ರಾಮಾಂತರ ಪ್ರದೇಶಗಳ ಅತಿ ಮುಖ್ಯವಾದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಿತ್ತು. ಇವತ್ತು ವಿರೋಧ ಪಕ್ಷದ ಮಾನ್ಯ ನಾಯಕರು ಮತ್ತು ಸದಸ್ಯರು ನೀಡಿದಂಥ ನಿಲುವಳಿ ಸೂಚನೆಯನ್ನು ಪರಿಗಣಿಸಿ ಅವರಿಗೆ ನಿಯಮ 69ರ ಪ್ರಕಾರ ಅವಕಾಶ ಮಾಡಿಕೊಟ್ಟಿದ್ದೀರಿ. ಪ್ರಶ್ನೋತ್ತರ ವೇಳೆಯನ್ನೂ ಕೂಡ ಮುಂದಕ್ಕೆ ಹಾಕಿದ್ದೀರಿ. ಇದಾದಮೇಲೆ, ನಿಜವಾದ ಕಾಳಜಿ ಇವತ್ತು ಏನು ಬರ ಪರಿಹಾರದ ಬಗ್ಗೆ ತಂದಿರುವುದು. ಈ ಅನುಷ್ಠಾನ ಮಾಡುವ ಕೆಲಸ ಇವೆಲ್ಲದಕ್ಕೂ ಕೂಡ ನಾವೇನು ಶಾಸಕರಿದ್ದೇವೆ. ಆ ಶಾಸಕರ ಅಧ್ಯಕ್ಷತೆಯಲ್ಲಿ ಕೂಡ ಇವತ್ತು ಎಲ್ಲಾ ಕೆಲಸಕಾರ್ಯಗಳು ನಡೆಯುತ್ತಿವೆ. ಇಂಥ ಒಂದು ಸಂದರ್ಭದಲ್ಲಿ ಆ ವಿಷಯಗಳನ್ನು ಚರ್ಚೆ ಮಾಡಬೇಕೆಂದು ಬಂದಾಗ, ತಾವು 69ರ ಪ್ರಕಾರ ಏನು ಆದೇಶ ಕೊಟ್ಟಿದ್ದೀರಿ, ಅದನ್ನು ಪರಿಪಾಲಿಸಿ, ನಾವು ಈ ಸಮಸ್ಯೆಗಳನ್ನು ಚರ್ಚೆ ಮಾಡಲು ನಮಗೂ ಅನುವು ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳುತ್ತಿದ್ದೇನೆ. ವಿರೋಧ ಪಕ್ಷದ ನಾಯಕರು ಏನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡಲು ಅಥವಾ ನಿಲುವಳಿ ಸೂಚನೆ ಪ್ರಕಾರ ಚರ್ಚೆ ಮಾಡಲಿಕ್ಕೆ, ಯಾವ ರೀತಿ ಅವಕಾಶ ಕೊಡಬೇಕೆಂಬುದಕ್ಕೆ ತಮಗೆ ಅಧಿಕಾರವಿದೆ. ತಾವು ರೂಲಿಂಗ್ ಕೊಟ್ಟ ಮೇಲೆ, ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡಿ, ಹಠಮಾರಿತನ ಮಾಡುವುದಕ್ಕೆ ಬದಲು ತಮ್ಮ ರೂಲಿಂಗ್ ಅನ್ನು ಪರಿಪಾಲಿಸಿಕೊಂಡು ಈ ಅವಕಾಶವನ್ನು ಅವರು ಉಪಯೋಗಿಸಿಕೊಳ್ಳಲಿ ಇದರ ಜೊತೆಗೆ ನಮ್ಮೆಲ್ಲರಿಗೂ ಕೂಡ ಇದನ್ನು ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಅವರೂ ಕೂಡ ಇದರಲ್ಲಿ ಭಾಗಿಯಾಗಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

+ ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ತಾವು ಅನೇಕ ಸಲ ಸಭೆಯನ್ನು ಅಡ್ಜರ್ನ್ ಮಾಡಿ, ತೀರ್ಮಾನ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ನಾವು ಸುಮಾರು ನಾಲ್ಕು ವರ್ಷಗಳಿಂದ

ಸಹ ಯಾವುದೇ ಒಂದು ತಾವು ಸೂಚನೆಯನ್ನು ಕೊಟ್ಟರೂ ತಲೆ ಬಾಗಿ ಸ್ವೀಕಾರ ಮಾಡಿದ್ದೇವೆ. ರಾಜ್ಯಾದ್ಯಂತ ಮಳೆ ಇಲ್ಲ. ತಮಗೆ ಗೊತ್ತಿರುವ ವಿಚಾರ. ಬೆಳೆ ಇಲ್ಲ. ಜಾನುವಾರುಗಳಿಗೆ ಹುಲ್ಲು ಇಲ್ಲ. ಕುಡಿಯುವ ನೀರಿಲ್ಲ. ಬೇಕಾದಷ್ಟು ಅವ್ಯವಹಾರವಾಗಿರುವ ಕಾರಣ ದಯವಿಟ್ಟು ಆ ವಿಷಯದ ಗಾಂಭೀರ್ಯವನ್ನು ಅರ್ಥ ಮಾಡಿಕೊಂಡು ನಾನು ನಿಮ್ಮನ್ನು ವಿನಂತಿಸುತ್ತೇನೆ ಮತ್ತೊಮ್ಮೆ ಎಲ್ಲಾ ವಿರೋಧ ಪಕ್ಷದವರೂ ಸೇರಿ, ಒಟ್ಟಿಗೆ ಎಲ್ಲಾ ಪಕ್ಷದವರೂ ಸೇರಿ ಇದನ್ನು ರೂಲ್ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಎಲ್ಲಾ ಪಕ್ಷದವರು ಇವತ್ತೇನು ತಮಗೆ ಮನವಿ ಮಾಡಿದ್ದೇವೆ. ಇದೊಂದು ಉತ್ತಮವಾದ ಸಂಪ್ರದಾಯವನ್ನು ತಾವು ನಡೆಸಿದ್ದೀರಿ, ದಯಮಾಡಿ ಅದಕ್ಕೆ ತಾವು ವಂಚನೆಯಾಗದ ರೀತಿಯಲ್ಲಿ ನಡೆದುಕೊಳ್ಳಬೇಕು. ರೂಲ್ 60ರ ಅಡಿಯಲ್ಲಿ ಚರ್ಚಿಸಲು ಅನುಕೂಲ ಮಾಡಿಕೊಡಬೇಕೆಂದು ರಾಜ್ಯದ ಜನತೆಯ ಪರವಾಗಿ ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರವರು ಬೆಳಿಗ್ಗೆ ಈ ಚರ್ಚೆಯ ಕೊನೆಯಲ್ಲಿ ಒಂದು ಮಾತನ್ನು ಹೇಳಿದರು. ಸರ್ಕಾರವೇ ಒಪ್ಪುವಾಗ ರೂಲ್ 60ರಲ್ಲಿ ಚರ್ಚೆ ಮಾಡಲು ಅವಕಾಶ ಕೊಡುವುದಕ್ಕೆ ತಾವು ಏಕೆ ಮನಸ್ಸು ಮಾಡುವುದಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಅವರೇ 69ರಲ್ಲಿ ನೋಟಿಸ್ ಇಲ್ಲವೆಂದು ಹೇಳಿದರು ಅದರಿಂದ 60ರಲ್ಲಿ ಕೊಡಬಹುದು. ಅದಲ್ಲದೆ ನಾನು ತಮ್ಮ ಗಮನಕ್ಕೆ 64(2)ರಲ್ಲಿ ಏನು ಇದೆ ಎಂಬುದನ್ನು ತಂದಿದ್ದೇನೆ. ನಾವು ವಿರೋಧ ಪಕ್ಷದ ಕಡೆಯಿಂದ ಏನು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ. ಮಂಡಿಸಿ ಏನು 23 ಜನ ನಿಂತುಕೂಡಲೇ ತಾವು ನಿರಾಕರಿಸಿದ 23 ಜನ ವಿರೋಧ ಪಕ್ಷದವರು ನಿಂತಾಗ ಅವಕಾಶ ಮಾಡಿಕೊಡುವುದಕ್ಕೆ ಈ ಸದನ ಮಾಡಿದ ನಿಯಮದಲ್ಲೇ ಅವಕಾಶವಿದೆ. ಆದ್ದರಿಂದ ದಯವಿಟ್ಟು ತಾವು 64(2)ರಲ್ಲಿ ಏನು ಇದೆ ಅದನ್ನೆ ನಾನು ಬೆಳಿಗ್ಗೆ ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದಿದ್ದೇನೆ. ಇದರ ಜೊತೆಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಅವರಿಗೆ ಮಾತನಾಡುವುದಕ್ಕೆ ಮನಸ್ಸು ಇಲ್ಲದಿದ್ದರೆ ನಮಗೆ ಅವಕಾಶ ಕೊಡಿ ಎಂದು ಒಂದು ಮಾತನ್ನು ಹೇಳಿದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ವಿರೋಧ ಪಕ್ಷದ ನಾಯಕರು ಆಗಿದ್ದಾಗ ಈ ಸದನದಲ್ಲಿ ಧರಣಿ ಮಾಡಿ ಇಡೀ ರಾತ್ರಿ ಕುಳಿತಿದ್ದು ಅದಕ್ಕೆ ಮಾನ್ಯ ಅಂದಿನ ಅಧ್ಯಕ್ಷರು ಅವರಿಗೆ ಊಟ, ಎಲ್ಲಾ ವ್ಯವಸ್ಥೆ ಮಾಡಿದ್ದು ಮರೆತು ಹೋಯಿತು ಎಂದು ಕಾಣುತ್ತದೆ. There is a saying: opposition knows how to rule the Government better than the Ruling party itself. ಆ ರೀತಿ ಅವರು ಇಲ್ಲಿ ಅವರೇನು ಸಲಹೆ ಮಾಡಿದ್ದರು ಅಲ್ಲಿಂದ ಅದನ್ನು ಅವರು ಮರೆತಂತೆ ಕಾಣುತ್ತಿದೆ. ಆದ್ದರಿಂದ ದಯವಿಟ್ಟು, ಅನೇಕ ಸದಸ್ಯರು ಹೇಳಿದ ಹಾಗೆ 60 ರಲ್ಲಿ ಅಗಲಿ 69 ರಲ್ಲಾಗಲಿ ಚರ್ಚೆ ಮಾಡಿದರೇನು? ಹಾಗಾದರೆ 60ರಲ್ಲಿ ಅವಕಾಶ ಕೊಟ್ಟರೇನು ತೊಂದರೆಯಾಗುತ್ತದೆ? 60ರಲ್ಲಿ ಮಾಡಿದರೇನು 69ರಲ್ಲಿ ಮಾಡಿದರೇನು ಎಂದು ತಾವು ಮತ್ತು ಸರ್ಕಾರ ಹೇಳುವಾಗ, 60ರಲ್ಲಿಯೇ ಅವಕಾಶ ಕೊಡಿ ಚರ್ಚೆಯನ್ನು ಮಾಡೋಣ. ತಾವು ಮತ್ತೊಂದು ಮಾತನ್ನು ಹೇಳಿದಿರಿ, ಎಲ್ಲರಿಗೂ ಚರ್ಚೆಯಲ್ಲಿ ಅವಕಾಶ ಕೊಡೋಣ. ಎಂದು ಹೇಳಿದಿರಿ, ವಿಷಯವನ್ನು ಡೈಲ್ಯೂಟ್ ಮಾಡಬಾರದು. ಇಶ್ಯೂ ಡೈಲೂಟ್ ಮಾಡಬಾರದೆಂದೇ ನಾವು ವಿರೋಧ ಪಕ್ಷದವರು ಮಾತ್ರ ಅವಕಾಶವನ್ನು ಕೇಳುತ್ತಿದ್ದೇವೆ. ಅದಕ್ಕೋಸ್ಕರವಾಗಿ ತಾವು ದಯಮಾಡಿ ತಮ್ಮ ತೀರ್ಮಾನವನ್ನು ಏನು ಮಾಡಿದ್ದೀರಿ

I have invoked Rule 64(2). ಅದರ ಬಗ್ಗೆ ರೂಲಿಂಗ್ ಕೊಡಿ. ಪುನಃ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ರೆಕಾರ್ಡ್ ಸ್ಟೇಟ್ ಇರಲಿ, ಅದಕ್ಕಾಗಿ ನಾನು ಎದ್ದು ನಿಂತೆ, ಏನೆಂದರೆ, ಮಾನ್ಯ ಜಯಪ್ರಕಾಶ್ ಹೆಗಡೆಯವರು ಮಾತನಾಡುವಾಗ ಸರ್ಕಾರ ಒಪ್ಪಿಕೊಂಡಿದ್ದರು ನೀವು ಅವಕಾಶ ಕೊಡುತ್ತಿಲ್ಲವೆಂದು ಹೇಳಿದರು. ಬೆಳಿಗ್ಗೆ ನಾನು ಹೇಳಿದ್ದನ್ನು ಉಲ್ಲೇಖಿಸತ್ತಾ ನಾವೂ ಕೂಡ ಒಪ್ಪಿಕೊಂಡಿದ್ದೇವೆ ನೀವು ಏಕೋ reservation ಇದೆ ಎನ್ನುವ ಮಾತನ್ನು ಹೇಳಿದರು. ಇದು ಎರಡು ಸತ್ಯಕ್ಕೆ ದೂರವಾದಂಥ ಮಾತುಗಳು, ನಾವು ಚರ್ಚೆಗೆ ಸಿದ್ಧರಿದ್ದೇವೆ. ಮುಕ್ತವಾದ ಚರ್ಚೆಗೆ ಅವಕಾಶ ಮಾಡಿಕೊಡಿ ಜೊತೆಗೆ ಎಲ್ಲರಿಗೂ ಅವಕಾಶ ಸಿಕ್ಕಲಿ ಎನ್ನುವ ಮಾತನ್ನು ಹೇಳಿದ್ದೇವೆ. Adjournment motion ನಲ್ಲಿ ಎಲ್ಲರಿಗೂ ಅವಕಾಶ ಸಿಕ್ಕುವುದಿಲ್ಲ. ಅವರೇ ಹೇಳಿದ ಹಾಗೆ it is a tinge of censuring the Government for which the Ruling Party members cannot be a party. ಈ restriction ಇರುವುದರಿಂದಲೇ ತಾವು ಕೊಟ್ಟಿರುವುದು ಸರಿ ಎಂಧು ನಾನು ಹೇಳಿದ್ದೇನೆ. ಆದರೆ ಅವರು ಹೇಳಿರತಕ್ಕಂಥದ್ದು, ಸರ್ಕಾರ ಒಪ್ಪಿಗೊಂಡುಬಿಟ್ಟಿದೆ ಎಂದೂ ಚರ್ಚೆಗೆ ಒಪ್ಪಿದೆ, ಈಗಲೂ ಈ ನಿಮಿಷದಲ್ಲಿ ಸಿದ್ಧರಿದ್ದೇವೆ. It is for them to decide. Let him not mis-quote me.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರವರು ಏನು ಹೇಳುತ್ತಿದ್ದಾರೆ. ರೂಲಿಂಗ್ ಪಾರ್ಟಿ ಶಾಸಕರಿಗೂ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳುತ್ತಿದ್ದಾರೆ. ನಾವು ಅವರು ಚರ್ಚೆ ಮಾಡುವ ಸಲುವಾಗಿ ನಿಲುವಳಿ ಸೂಚನೆ ತಂದಿಲ್ಲ. ತಮಗೆ ಅಧಿಕಾರ ಇದ್ದರೆ ಬೇಕಾದರೆ ಅವರಿಗೆ ಅವಕಾಶ ಕೊಡಿ, ರೂಲಿಂಗ್ ಪಾರ್ಟಿ ಶಾಸಕರು ಚರ್ಚೆ ಮಾಡುವ ಸಲುವಾಗಿ ನಾವು ನೋಟೀಸ್ ಕೊಟ್ಟಿಲ್ಲ. ಇವತ್ತೇನು ಬರಗಾಲ ಇದೆ ಜನರ ತೊಂದರೆಯಿದೆ ಜನರ ಭಾವನೆಗಳಿವೆ ಸರ್ಕಾರ ಏನು ತಪ್ಪು ಮಾಡುತ್ತಿದೆ ಅದನ್ನು ಎತ್ತಿ ತೋರಿಸುವ ಸಲುವಾಗಿ ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಸರ್ಕಾರದ ಒಪ್ಪು--ತಪ್ಪುಗಳನ್ನು ಹೇಳುವುದಕ್ಕೆ ತಂದಿರುವುದು. ಇವರಿಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡಬೇಕೆಂದು ನಾವು ತಮಗೆ ಅಧಿಕಾರ ಇದೆ ತಾವು ಮನಸ್ಸು ಮಾಡಿದರೆ ಅವರಿಗೂ ಚರ್ಚೆಗೆ ಅವಕಾಶ ಕೊಡಬಹುದು. ಆದರೆ ನಾಳೆ ಮಂತ್ರಿಗಳು ಉತ್ತರಿಸುತ್ತಾರೆ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾರೆ. ಸರ್ಕಾರದ ಪರವಾಗಿ ನಮ್ಮ ನಿಲುವಳಿ ಸೂಚನೆಗೆ ಅವರು ಉತ್ತರಿಸುತ್ತಾರೆ. ಅವರಿಗೆ ಅಧಿಕಾರ ಇದ್ದೇ ಇದೆ. ಆದರೆ ಎಲ್ಲರಿಗೂ ಅವಕಾಶ ಕೊಡುತ್ತೇನೆಂದರೆ ಅವರಿಗೆ 69ನಲ್ಲಿ ಕೊಡಬಹುದಾಗಿತ್ತಲ್ಲವೆ? ಅವರಿಗೆ ಬರಗಾಲದ ಬಗ್ಗೆ ಜನರ ಬಗ್ಗೆ ರಾಜ್ಯದ ಕಳಕಳಿಯ ಬಗ್ಗೆ ಅಷ್ಟೊಂದು ಕಾಳಜಿ ಇದ್ದರೆ ಆಡಳಿತ ಪಕ್ಷದ ಶಾಸಕರು 60 ಪ್ರಕಾರ ನೋಟಿಸ್ ಕೊಡಲಿ, ಇದಕ್ಕೆ ಯಾರು ಬೇಡವೆಂದು ಹೇಳುತ್ತಾರೆ. ಇದು ಯಾವುದು ಮಾಡದೇ ನಾವು ನಿಲುವಳಿ ಸೂಚನೆ ತೆಗೆದುಕೊಂಡು ಬಂದರೆ ಅದರಲ್ಲಿ ಚರ್ಚೆ ಮಾಡುತ್ತೇವೆ ನಿಮ್ಮ ಕೊಡೆಯಲ್ಲಿಯೇ ನಾವು ಸೇರುತ್ತೇವೆಂದು ಹೇಳುವುದು ಇದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ವಿರೋಧ ಪಕ್ಷದ ನಾಯಕರಿಗೆ ನಾವು ಹೇಳಿದ್ದು ಪಥ್ಯೆ ಆಗುವುದಿಲ್ಲ. ಕೇಂದ್ರ ಸರ್ಕಾರದ ಮಲತಾಯಿಯ ಧೋರಣೆ ಇದೆಯಲ್ಲಾ ಅದನ್ನು ನಾವು ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದಲೇ ನಾವು ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್ : ನೀವು ರೂಲ್ 69ನಲ್ಲಿ ತೆಗೆದುಕೊಂಡು ಬನ್ನಿ ಚರ್ಚೆ ಮಾಡಿ ನಿಮ್ಮ ಶಾಸಕರಿಗೆ ಹೇಳಿ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಇಲಾಖೆ ಸಚಿವರು) : ಆಂಧ್ರಪ್ರದೇಶಕ್ಕೆ ಎಷ್ಟು ಕೊಟ್ಟಿದ್ದಾರೆ. ಕರ್ನಾಟಕಕ್ಕೆ ಎಷ್ಟು ಕೊಟ್ಟಿದ್ದಾರೆ ಅಲ್ಲಿ ಗೊತ್ತಾಗುವುದಿಲ್ಲವೆ? ಎಷ್ಟೆಷ್ಟು ಧಾನ್ಯ ಕೊಟ್ಟಿದ್ದಾರೆಂಬುದು ಕಣ್ಣಿಗೆ ಕಾಣುತ್ತದೆ ಅಲ್ಲವೇ ಅದು ಸಾಕಾಲ್ಲವೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಹಿಂದೆ ಜಯಪ್ರಕಾಶ್ ಹೆಗಡೆಯವರು ನನ್ನ ಬಗ್ಗೆ ಪ್ರಸ್ತಾಪ ಮಾಡಿದರು. ನಾವು ಪ್ರತಿಪಕ್ಷದಲ್ಲಿದ್ದಾಗ Adjournment Motion ತಂದಾಗ ಅದನ್ನು ಕನ್‌ವರ್ಟ್ ಮಾಡಿ 69ರಲ್ಲಿ ಚರ್ಚೆಗೆ ಕೊಟ್ಟರು. ಬೇಕಾದರೆ ರೆಕಾರ್ಡ್ ತೆಗೆದು ನೋಡಿ. ನಾವು ಚರ್ಚೆಗೆ ತೆಗೆದುಕೊಂಡು ಚರ್ಚೆ ಮಾಡಿದೆವು ಅವರು ಉತ್ತರ ಕೊಟ್ಟರು, ಇದೇ ರೀತಿಯಾಗಿ ಬರಗಾಲದ ಪರಿಸ್ಥಿತಿ ಬಂದಾಗ ನಾವು Adjournment Motion ಕೊಟ್ಟಾಗ ಕೊನೆಗೆ ಸ್ಪೀಕರ್ ಅವರು ನಿಯಮ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ಅವಕಾಶ ಮಾಡಿ ಕೊಟ್ಟರು ನಾವು ಚರ್ಚೆ ಮಾಡಿದೆವು. ಉತ್ತರ ಕೊಟ್ಟರು, ನಂತರ ಮುಂದೇನು ಆಯಿತು ಆ ಮಾತು ಬೇರೆ. ಆದರೆ ಈಗಲೂ ಕೂಡ ಸ್ಪೀಕರ್ ಅವರು ತಮಗೆ ಅವಕಾಶ ಕೊಟ್ಟಿದ್ದಾರೆ. ಈಗ ನಮ್ಮ ಕಡೆಯಿಂದ ನಾವು ಹಠ ಹಿಡಿದಿಲ್ಲ. ನಾವು ಅವರ ಮೇಲೆ ಬಿದ್ದಿದ್ದೆವು, ಅವು ಹೇಳಿದರು ರೂಲ್ 69ರ ಮೇಲೆ ಚರ್ಚೆಗೆ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ, ನೀವು – ನಾವು ಅದಕ್ಕೆ ಒಪ್ಪಬೇಕು. ಆ ರೂಲಿಂಗ್‌ಗೆ ಒಪ್ಪಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು. ತಾವು ಈಗ ನಿಯಮ 69ರಲ್ಲಿ ಅವಕಾಶ ಕೊಟ್ಟಿದ್ದೀರಿ ಅದರ ಮೇಲೆ ಚರ್ಚೆ ಮಾಡಬಹುದು ಎಂದು ಹೇಳಿದರು. 1972ರಲ್ಲಿ ಮಾನ್ಯ ದೇವರಾಜ್ ಅರಸುರವರು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲೂ ಕೇವಲ 4–5 ಜಿಲ್ಲೆಗಳಲ್ಲಿ ಮಾತ್ರ ಬರಗಾಲದ ಪರಿಸ್ಥಿತಿ ಇತ್ತು. ಬಿಜಾಪುರ ಬಾಗಲಕೋಟೆ ಆ ಭಾಗದಲ್ಲಿ 5 ಜಿಲ್ಲೆಗಳಲ್ಲಿ ಮಾತ್ರ ಬರಗಾಲದ ಪರಿಸ್ಥಿತಿ ಇತ್ತು. ಸೀವಿಯೇರ್ drought ಪರಿಸ್ಥಿತಿ ಇತ್ತು. ಅಂಥ ಸಂದರ್ಭದಲ್ಲಿ 1972ರಲ್ಲಿ ವಿರೋಧ ಪಕ್ಷದಲ್ಲಿದ್ದಂಥವರು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದರು. ಆಗ ಮಾನ್ಯ ದೇವೇಗೌಡರವರು ವಿರೋಧ ಪಕ್ಷದ ನಾಯಕರು ಆಗಿದ್ದರು. ಆ ಸಂದರ್ಭದಲ್ಲಿ ನಿಲುವಳಿ ಸೂಚನೆಯ ಮೇಲೆ ಚರ್ಚೆ ಪ್ರಾರಂಭವಾಯಿತು. ಅದು ಯಾವ ಹಂತಕ್ಕೆ ಹೋಯಿತು ಎಂದರೆ, ಮಂತ್ರಿಗಳು ಉತ್ತರ ಕೊಡುವುದಕ್ಕೆ ಪ್ರಾರಂಭ ಮಾಡಿದರು. ಅಂಕಿ ಸಂಖ್ಯೆಗಳನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರು. ಎಲ್ಲಾ ಬಂದವು. ಆಮೇಲೆ ಎಲ್ಲಿಯವರೆಗೆ ಬಂತು ಎಂದರೆ, ಮಾನ್ಯ ದೇವರಾಜ್ ಅರಸು ರವರು ಆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಓನ್ ಮ್ಯಾನ್ ಕಮಿಟಿಯು ನೇಮಕವಾಯಿತು. ಆ ಕಮಿಟಿಯ ರಿಪೋರ್ಟ್ ಬಂತು, ಆ ಸಂದರ್ಭದಲ್ಲಿ ನಿರ್ಧಾರ ತೆಗೆದುಕೊಂಡು ಒಂದು ಕಮಿಟಿ ರಚಿಸುವ ತೀರ್ಮಾನವಾಯಿತು. ಅದರ ಮೇಲೆ ಒಂದು ಕಮಿಷನ್ ಆಯಿತು ನಂತರ ವರದಿಯೂ ಬಂತು. ಹೀಗಾಗಿ ಸನ್ಮಾನ್ಯ ಸಭಾಧ್ಯಕ್ಷರೇ ತಮಗೆ ಬೇಕಾದಷ್ಟು discretionary powers ಇದೆ. ಈ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಹೀಗಾಗಿ ನಾವು ತಮಗೆ ಮತ್ತೊಮ್ಮೆ ವಿನಂತಿ ಮಾಡುತ್ತೇವೆ. ದಯವಿಟ್ಟು ತಮ್ಮ ರೂಲಿಂಗ್ ಅನ್ನು ರೀಕನ್ಸಿಡರ್ ಮಾಡಬೇಕೆಂದು ವಿನಂತಿಸುತ್ತಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಏನೋ ಹೊಸದಾಗಿ ರೂಲ್ 60ರ ಪ್ರಕಾರ ಚರ್ಚೆಗೆ ಕೇಳುತ್ತಿದ್ದೇವೆ ಎನ್ನುವ ಭಾವನೆ ಬರುತ್ತಿದೆ. ಹಿಂದೆ ಏನು ನಡೆದಿಲ್ಲ ಎನ್ನುವ ತರಹ ಇದೆ. 1972ರಲ್ಲಿ ಚರ್ಚೆಗೆ ಬಂದಾಗ ಆಗಿನ ಕಾಲದಲ್ಲಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ದೇವರಾಜ್ ಅರಸುರವರು Straight away he agreed for a one Man Commission, without going to the discussion. He straight away agreed. I am requesting you....

ಶ್ರೀ ಡಿ.ಬಿ. ಚಂದ್ರೇಗೌಡ : ಅದಕ್ಕೆ ಡಿಮ್ಯಾಂಡೇ ಇಲ್ಲವಲ್ಲಾ.

ಶ್ರೀ ಬಿ. ಸೋಮಶೇಖರ್ : ಡಿಮ್ಯೊಂಡ್ ಇಡುವುದಕ್ಕೆ ನೀವು ಬಿಟ್ಟಿಲ್ಲ. If you want to prevent our demand, you can straight away announce a One Man Committee or Two Member Committee. if you want to avoid the embarrassment. ಇಲ್ಲಾಂದ್ರೆ ನಮಗೆ ಈ ರೂಪದಲ್ಲಿ ಅವಕಾಶ ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ನನಗೊಂದು ಆತಂಕ ಏನೆಂದರೆ, ತಾವು ಒಂದು ರೂಲಿಂಗ್ ಕೊಟ್ಟುಬಿಡಿ, ನಿಯಮ 60ರ ಒಳಗೆ ಯಾವುದು ಮಾಡಬಹುದು. 69ರ ಒಳಗೆ ಯಾವುದು ಮಾಡಬಹುದು. 69ರ ಒಳಗೆ ಯಾವುದು ಮಾಡಬಹುದು ಎನ್ನುವುದನ್ನು ಕ್ಲಿಯರ್ ಆಗಿ ಹೇಳಿಬಿಡಿ. ಆಗ ಅದರ ಪ್ರಕಾರ ಹೋಗಬಹುದು. ಇಲ್ಲದಿದ್ದರೆ ಅಲ್ಲಿ ಕ್ಲಿಯರ್ ಆಗಿ ಇರುವುದರಿಂದ ಕೊಡಬೇಕಾಗುತ್ತದೆ. ಹೀಗಿರುವಾಗ ತಾವು ಏಕೆ ಹೀಗೆ ಮಾಡುತ್ತಿರೋ ನನಗಂತೂ ಅರ್ಥವಾಗುತ್ತಿಲ್ಲ. ದಯಮಾಡಿ ನಮಗೆ 60ರಲ್ಲಿ ಅವಕಾಶ ಮಾಡಿಕೊಡಬೇಕು. ಹಾಗಾದರೆ ಇದಕ್ಕಿಂತ ನಿಯಮ 60ರಲ್ಲಿ ಎಂಥ ನಿಲುವಳಿ ಸೂಚನೆ ಬೇಕು? ನನ್ನ ಪ್ರಕಾರ ಇದಕ್ಕಿಂತ ಎಂಥ ಘಟನೆ ಬೇಕು? ಇಲ್ಲದೇ ಹೋದರೆ ಆ ನಿಯಮಾವಳಿಯನ್ನು ತೆಗೆದುಬಿಡಿ. ಒಂದು ಅಮೆಂಡ್‌ಮೆಂಟ್ ತಂದು ತೆಗೆದುಬಿಡಿ. ಆಗ ಈ ಗೊಂದಲ ತಪ್ಪುತ್ತದೆ. ಅದು ಪುಸ್ತಕದಲ್ಲಿ ಇರಬೇಕು ಎನ್ನುವುದಾದರೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಶ್ರೀ ಮಲ್ಲಿಕಾರ್ಜುನ ಖರ್ಗೆರವರು 7–8–95ರಲ್ಲಿ ರಾಜ್ಯದಲ್ಲಿ ತಲೆದೋರಿರುವ ತೀವ್ರ ಬರಗಾಲದ ಬಗ್ಗೆ Adjournment Motion move ಮಾಡಿದ್ದರು, ಅದನ್ನು ನಿಯಮ 69ಕ್ಕೆ ಪರಿವರ್ತಿಸಲಾಯಿತು.

4.00 ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 1972ರಲ್ಲಿ ಕೂಡ ಅಡ್ಜರ್ನ್‌ಮೆಂಟ್ ಮೋಷನ್ ಅಲ್ಲ. ಶ್ರೀ ಹುಚ್ಚ ಮಾಸ್ತಿಗೌಡರು ಆಫೀಸಿಯಲಿ ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿದ ಮೇಲೆ, ಸ್ವಲ್ಪ ಕೇಳಿ ನಾವು ಇದ್ದೆವು. ಆಗ ಮಾನ್ಯ ದೇವೇಗೌಡರು ಚರ್ಚೆ ಪ್ರಾರಂಭ ಮಾಡಿದರು. This is not Adjournment Motion and was not allowed.

+ ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಅಧ್ಯಕ್ಷರೆ, 1972ನೇ ಇಸ್ವಿಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಉಪನಾಯಕರು ಹೇಳಿದರಲ್ಲಾ ಆ ವಿಷಯವನ್ನೂ ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಆ ಪ್ರೌಢಿಮೆಯನ್ನು ಇವತ್ತು ಸರ್ಕಾರ ತೋರಿಸಿದರೆ ನಾವು ಒಪ್ಪುತ್ತೇವೆ. 1972ನೇ ಇಸ್ವಿಯಲ್ಲಿ 5 ಜಿಲ್ಲೆಯಲ್ಲಿ ಮಾತ್ರ ಬರ ಬಂದಿತ್ತು. ಬರ ಬಂದಾಗ ಏನು

ಮಾಡಿದರು ಎಂದರೆ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದರು. ದಯಮಾಡಿ ಮಾನ್ಯ ಎಸ್.ಎಸ್. ಪಾಟೀಲರೆ, ಇದು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಮುಖ್ಯವಾಗಿ ಇರುವಂಥ ವಿಷಯ ಇದು. 1972ನೇ ಇಸ್ವಿಯಲ್ಲಿ ಆಗ ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದರು. ಮಾನ್ಯ ದೇವೇಗೌಡರು ವಿರೋಧ ಪಕ್ಷದ ನಾಯಕರಾಗಿದ್ದಾಗ ಒಂದು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದರು. ಮಂಡನೆ ಮಾಡಿದ ಮೇಲೆ ಏನಾಯಿತು; ಚರ್ಚೆ ಪ್ರಾರಂಭವಾಯಿತು. ಪ್ರಿಲಿಮಿನರಿ ಸಬ್‌ಮಿಷನ್ ಆಗತಕ್ಕಂಥ ಸಂದರ್ಭದಲ್ಲಿ ನಾವು ಯಾವುದರಲ್ಲಿ ಚರ್ಚೆ ಮಾಡಬೇಕೆಂದು ಪ್ರಶ್ನೆ ಬಂದಾಗ ಆಗಿನ ಕಂದಾಯ ಸಚಿವರಾಗಿದ್ದಂಥ ಹುಚ್ಚಮಾಸ್ತಿಗೌಡರು ಯಾವ ಕೆಲಸವಾಗಿದೆ ಯಾವ ಕೆಲಸ ಆಗಬೇಕು ಎನ್ನತಕ್ಕಂಥ ಒಂದು ಸ್ಪೆಷಲ್ ರೆಸ್‌ಲ್ಯೂಷನ್‌ನ್ನು ಸರ್ಕಾರದಿಂದ ಮೂವ್ ಮಾಡಿದರು. ಅದರ ಮೇಲೆ substitute Resolution ಮೂವ್ ಆಯಿತು. ಆ ಚರ್ಚೆಯ ಸಂದರ್ಭದಲ್ಲಿ ಮಾನ್ಯ ಅರ್ಮುಗಂರವರ ಒಂದು ಕಮಿಟಿಯನ್ನು ಮಾಡಿ 10 ದಿವಸದಲ್ಲಿ ಒಂದು ರಿಪೋರ್ಟ್‌ನ್ನು ತರಿಸಿಕೊಂಡು 12ನೇ ದಿವಸದಲ್ಲಿ ಡಿಬೇಟ್‌ನ್ನು ಮಾಡಿದರು. ಬಹಳ ಪ್ರಾಢಿಮೆಯನ್ನು ಹೊಂದಿರತಕ್ಕ ಮಾನ್ಯ ಕಾಗೋಡು ತಿಮ್ಮಪ್ಪನವರು ಆಗ ವಿರೋಧ ಪಕ್ಷದ ಸ್ಥಾನದಲ್ಲಿದ್ದುಕೊಂಡು ಬಹಳ ಗಲಾಟೆಯನ್ನು ಮಾಡಿದ್ದು ಪ್ರೊಸೀಡಿಂಗ್ಸ್‌ನಲ್ಲಿದೆ. ಇದು ಆಗಲೇ ಬೇಕು. ಒನ್ ಮ್ಯಾನ್ ಕಮಿಷನ್ ಆಗಲೇಬೇಕು. 5–6 ಜನರು ಹೋಗಬೇಕೆನ್ನುವ ಬಗ್ಗೆ ಎಲ್ಲಾ ಚರ್ಚೆ ಆಗಿದೆ. ಈಗಲೂ ಸಹ ಆ ಹಿರಿಯ ಸಚಿವರು ಆ ಪ್ರೌಢಿಮೆಯನ್ನು ತೋರಿಸಲಿ ನೋಡೋಣ. ಅವರು ಸದನ ಸಮಿತಿಯನ್ನು ಮಾಡುತ್ತೇವೆಂದು ಹೇಳಲಿ, ಸದನ ಸಮಿತಿಯ ರಿಪೋರ್ಟ್ 10 ದಿವಸದಲ್ಲಿ ಬರಲಿ, 10 ದಿವಸದಲ್ಲಿ ಬಂದ ನಂತರ ಏನು ಲ್ಯಾಪ್ಸೆಸ್ ಇದೆ ಅದರ ಬಗ್ಗೆ ಚರ್ಚೆ ಮಾಡೋಣ. Vacuum ನಲ್ಲಿ ಚರ್ಚೆ ಮಾಡುವುದರ ಬದಲಾಗಿ Substitute resolution ಮೇಲೆ ಚರ್ಚೆ ಮಾಡೋಣ, ಅದರ ಬಗ್ಗೆ ಅವರು ಒಪ್ಪಿಕೊಳ್ಳಲಿ. ಅವರು ನೋಡೋಣ. ಆಗ ಮಾತನಾಡಿದವರು ಎಲ್ಲರೂ ಇವತ್ತು ಸಚಿವರಾಗಿ ಕುಳಿತುಕೊಂಡಿದ್ದಾರೆ. ವಿರೋಧ ಪಕ್ಷದಲ್ಲಿದ್ದವರು ಇವತ್ತು ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದಾರೆ. ಆ ಪ್ರೌಢಿಮೆಯನ್ನು ಅವರು ತೋರಿಸಲಿ. ಇವತ್ತಿನ ದಿವಸ ಅವರು ಅಷ್ಟೊಂದು ಕಾಳಜಿಯನ್ನು ತೋರಿಸಲಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, One man Commission ಮಾಡಿ ರಿಪೋರ್ಟ್ ಬಂತು. ಅವತ್ತು ಚರ್ಚೆಯಾಯಿತು. ಇವರು ಚರ್ಚೆಯನ್ನು ಮಾಡುತ್ತಿಲ್ಲ, ಏನು ವಿಷಯ ಎನ್ನುವುದು ಗೊತ್ತಾಗುತ್ತಿಲ್ಲ. ಸುಮ್ಮನೆ 60ನಲ್ಲಿ ಪರ್ಮಿಷನ್ ಕೊಡಿ ಎಂದರೆ, ವಿಷಯವನ್ನು ಹೇಳುತ್ತಲೇ ಇಲ್ಲ. You are not making any allegation. In the notice you have not made any allegation. You only sought permission to discuss under Rule 60. ಆದ್ದರಿಂದ ಏನು ಇವತ್ತು ಬಹಳ ಕ್ಲೀಯರಾಗಿ ಹೇಳುತ್ತೇನೆ. ಇವರು ರಾಜ್ಯದ ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಾಗಿಲ್ಲ. ನಿಯಮ 60ರಲ್ಲಿ ಮಾತನಾಡಿ ನೀವು ರಾಜ್ಯದ ಜನರಿಗೆ ಏನು ಪರಿಹಾರವನ್ನು ಕೊಡಿಸುತ್ತೀರಿ ಸ್ವಾಮಿ. ನಿಯಮ 60 ರಲ್ಲಿ ಚರ್ಚೆಯನ್ನು ಮಾಡಿ ಏನು ಪರಿಹಾರ ಕೊಡಿಸುತ್ತೀರಿ. ನೀವು ನಿಯಮ

60ರಲ್ಲಿ ಚರ್ಚೆಯನ್ನು ಮಾಡಿ, ಏನು ಆಗಬೇಕಾಗಿದೆ. ಏನು ಆಗಿರುವುದಿಲ್ಲ. ಏನು ತಪ್ಪಾಗಿದೆ ಸದನದ ಎಂಬುದನ್ನು ಮುಂದೆ ತಿಳಿಸಿ ಅದನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ. ಎಲ್ಲಾದರೂ ತಪ್ಪಿದ್ದರೆ ನಾವು ಒಪ್ಪಿಕೊಳ್ಳುತ್ತೇವೆ. Let us all try to rectify the mistakes. ಅದನ್ನು ಬಿಟ್ಟುಬಿಟ್ಟು ಯಾವ ನಿಯಮದಲ್ಲಿ ಚರ್ಚೆಯನ್ನು ಮಾಡಬೇಕೆಂದು ಒಂದು ದಿವಸ ಕಳೆದುಬಿಟ್ಟರೆ, What is that? I cannot understand ಇವತ್ತು ಜನರು ಅಷ್ಟೊಂದು ದಡ್ಡರಿಲ್ಲ. ಇದನ್ನೆಲ್ಲವನ್ನೂ ನೋಡಿಕೊಂಡು ಪೇಪರನ್ನು ಓದಿಕೊಂಡು ಬೇಷ್ ಎನ್ನುವುದಕ್ಕೆ ಜನರು ಅಷ್ಟೊಮದು ದಡ್ಡರಿಲ್ಲ. ಆದ್ದರಿಂದ ಜನರು ಬಹಳ ಬುದ್ಧಿವಂತರಿದ್ದಾರೆ. ಈಗಲೂ ಕಾಲ ಮಿಂಚಿಲ್ಲ. ನಿಯಮ 69ರಲ್ಲಿ ಮಾನ್ಯ ಸಭಾಧ್ಯಕ್ಷರು ತೀರ್ಪನ್ನು ನೀಡಿದ್ದಾರೆ ಅದನ್ನು ಒಪ್ಪಿಕೊಂಡು ಚರ್ಚೆಯನ್ನು ಪ್ರಾರಂಭ ಮಾಡಿ, ರಾಜ್ಯ ಸರ್ಕಾರ ತಪ್ಪು ಮಾಡಿದ್ದರೆ ಅದನ್ನು ತಿಳಿಸತಕ್ಕ ಪ್ರಯತ್ನವನ್ನು ಮಾಡತಕ್ಕದ್ದು, ರಾಜ್ಯದ ಜನರಿಗೆ ಸರಿಯಾದ ನ್ಯಾಯವನ್ನು ಕೊಡಿಸತಕ್ಕಂಥದ್ದು ಅದರ ದಿಸೆಯಲ್ಲಿ ನೀವು ಚರ್ಚೆಯನ್ನು ಮಾಡಿದರೆ ನಾನೂ ಕೂಡ ಧ್ವನಿಯನ್ನು ಗೂಡಿಸುತ್ತೇನೆ. ಆದ್ದರಿಂದ ಈ ** ನೀವು ಜನರನ್ನು ಸಮಾಧಾನ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಆಯಿತಲ್ಲಾ, ಮಾನ್ಯ ಮಲ್ಲಿಕಾರ್ಜುನರವರೆ ತಾವು ಕುಳಿತುಕೊಳ್ಳಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ಇವರಿಗೆ ನಿಯಮ 60ರಲ್ಲಿ ಅಲೌ ಮಾಡುವುದಕ್ಕೆ ಹೆದರಿಕೆ ಇದೆ. ಎಲ್ಲಿ ಓಟಿಂಗ್ ಆದರೆ ನಮ್ಮ ಸರ್ಕಾರ ಬಿದ್ದು ಹೋಗುತ್ತದೆ ಎನ್ನುವುದರ ಬಗ್ಗೆ ಅವರಿಗೆ ಪೂರ್ಣ ನಂಬಿಕೆ ಬಂದು ಬಿಟ್ಟಿದೆ. ಅದಕ್ಕಾಗಿ ನಿಯಮ 60ರಲ್ಲಿ ಅಲೋ ಮಾಡುವುದಕ್ಕೆ ಅವರು ಬಿಡುತ್ತಾ ಇಲ್ಲ. ಆಗಲೂ ಕೂಡ ಅದೇ ಚರ್ಚೆಯಾಗಿತ್ತು. ಆಗಲೂ ಕೂಡ 165 ಜನ ಮೆಂಬರ್ ಕಾಂಗ್ರೆಸ್ ಪಕ್ಷಲ್ಲಿದ್ದರು. ಅದೆಲ್ಲಾ ಪ್ರೊಸೀಡಿಂಗ್ಸ್‌ನಲ್ಲಿದೆ. 21 ವರ್ಷದ ನಂತರ ಅದೇ ಪರಿಸ್ಥಿತಿ ಬಂದಿದೆ. ಅದಕ್ಕಾಗಿ ನಿಯಮ 60ರಲ್ಲಿ ಒಪ್ಪಿಕೊಳ್ಳಿ ಚರ್ಚೆಯಾಗಲಿ. ಆಮೇಲೆ ಏನಾಗುತ್ತದೆಂಬುದನ್ನು ನೋಡಿಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇವತ್ತು ಹೆಲಿಕ್ಯಾಪ್ಟರಲ್ಲಿ ಬರಗಾಲ ನೋಡುವಂಥ ಪರಿಸ್ಥಿತಿಯಾಗಿದೆ.

ಅಧ್ಯಕ್ಷರು : ಎರಡು ಕಡೆಯಿಂದ ಮಾತನಾಡಿರುವುದನ್ನು ನಾವು 2–3 ಗಂಟೆಯವರೆಗೆ ಕೇಳಿರುತ್ತೇನೆ. ವಿಷಯ ಗೊತ್ತಾಗಿದೆ. ಮತ್ತೊಮ್ಮೆ ನಾನು ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರನ್ನೂ ಕೇಳಿಕೊಳ್ಳುತ್ತೇನೆ. ದಯವಿಟ್ಟು ನಿಯಮ 69 ನ್ನು ಅಲೋ ಮಾಡಿದ್ದೇನೆ. ದಯಮಾಡಿ ತಮ್ಮ ಸೀಟಿಗೆ ಹೋಗಿ ಮಾತನಾಡಿ ಏನೂ ತೊಂದರೆಯಾಗುವುದಿಲ್ಲ.

(ಗೊಂದಲ)

ಮಾನ್ಯ ಜಗದೀಶ್ ಶೆಟ್ಟರ್‌ವರೆ ದಯವಿಟ್ಟು ಸ್ಲೋಗನ್ಸ್‌ನ್ನು ನಿಲ್ಲಿಸಿ ಎಂದು ಹೇಳಬೇಕು.

(ಗೊಂದಲ)

ನಿಮ್ಮ ನಾಯಕರು ಮಾತನಾಡುವಾಗ ನಾನು ಕೇಳಿರುತ್ತೇನೆ. ಬೇರೆಯವರು ಕೇಳಿದ್ದಾರೆ. ನಾನು ಹಾಗೂ ಬೇರೆ ಸದಸ್ಯರು ಮಾತನಾಡುವಾಗ ಕೇಳಬೇಕಾಗುತ್ತದೆ. ತಾವು ದಯವಿಟ್ಟು ಕೇಳಬೇಕು. ಇದರಲ್ಲಿ ನಾನು ಏನೂ ರೆಫ್ಯೂಸ್ ಮಾಡಿಲ್ಲ. ಮೊದಲು ಪ್ರಶ್ನೋತ್ತರ ವೇಳೆ ನಡೆಯಬೇಕೆಂದು

** ಕೆಲವು ಪದಗಳನ್ನು ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಹೇಳಿರುವುದು ನಿಜ. ಅದನ್ನು ಸಸ್ಪೆಂಡ್ ಮಾಡಿದ್ದೇವೆ. ಸರ್ಕಾರದವರು ಒಪ್ಪಿದ್ದಾರೆ ಇನ್ನೇನು ಆಗಬೇಕು? ಚರ್ಚೆ ಮಾಡಿ ಎಂದರೆ ಆಗುವುದಿಲ್ಲವೆಂದರೆ ಇದರಲ್ಲಿ ಅರ್ಥವೇನಿದೆ? ಇದರಲ್ಲಿ ಅರ್ಥವೇ ಇಲ್ಲ. ಮಾನ್ಯ ಬೈರೇಗೌಡರೆ, ತಾವು ಏನು ಹೇಳಬೇಕು ಎಲ್ಲವನ್ನೂ ಹೇಳಿದ್ದೀರಿ. ಕೊನೆಯ ಸಾರಿ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಅದರ ಮೇಲೆ ತಮ್ಮಿಷ್ಟ, Then, I will take my own decision. that is all.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವ ವಿರೋಧಿ ವಿರೋಧ ಪಕ್ಷಗಳಿಗೆ ಸದನದಲ್ಲಿ ಚರ್ಚೆಯನ್ನು ಪ್ರಾರಂಭಿಸಲಾಗದೆ ಇರತಕ್ಕಂಥ ನಾಚಿಕೆಗೇಡು ವಿರೋಧ ಪಕ್ಷಗಳಿಗೆ...

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕೆಲವು ಪದಗಳು ಬಳಕೆಯಾಗಿರುತ್ತವೆ. ಅದು ರೆಕಾರ್ಡಿಗೆ ಹೋಗಿದೆ, ಮಾನ್ಯ ಸದಸ್ಯರಾದಂಥ ಮುದ್ದಹನುಮೇಗೌಡರು ಮಾತನಾಡುತ್ತಾ ವಿರೋಧ ಪಕ್ಷದವರ ಬಗ್ಗೆ ಬಳಸಿರುವ ಪದವನ್ನು ಕಡತದಿಂದ ತೆಗೆಯಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಆಯಿತು ಅಂತಹ ಅನ್‌ಪಾರ್ಲಿಮೆಂಟರಿ ವರ್ಡ್‌ಗಳನ್ನು ತೆಗೆಯಿರಿ. We will remove it. Don't worry.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಅನ್‌ಪಾರ್ಲಿಮೆಂಟರಿ ಪದಗಳು ಎಲ್ಲಿದೆ? It is not unparliamentry.

ಅಧ್ಯಕ್ಷರು : ಕೊನೆಯುಸಾರಿ ತಮಗೆಲ್ಲಾ ನಾಯಕರುಗಳಿಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ದಯವಿಟ್ಟು ನೀವು ಹೋಗಿ ಚರ್ಚೆಯನ್ನು ಪ್ರಾರಂಭ ಮಾಡಿ, otherwise, I will take my own decision. ನಾನು ಇವಾಗಲೇ ಹೇಳಿದ್ದೇನೆ. ದಯವಿಟ್ಟು ತಮಗೆ ಇನ್ನು 2-3 ದಿವಸ ಟೈಂ ಕೊಡುತ್ತೇನೆ.

(ಗೊಂದಲ)

Mr. Speaker : No. slogans please. ಆಯಿತು ಅವರು ಒಪ್ಪುತ್ತಿಲ್ಲ. ಮತ್ತೊಮ್ಮೆ ನನ್ನ ರೂಲಿಂಗ್ ಏನೆಂದರೆ, ನಿಯಮ 69ರಲ್ಲಿ ನಾನು ಅಲೋ ಮಾಡಿದ್ದೇನೆ. ಬೇರೆ ಸದಸ್ಯರು ಯಾರಾದರೂ ಮಾತನಾಡಬಹುದು.

(ಗೊಂದಲ)

ಅಧ್ಯಕ್ಷರು : ನಿಯಮ 69ರಲ್ಲಿ ಯಾರಾದರೂ ಮಾತನಾಡಬಹುದು. ಏಕೆಂದರೆ majority of the members, ಅವರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ನಿಮಗೆ ಇಷ್ಟವಿಲ್ಲದಿದ್ದರೆ, ಅವರಿಗೆ ಮಾತನಾಡಲು ಇಷ್ಟವಿದೆ. Let them talk. ಇಷ್ಟ ಇರುವವರು ನಿಯಮ 69ರ ಅಡಿಯಲ್ಲಿ ಮಾತನಾಡಲಿ. ಮಾನ್ಯ ಯಾವಗಲ್‌ರವರೇ, You please commence ನಿಯಮ 69ರ ಅಡಿಯಲ್ಲಿ ನಾನು ಅಲೋ ಮಾಡಿದ್ದೇನೆ. If any particular member wants to talk.

Don't disturb him. ನಿಮಗೆ ಇಷ್ಟವಿಲ್ಲದಿದ್ದರೆ ನೀವು ಸುಮ್ಮನೆ ಇರಬೇಕು. 4–5 ಸಲ ನಾವು ಸೇರಿಕೊಂಡಿದ್ದೇವೆ. ನಿಮಗೆ ಮಾತನಾಡಲು ಇಷ್ಟವಿಲ್ಲದಿದ್ದರೆ ನಾನು ಏನು ಮಾಡಲಿ?

(ಗೊಂದಲ)

+ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೆ, ಬಹುತೇಕ ಇಂತಹ ಬರಗಾಲ ಇತ್ತೀಚಿನ ವರ್ಷಗಳಲ್ಲಿ ಬಂದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಾಜ್ಯದ ಸುಮಾರು ಬಹುತೇಕ ತಾಲ್ಲೂಕುಗಳಲ್ಲಿ ಕೆಲವು ಕರಾವಳಿ ಪ್ರದೇಶವನ್ನು ಬಿಟ್ಟರೆ, ಇವತ್ತು ಮಳೆ ಎಲ್ಲಿಯೂ ಇರದ ಸನ್ನಿವೇಶವನ್ನು ತಾವು ನೋಡುತ್ತಿದ್ದೀರಿ. ಇದು ಮೊದಲನೆಯ ವರ್ಷವಲ್ಲ. ಸುಮಾರು ಮೂರು ವರ್ಷಗಳಿಂದ ಬರಗಾಲ ಬಿದ್ದಿದೆ. ಇವರಿಗೆ ಬಹುತೇಕ ಯಾರಿಗೂ ಕಳಕಳಿ ಇಲ್ಲ. ಇವರು ರಾಜಕೀಕರಣ ಮಾಡುತ್ತಿದ್ದಾರೆ. ಬರಗಾಲದಲ್ಲಿ ಸಹಿತ ರಾಜಕೀಯ, ಇವರ ಪರಿಸ್ಥಿತಿ ಬರಗಾಲಕ್ಕೂ ರಾಜಕೀಯ. ಇವರೆಲ್ಲಾ ಸದಸ್ಯರುಗಳು ಅಧ್ಯಕ್ಷರಾಗಿರುತ್ತಾರೆ ಮಾನ್ಯ ಅಧ್ಯಕ್ಷರೆ. ಅವರು ಮಾಡಿರುವಂಥ ಕೆಲಸಗಳನ್ನು ಹೇಳಬಹುದು. ಸರ್ಕಾರದಲ್ಲಿರುವ ನ್ಯೂನತೆಗಳನ್ನು ಹೇಳಬಹುದು, ಬಹುತೇಕ ಅವರಿಗೆ ಮನಸ್ಸಿಲ್ಲ. ಅವರಿಗೆ ಬಹುತೇಕ ಏನೋ ಅಳಕು ಇದೆ. ಇದೆಲ್ಲವನ್ನೂ ಮಾಡುವುದಕ್ಕೆ ಹೋದರೆ ತಮ್ಮ ಮೇಲೆ ಬರಬಹುದು. ಕೇಂದ್ರ ಸರ್ಕಾರದವರು ಕಾಳು ಕೊಟ್ಟಿಲ್ಲ. ಕೊಟ್ಟಿದ್ದರೆ ಅದು ಕಡಿಮೆಯಾಗಿದೆ. ಹಣ ನೀಡಿರುವುದಿಲ್ಲ. ಕರ್ನಾಟಕದ ಬಗ್ಗೆ ಅವರು ಮಲತಾಯಿ ಧೋರಣೆಯನ್ನು ಮಾಡಿದ್ದಾರೆ ಎನ್ನುವ ಬಹುತೇಕ ಅಂಜಿಕೆ ಇದನ್ನು ಅವರಿಂದ ಮಾಡಿಸುತ್ತಿದೆ. ಹಾಗಾಗಿ ಆ ಒಂದು ಪರಿಸ್ಥಿತಿಯನ್ನು ಎದುರಿಸಲಿಕ್ಕೆ ವಿರೋಧ ಪಕ್ಷದವರು ಸಹಕಾರ ಮಾಡುತ್ತಾರೆ. ಏಕೆಂದರೆ ಅವರು ನಗುತ್ತಿದ್ದಾರೆ. ಬರಗಾಲದ ಬಗ್ಗೆ ನೋಡಿ ಇವರು ನಗುತ್ತಿದ್ದಾರೋ ಗೊತ್ತಿಲ್ಲ. ಬರಗಾಲದಲ್ಲಿ ಜನರ ಸಮಸ್ಯೆಗಳನ್ನು ನೋಡಿ ನಗುತ್ತಿದ್ದಾರೋ ಗೊತ್ತಿಲ್ಲ. ಅವರಿಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ನಾನು ಭಾವಿಸುತ್ತೇನೆ. ಇವತ್ತು ಪ್ರಕೃತಿ ವಿಕೋಪ ಕರ್ನಾಟಕ ರಾಜ್ಯದ ಮಟ್ಟಿಗೆ ಅಲ್ಲದೆ ಇದು ಅನೇಕ ರಾಜ್ಯಗಳಲ್ಲೂ ಇದೆ. ಅದರಲ್ಲಿ ವಿಶೇಷವಾಗಿ ಉತ್ತರಕರ್ನಾಟಕದ ಜಿಲ್ಲೆಗಳಲ್ಲಿ ಯಾವಾಗಲೂ ಈ ರೀತಿ ಬರ ಕಾಣದಂತಹ ಬಗ್ಗೆ ಹಿಂದೆ ಹೇಳುತ್ತಿದ್ದರು. 1910ರಲ್ಲಿ ಇದ್ದಂತಹ ಬರ ಇರಬಹುದು. 1947ರ ಬರ ಇರಬಹುದು. 1973ರಲ್ಲಿ ಆದಂತಹ ಬರ ಇರಬಹುದು. ಈ ಬರಗಾಲವನ್ನು ಹೋಲಿಸಿದರೆ ಬಹುತೇಕ ಈ ಬರಗಾಲವು ಯಾವುದೇ ದೃಷ್ಟಿಯಿಂದ ಕಡಿಮೆಯಾದುದ್ದಲ್ಲ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಇವತ್ತು ಅಂತಹ ಬರಗಾಲದಿಂದ ರಾಜ್ಯ ಸರ್ಕಾರ ಬಹಳ ಯಶಸ್ವಿಯಾಗಿ ಎದುರಿಸಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಮಸ್ಯೆಗಳು ಇದೆ, ರಾಜ್ಯದ ಬಹುತೇಕ 100ಕ್ಕೆ 80 ಪಾಲು ಜನಸಂಖ್ಯೆಗೆ ಸಂಬಂಧಪಟ್ಟಂತಹ ಈ ಒಂದು ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಒಂದು ಸರ್ಕಾರ ಸೇರಿದರೆ ಸಾಧ್ಯವಾಗುವುದಿಲ್ಲ. ಬಹುತೇಕ ಕೇಂದ್ರ ಸರ್ಕಾರ ಬಹಳ ದೊಡ್ಡ ಔದಾರ್ಯವನ್ನು ತೋರಬೇಕು.

ಅಧ್ಯಕ್ಷರು : ಮಾನ್ಯ ಯಾವಗಲ್‌ರವರೆ, ತಾವು ಒಂದು ನಿಮಿಷ ಕೇಳಿ. ಈಗ ಮೇಲ್ಮನೆಯಲ್ಲಿ ನಮ್ಮ 15: ವಿಷಯ ಸಮಿತಿಗಳ ರಿಪೋರ್ಟ್‌ನ್ನು ಲೇ ಮಾಡಿದ್ದಾರೆ. ಅಲ್ಲಿ ಮಾಡಿದ್ದು ಇಲ್ಲಿ ನಾವು ಮಾಡದೇ ಇದ್ದರೆ ಟೆಕ್ನಿಕಲ್ ಆಗಿ ನಮಗೆ ತೊಂದರೆಯಾಗುತ್ತದೆ. ಅದಕ್ಕೋಸ್ಕರ ವಿಷಯ ಸಮಿತಿಗಳ ವರದಿಗಳೊಪ್ಪಿಸುವುದು ಎಂದು ಇದೆ.